ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 20 | ಮೇ 14-20, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಲಾಲ್ ಸಲಾಂ
ಸುಭಾಷ್ ಕೊಪ್ಪಿಕರ್






'ಮುಧೋಳ' ಮಟ್ಟಕ್ಕೆ ಇಳಿದ ಬಿಜೆಪಿ ಸೋಲಿಸಿ

ಕರ್ನಾಟಕ ಜನಮತ 2018

ವಿಧಾನಸಭೆಯಲ್ಲಿ ಕೆಂಬಾವುಟ ಹಾರಲಿ





ಮಾರ್ಕ್ಸ್-200 ಆಚರಣೆ ಆರಂಭ

ಬುಲೆಟ್ ಟ್ರೈನಿಗೆ 50 ಸಾವಿರ ಆದಿವಾಸಿಗಳ ಪ್ರತಿಭಟನೆ



ಮೋದಿ ಸರ್ಕಾರ 4 ವರ್ಷ: ಮೇ 23-24 ರಂದು ಹಲ್ಲಾ ಬೋಲ್ ರ್‍ಯಾಲಿ



ಕೊರಿಯಾ ಶಾಂತಿ : ಕಿಮ್-ಮೂನ್ ಘೋಷಣೆ

ವಾಲ್‌ಮಾರ್ಟ್ ಹಿಂಬಾಗಿಲ ಭಾರತ ಪ್ರವೇಶಕ್ಕೆ ಅವಕಾಶ ‘ಮೇಕ್ ಇನ್ ಇಂಡಿಯಾ’, ‘ಮೇಕ್ ಫಾರ್ ಇಂಡಿಯಾ’ ಆಗಿದೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಅಂತರ್ರಾಷ್ಟ್ರೀಯ ಇ-ವಾಣಿಜ್ಯದ ಅಂದರೆ ಇಂಟರ್ನೆಟ್ ಮೂಲಕ ಚಿಲ್ಲರೆ ಮಾರಾಟದ ದೈತ್ಯ ಕಂಪನಿ ವಾಲ್ ಮಾರ್ಟ್ ಭಾರತದ ಇಂತಹ ಚಿಲ್ಲರೆ ಮಾರಾಟದ ಕಂಪನಿ ಫ್ಲಿಪ್‌ಕಾರ್ಟ್‌ನ್ನು 16 ಬಿಲಿಯ ಡಾಲರುಗಳಿಗೆ ಸ್ವಾಧೀನ ಪಡಿಸಿಕೊಂಡಿರುವುದು ಭಾರತದ ಬೃಹತ್ ಗಾತ್ರದ ಬಹುಕೋಟಿ ಬೆಲೆಬಾಳುವ ಚಿಲ್ಲರೆ ವ್ಯಾಪಾರ ವಲಯದೊಳಕ್ಕೆ ವಿದೇಶಿ ಬಂಡವಾಳ ಹಿಂಬಾಗಿಲಿನಿಂದ ಬರಲು ಅನುಕೂಲ ಮಾಡಿಕೊಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸುದ್ದಿಗೆ ಪ್ರತಿಕ್ರಿಯಿಸುತ್ತ ಹೇಳಿದೆ.

ಭಾರತದ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದೊಳಗೆ ಎಫ್‌ಡಿಐ ಗೆ ಅವಕಾಶ ನೀಡುವುದನ್ನು ಎಡಪಕ್ಷಗಳು ಬಲವಾಗಿ ವಿರೋಧಿಸಿಕೊಂಡು ಬಂದಿವೆ. ಇದು ನೇರವಾಗಿ ಸುಮಾರು ನಾಲ್ಕು ಕೋಟಿ ಜನಗಳಿಗೆ ಉದ್ಯೋಗ ಒದಗಿಸಿರುವ ಭಾರತದ ಚಿಲ್ಲರೆ ವ್ಯಾಪಾರ ವಲಯವನ್ನು ಸಂಪೂರ್ಣವಾಗಿ ನಾಶಮಾಡುತ್ತದೆ ಎಂಬುದೇ ಈ ವಿರೋಧಕ್ಕೆ ಕಾರಣ. ನಮ್ಮ ಜನಸಂಖ್ಯೆಯ ಐದನೇ ಒಂದು ಭಾಗ ಈ ವಲಯದಲ್ಲಿನ ಆಧಾಯಗಳನ್ನು ಅವಲಂಬಿಸಿದೆ. **ಪ್ರತಿಪಕ್ಷವಾಗಿದ್ದಾಗ ಬಿಜೆಪಿ ಕೂಡ ಈ ನಡೆಯನ್ನು ವಿರೋಧಿಸಿತ್ತು. ಎಂಬ ಸಂಗತಿಯತ್ತವೂ ಸಿಪಿಐ(ಎಂ) ಗಮನ ಸೆಳೆದಿದೆ.**

ವಾಲ್‌ಮಾರ್ಟ್ ತಮ್ಮ ಸರಕುಗಳನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಿಂದ ತರಿಸಿಕೊಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಈಗ ಇವನ್ನು ಭಾರತದಲ್ಲೂ ಮಾರಲಾಗುತ್ತದೆ. ಈ ಮೂಲಕ ನಮ್ಮ ಸಣ್ಣ ಮತ್ತು ಮಧ್ಯಮ ವಲಯಗಳೂ ನಾಶಗೊಳ್ಳುತ್ತವೆ. ಇವೆರಡು ಕೃಷಿ ವಲಯದ ನಂತರ ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವ ವಲಯಗಳು.

ಮೋದಿ ಸರಕಾರ ಎಲ್ಲ ಆಶ್ವಾಸನೆಗಳಲ್ಲೂ ಜನಗಳಿಗೆ ಬಗೆಯುತ್ತಿರುವ ನಗ್ನ ವಿಶ್ವಾಸಘಾತ ಈ ಕೈವಶದೊಂದಿಗೆ ಮತ್ತೊಮ್ಮೆ ಬಯಲಾಗಿದೆ, ಮೇಕ್ ಇನ್ ಇಂಡಿಯಾ ಈಗ ಮೇಕ್ ಫಾರ್ ಇಂಡಿಯಾ ಆಗಿದೆ, ಅಂದರೆ ಭಾರತದಲ್ಲಿ ತಯಾರಿಸುವ ಬದಲು ಭಾರತಕ್ಕೆ ತಯಾರಿ ಎಂದಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಲೇವಡಿ ಮಾಡಿದೆ.

ಮೋದಿ ಸರಕಾರ ವಾಲ್‌ಮಾರ್ಟ್‌ಗೆ ಫ್ಲಿಫ್‌ಕಾರ್ಟನ್ನು ಕೈವಶ ಮಾಡಿಕೊಳ್ಳಲು ಮಂಜೂರಾತಿ ನೀಡಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇಂತಹ ಸ್ವಾಧೀನಗಳು ನಮ್ಮ ದೇಶದ ಮತ್ತು ಜನಗಳ ಹಿತಗಳಿಗೆ ವಿರುದ್ಧವಾದದ್ದು, ಇದಕ್ಕೆ ಅವಕಾಶ ನೀಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಧೂಳು ತುಂಬಿದ ಬಿರುಗಾಳಿ, ಭಾರೀಮಳೆ ಸಾವು-ನೋವುಗಳಿಗೆ ಸೂಕ್ತ ಪರಿಹಾರ ಕ್ರಮಗಳು: ಎಐಕೆಎಸ್ ಆಗ್ರಹ

ಉತ್ತರಪ್ರದೇಶ ಮತ್ತು ರಾಜಸ್ಥಾನದಲ್ಲಿ ಧೂಳಿನ ಬಿರುಗಾಳಿ ಮತ್ತು ಭಾರೀ ಮಳೆಯಿಂದ ನೂರಕ್ಕೂ ಹೆಚ್ಚು ಮಂದಿಯ ಸಾವು ಸಂಭವಿಸಿರುವ ಬಗ್ಗೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ತೀವ್ರ ದುಃಖ ಮತ್ತು ಸಂತಾಪವನ್ನು ವ್ಯಕ್ತಪಡಿಸಿದೆ. ಈ ಭಾರೀ ನೈಸರ್ಗಿಕ ಅನಾಹುತದಿಂದ ನೂರಾರು ಜನಗಳು ಗಾಯಗೊಂಡಿದ್ದಾರೆ, ಜಾನುವಾರು ಸಂಪತ್ತು ಕಳೆದು ಹೋಗಿದೆ. ಉತ್ತರಪ್ರದೇಶದ ಆಗ್ರಾ ಮತ್ತು ರಾಜಸ್ಥಾನದ ಭರತ್‌ಪುರ್ ಭಾರೀ ನಷ್ಟ ಅನುಭವಿಸಿರುವ ಜಿಲ್ಲೆಗಳು ಇಲ್ಲಿ ಅನುಕ್ರಮವಾಗಿ 43 ಮತ್ತು 19 ಸಾವುಗಳು ವರದಿಯಾಗಿವೆ. ವಿದ್ಯುತ್ ಸಂಪರ್ಕ ಕಡಿದು ಹೋಗಿದೆ, ತರಕಾರಿ ಬೆಳೆಯುವವರು ಮತ್ತು ಡೈರಿ ರೈತರಿಗೆ ಅತಿ ಹೆಚ್ಚು ಹಾನಿಯಾಗಿದೆ. ಸಂಬಂಧಪಟ್ಟ ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರ ಈ ನೈಸರ್ಗಿಕ ವಿಕೋಪದಿಂದಾಗಿ ಪೀಡಿತರಾದವರಿಗೆ ತುರ್ತಾಗಿ ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು, ಪುಕ್ಕಟೆ ಆಹಾರ ಮತ್ತು ಔಷಧಿಗಳೊಂದಿಗೆ ತಾತ್ಕಾಲಿಕ ಶಿಬಿರಗಳನ್ನು ತೆರೆಯಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಇದರಿಂದ ರೈತರಿಗೆ ಏನೇನು ನಷ್ಟವಾಗಿದೆ ಎಂಬುದರ ಸರ್ವೇಯನ್ನು ನಡೆಸಿ ಪೀಡಿತ ಕುಟುಂಬಗಳಿಗೆ ಸರಿಯಾದ ಪರಿಹಾರ ಸಿಗುವಂತೆ ಮಾಡಬೇಕು, ತಮ್ಮ ಸದಸ್ಯರನ್ನು ಕಳಕೊಂಡ ಕುಟುಂಬಗಳಿಗೆ 10 ಲಕ್ಷ ರೂ. ಮತ್ತು ಪ್ರತಿ ಜಾನುವಾರು ನಷ್ಟಕ್ಕೆ 50,000 ರೂ. ಪರಿಹಾರ ಒದಗಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಪೀಡಿತ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಬಿಲ್ ಪಾವತಿ ವಿನಾಯ್ತಿ ಮತ್ತು ಕೃಷಿ ಸಾಲಗಳ ವಸೂಲಾತಿಗೆ ಅವಧಿ ವಿಸ್ತರಣೆ ಕೊಡಬೇಕು ಎಂದೂ ಆಗ್ರಹಿಸಿರುವ ಎಐಕೆಎಸ್ ಉತ್ತರಪ್ರದೇಶ ಮತ್ತು ರಾಜಸ್ಥಾನದ ಎಐಕೆಎಸ್ ಕಾರ್ಯಕರ್ತರು ಪೀಡಿತ ಜನಗಳ ಬಳಿಗೆ ಹೋಗಿ ಅಗತ್ಯ ನೆರವು ಒದಗಿಸಬೇಕು ಎಂದು ಕರೆ ನೀಡಿದೆ.

“ಇರಾನ್ ಒಪ್ಪಂದದಿಂದ ಹೊರಬರುವ ಟ್ರಂಪ್ ಕ್ರಮ ಬೇಜವಾಬ್ದಾರಿತನ”

ಇದನ್ನು ಅನುಮೋದಿಸದಿರಲು ಮೋದಿ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಟ್ರಂಪ್ ಇರಾನಿನೊಡನೆ ಪರಮಾಣು ಒಪ್ಪಂದದಿಂದ ತಮ್ಮ ದೇಶ ಹೊರ ಬರುವುದಾಗಿ ಪ್ರಕಟಿಸಿದ್ದಾರೆ. ಇದೊಂದು ಕಾರಣವಿಲ್ಲದ ಮತ್ತು ಬೇಜವಾಬ್ದಾರಿ ಹೆಜ್ಜೆ, ಇದನ್ನು ಬಲವಾಗಿ ಖಂಡಿಸಬೇಕಾಗಿದೆ ಎಂದು ಸಿಪಿಐಎಂ) ಪೊಲಿಟ್‌ಬ್ಯುರೊ ಹೇಳಿದೆ. ಇರಾನ್ ಮೇಲೆ ನಿರ್ಬಂಧಗಳನ್ನು ಹೇರುವ ಬೆದರಿಕೆ ಕಾನೂನುಬಾಹಿರವಾಗಿದ್ದು, ಇದನ್ನು ವಿಶ್ವಸಂಸ್ಥೆ ಖಡಾಖಂಡಿತವಾಗಿ ವಿರೋಧಿಸಬೇಕು ಎಂದೂ ಸಿಪಿಐ(ಎಂ) ಹೇಳಿದೆ.

2015ರಲ್ಲಿ ಇರಾನ್ ಮತ್ತು ಆರು ದೇಶಗಳ ನಡುವೆ ನಡೆದ ಪರಮಾಣು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಅಮೆರಿಕ, ರಷ್ಯಾ, ಚೀನಾ, ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿ ಈ ಆರು ದೇಶಗಳು. ಈ ಒಪ್ಪಂದ ಇದುವರೆಗೆ ಚೆನ್ನಾಗಿ ಕೆಲಸ ಮಾಡಿದೆ. ಇತ್ತೀಚೆಗೆ ಫೆಬ್ರುವರಿ 2018ರಲ್ಲಿ ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆಂಸಿ ಇರಾನ್ ಈ ಒಪ್ಪಂದದ ಶರತ್ತುಗಳನ್ನು ಪಾಲಿಸುತ್ತಿದೆ ಎಂದು ಹೇಳಿತ್ತು. ಈ ಒಪ್ಪಂದದಿಂದ ಹಿಂದೆ ಸರಿಯುವ ಮೂಲಕ ಟ್ರಂಪ್ ಇರಾನ್ ವಿರುದ್ಧ ಒಂದು ಹೊಸ ಆಕ್ರಮಣಕೋರ ಧೋರಣೆಯ ಸಂಕೇತ ನೀಡಿದ್ದಾರೆ. ಇದು ಪಶ್ಚಿಮ ಏಶ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆ ಒಡ್ಡುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಟ್ರಂಪ್‌ರವರ ಕ್ರಮವನ್ನು ಮಂಜೂರು ಮಾಡದ ಅಮೆರಿಕಾದ ಯುರೋಪಿಯನ್ ಮಿತ್ರರು ಈ ಒಪ್ಪಂದವನ್ನು ಉಳಿಸಿಕೊಳ್ಳಲು ರಷ್ಯಾ ಮತ್ತು ಚೀನಾದೊಂದಿಗೆ ಸಹಕರಿಸಬೇಕು ಎಂದಿರುವ ಪೊಲಿಟ್‌ಬ್ಯುರೊ ಮೋದಿ ಸರಕಾರ ಅಮೆರಿಕ ಸಂಯುಕ್ತ ಸಂಸ್ಥಾನಗಳ ಈ ಕ್ರಮಕ್ಕೆ ಭಾರತದ ಮಂಜೂರಾತಿ ಇಲ್ಲ ಎಂದು ಸ್ಪಷ್ಟಪಡಿಸಬೇಕು ಎಂದು ಕರೆ ನೀಡಿದೆ.

ಇರಾನಿನ ವಿರುದ್ಧ ಯಾವುದೇ ನಿರ್ಬಂಧಗಳನ್ನು ಭಾರತ ಬೆಂಬಲಿಸುವುದಿಲ್ಲ, ಇರಾನಿನೊಂದಿಗೆ ಪೂರ್ಣ ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳನ್ನು ಮುಂದುವರೆಸುತ್ತದೆ, ಅಮೆರಿಕಾದ ಒತ್ತಡಗಳಿಗೆ ಬಲಿ ಬೀಳುವುದಿಲ್ಲ ಎಂಬುದನ್ನು ಮೋದಿ ಸರಕಾರ ಸ್ಪಷ್ಟಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

“ಎನ್‌ಡಿಎ ಸರಕಾರದ 4 ವರ್ಷ, ಬಯಲಿಗೆಳೆಯಿರಿ, ಪ್ರತಿಭಟಿಸಿರಿ”

ಮೇ 16 ರಿಂದ ದೇಶಾದ್ಯಂತ ಜನಾಧಿಕಾರ ಆಂದೋಲನದ ದೇಶವ್ಯಾಪಿ ಪ್ರಚಾರಾಂದೋಲನ ಮೇ 23 ರಂದು 24 ರಾಜ್ಯ ರಾಜಧಾನಿಗಳಲ್ಲಿ ‘ಹಲ್ಲಾ ಬೋಲ್’ ರ್‍ಯಾಲಿಗಳು

ನೂರಕ್ಕೂ ಹೆಚ್ಚು ಪ್ರಗತಿಪರ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಾಗಿರುವ ‘ಜನ್ ಏಕತಾ ಜನ್ ಅಧಿಕಾರ ಆಂದೋಲನ್’(ಜೆಇಜೆಎ) ಮೇ 16ರಿಂದ 22 ರ ವರೆಗೆ ‘**ಎನ್‌ಡಿಎ ಸರ್ಕಾರ್‌ಕೀ ಚಾರ್ ಸಾಲ್, ಪೋಲ್ ಖೋಲ್, ಹಲ್ಲಾ ಬೋಲ್**’ ರಾಷ್ಟ್ರವ್ಯಾಪಿ ಪ್ರಚಾರಾಂದೋಲನವನ್ನು ನಡೆಸುವುದಾಗಿ ಪ್ರಕಟಿಸಿದೆ.

ದೇಶದ ಪ್ರತಿ ನಾಗರಿಕರನ್ನು ತಲುಪಿ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಕೋಮುವಾದಿ ಮತ್ತು ಜನ-ವಿರೋಧಿ ಅಜೆಂಡಾವನ್ನು ಬಯಲಿಗೆಳೆಯುವುದು ಇದರ ಉದ್ದೇಶ, “ಧೋರಣೆಗಳನ್ನು ಬದಲಿಸಿ, ಇಲ್ಲವಾದರೆ ಜನತೆ ಸರಕಾರವನ್ನು ಬದಲಿಸುತ್ತಾರೆ” ಎಂಬ ಘೋಷಣೆಯೊಂದಿಗೆ ಮನೆ-ಮನೆ ತಲುಪಲಾಗುವುದು ಎಂದು ಅವರ ಹೇಳಿಕೆ ತಿಳಿಸಿದೆ.

ಪ್ರಚಾರಾಂದೋಲನದ ಕೊನೆಯಲ್ಲಿ, ಮೇ 23ರಂದು 24 ರಾಜ್ಯ ರಾಜಧಾನಿಗಳಲ್ಲಿ ಈ ಸರಕಾರದ ಜನ-ವಿರೋಧಿ ಧೋರಣೆಗಳ ವಿರುದ್ಧ ಸಮರ ಸಾರುವ ‘ಹಲ್ಲಾಬೋಲ್’ ರ್‍ಯಾಲಿಗಳಲ್ಲಿ ಲಕ್ಷಾಂತರ ಜನ ಭಾಗವಹಿಸಲಿದ್ದಾರೆ ಎಂದು ಜೆಇಜೆಎ ಹೇಳಿಕೆ ತಿಳಿಸಿದೆ. **ಇದು ಎನ್‌ಡಿಎ ಸರಕಾರದ ಅಂತ್ಯದ ಆರಂಭವಷ್ಟೇ ಅಲ್ಲ, ಒಂದು ಜನವಾದೀ, ಜಾತ್ಯತೀತ, ಸಮತ್ವದ ಆಧುನಿಕ ಭಾರತವನ್ನು ಕಟ್ಟುವ ಗುರಿಸಾಧನೆಗೆ ಒಂದು ದೇಶವ್ಯಾಪಿ ಆಂದೋಲನದ ಆರಂಭ ಕೂಡ** ಎಂದು ಈ ಹೇಳಿಕೆ ವರ್ಣಿಸಿದೆ.

ಈ ಪ್ರಚಾರಾಂದೋಲನದಲ್ಲಿ ಜೆಇಜೆಎ ಬಿಜೆಪಿ/ಎನ್‌ಡಿಎ ಸರಕಾರದ ಈಡೇರಿಸದ ಆಶ್ವಾಸನೆಗಳನ್ನು, ಜತೆಗೆ ಮೋದಿ ಸರಕಾರದ ಕೋಮುವಾದಿ ವಿಭಜನಕಾರೀ ಅಜೆಂಡಾವನ್ನು ಎತ್ತಿ ತೋರಲಾಗುವುದು ಎಂದಿರುವ ಹೇಳಿಕೆ ಈ ಕೆಳಗಿನ ವಿಷಯಗಳನ್ನು ಬಯಲಿಗೆಳೆಯಲಾಗುವುದು ಎಂದು ಹೇಳಿದೆ:

* ಅಚ್ಛೇ ದಿನ್(ಒಳ್ಳೆಯ ದಿನಗಳು) ಮತ್ತು ‘ಸಬ್ ಕಾ ವಿಕಾಸ್’(ಎಲ್ಲರ ಅಭಿವೃದ್ಧಿ)ಯ ಆಶ್ವಾಸನೆ ನೀಡಿದ ಆಳ್ವಿಕೆಯಲ್ಲಿ ಇವು ದಕ್ಕಿದ್ದು ಕೆಲವೇ ಆರಿಸಿದ ಕಾರ್ಪೊರೇಟ್‌ಗಳಿಗೆ ಮತ್ತು ಅವರ ಚಮಚಾಗಳಿಗೆ ಮಾತ್ರ.
* ಎರಡು ಕೋಟಿ ಉದ್ಯೋಗಗಳ ಆಶ್ವಾಸನೆಯ ಬದಲಾಗಿ ಎರಡು ಲಕ್ಷ ಉದ್ಯೋಗಗಳೂ ಇಲ್ಲ, ಜತೆಗೆ ನೋಟುರದ್ಧತಿಯಿಂದ 90 ಲಕ್ಷ ಉದ್ಯೋಗಗಳ ನಷ್ಟ.
* ಬೆಲೆಗಳು ಗಗನಕ್ಕೇರಿವೆ, ಪಡಿತರ ವ್ಯವಸ್ಥೆ ಕುಸಿದಿದೆ. ಆಧಾರ್ ಜೋಡಣೆಯಿಂದಾಗಿ ಹಸಿವಿನಿಂದ ಸಾವುಗಳು ಸಂಭವಿಸುತ್ತಿವೆ.
* ದೇಶದ ಸಂಪತ್ತನ್ನೆಲ್ಲ ಖಾಸಗೀಕರಿಸಲಾಗುತ್ತಿದೆ.
* ಕನಿಷ್ಟ ಬೆಂಬಲ ಬೆಲೆಯ ಮತ್ತು ಸಾಲಮನ್ನಾದ ಆಶ್ವಾಸನೆ ಈಡೇರಿಸದೆ ರೈತರ ಆತ್ಮಹತ್ಯೆಗಳಲ್ಲಿ 42% ಹೆಚ್ಚಳವಾಗಿದೆ
* ಇನ್ನೊಂದೆಡೆಯಲ್ಲಿ ರೈತರನ್ನು ಕೃಷಿ ಕಾರ್ಪೊರೇಟ್‌ಗಳ ಕಾಂಟ್ರಾಕ್ಟ್ ಸಾಗುವಳಿಯ ಮಟ್ಟಕ್ಕೆ ಇಳಿಸಲಾಗುತ್ತಿದೆ.
* ಜಾತಿವಾದಿ, ಕೋಮುವಾದಿ ಹಿಂಸಾಚಾರದ ಮೂಲಕ ಭಯೋತ್ಪಾದನೆ, ಪ್ರಜಾಪ್ರಭುತ್ವ ಅವಕಾಶಗಳ ಮೇಲೆ ವ್ಯವಸ್ಥಿತ ಏಟುಗಳು.

ಕೇಸರಿ ಭಯೋತ್ಪಾದನೆಯ ವಿರುದ್ಧ ಅಲಿಗಡ್ ವಿ.ವಿ. ವಿದ್ಯಾರ್ಥಿಗಳ ಪ್ರತಿರೋಧ: ಎಸ್‌ಎಫ್‌ಐ ಬೆಂಬಲ

ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ಶೈಕ್ಷಣಿಕ ಸಂಸ್ಥೆಗಳ ಮೇಲೆ ಆರಂಭವಾಗಿರುವ ಅಭೂತಪೂರ್ವ ದಾಳಿಗಳ ಸರಣಿಗಳಲ್ಲಿ ಇತ್ತೀಚಿನದೆಂದರೆ ಮೇ 2ರ ಪ್ರಕರಣ.

15-20 ಹಿಂದೂ ಯುವ ವಾಹಿನಿ ಎಂಬ ಬಲಪಂಥೀಯ ಸಂಘಟನೆಯ ಗೂಂಡಾಗಳು ಪಿಸ್ತೂಲುಗಳೊಂದಿಗೆ ವಿ.ವಿ. ಆವರಣದೊಳಕ್ಕೆ ನುಗ್ಗಿ ಧಾಂದಲೆ ನಡೆಸಿದರು. ಅಂದು ಅಲಿಗಡ ಮುಸ್ಲಿಂ ವಿಶ್ವ ವಿದ್ಯಾಲಯದಲ್ಲಿ ಮಾಜಿ ಉಪರಾಷ್ಟ್ರಪತಿ ಹಮೀದ್ ಅನ್ಸಾರಿಯವರ ಕಾರ್ಯಕ್ರಮವಿದ್ದು ಅದನ್ನು ನಡೆಯದಂತೆ ಮಾಡುವುದು ಮತ್ತು ಮಾಜಿ ಉಪರಾಷ್ಟ್ರಪತಿಗಳ ಮೇಲೆ ಹಲ್ಲೆ ನಡೆಸುವುದು ಅವರ ಉದ್ದೇಶವಾಗಿತ್ತು ಎನ್ನಲಾಗಿದೆ. ವಿ.ವಿ. ವಿದ್ಯಾರ್ಥಿಗಳು ಪ್ರತಿಭಟಿಸಿದರು., ಅಕ್ರಮವಾಗಿ ವಿ.ವಿ. ಆವರಣಕ್ಕೆ ನುಗ್ಗಿದ ಅವರನ್ನು ಬಂಧಿಸಲು ಪೋಲೀಸರಿಗೆ ಹೇಳಿದರು. ಪೋಲೀಸರು ಸ್ವಲ್ಪ ಹೊತ್ತಿನ ವರೆಗೆ ಅವರನ್ನು ತಡೆದು ನಿಲ್ಲಿಸಿದರು, ಅದರೆ ಕಾರ್ಯಕ್ರಮ ಅರಂಭವಾಗುವ ಮೊದಲೇ ಬಿಡುಗಡೆ ಮಾಡಿದರು.

ಇನ್ನೊಂದೆಡೆಯಲ್ಲಿ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ ವಿದ್ಯಾರ್ಥಿಗಳ ಮೇಲೆಯೇ ಲಾಠಿ ಪ್ರಹಾರ ನಡೆಸಿದರು, ರ್‍ಯಾಪಿಡ್ ಆಕ್ಷನ್ ಫೋರ್ಸ್‌ನವರು ಅಶ್ರುವಾಯು ಬಾಂಬ್ ಸಿಡಿಸಿದರು. ಅಲಿಗಡ ಮುಸ್ಲಿಂ ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷರೂ ಸೇರಿದಂತೆ ಹಲವು ವಿದ್ಯಾರ್ಥಿಗಳು ಗಾಯಗೊಂಡರು. ಆದರೂ ಜಗ್ಗದೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ.

ಎಸ್‌ಎಫ್‌ಐ ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸಿದೆ. ಕೇಸರಿ ಭಯೋತ್ಪಾದನೆಯನ್ನು ವಿದ್ಯಾರ್ಥಿಗಳು ಧೈರ್ಯದಿಂದ ಎದುರಿಸುತ್ತಿದ್ದಾರೆ, ಬಲಪಂಥೀಯ ಗೂಂಡಾಗಳ ವಿರುದ್ಧ ಹೋರಾಡುತ್ತಿದ್ದಾರೆ ಎಂದು ಅಭಿನಂದಿಸಿರುವ ಎಸ್‌ಎಫ್‌ಐ ದೇಶಾದ್ಯಂತ ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಲಪಂಥೀಯ ಶಕ್ತಿಗಳು ಹರಿಯಬಿಟ್ಟಿರುವ ಹಿಂಸಾಚಾರವನ್ನು ಪ್ರತಿರೋಧಿಸಬೇಕು ಎಂದು ಮನವಿ ಮಾಡಿಕೊಂಡಿದೆ, ಹಿಂಸಾಚಾರದಲ್ಲಿ ತೊಡಗಿರುವವರನ್ನು ತಕ್ಷಣ ಬಂಧಿಸಬೇಕು ಎಂದು ಅದು ಆಗ್ರಹಿಸಿದೆ.

ಸಂಪಾದಕೀಯ

‘ಮುಧೋಳ’ ಮಟ್ಟಕ್ಕೆ ಇಳಿದವರನ್ನು ಸೋಲಿಸಬೇಕು ವಿಧಾನಸಭೆಯಲ್ಲಿ ಕೆಂಬಾವುಟ ಹಾರಬೇಕು

ಇದಕ್ಕಿಂತ ಕೀಳುಮಟ್ಟದ ಚುನಾವಣಾ ಪ್ರಚಾರ ಮತ್ತು ರಾಜಕಾರಣ ಸಾಧ್ಯವಿಲ್ಲ ಎಂದು ಈ ಚುನಾವಣಾ ಸೀಸನಿನಲ್ಲಿ ಪ್ರತಿ ವಾರದ ಕೊನೆಗೆ ಅಂದು ಕೊಂಡರೆ, ಅದನ್ನು ಮುಂದಿನ ವಾರ ಊಹಿಸಲೂ ಆಗದ ಇನ್ನೂ ಕೀಳುಮಟ್ಟಕ್ಕೆ ತೆಗೆದುಕೊಂಡು ಹೋಗುವ ಸಾಮರ್ಥ್ಯ ಪ್ರಧಾನಿ ಮೋದಿ ಬಿಟ್ಟರೆ ಬೇರೆ ಯಾರಿಗೂ ಇಲ್ಲ. ಈ ವಾರವೂ ಅದೇ ಆಯಿತು. ಹೊಸ ರಾಜಕೀಯ ರೂಪಕಗಳನ್ನು ಸೃಷ್ಟಿಸುವ ಮೋದಿ ಅವರ ಈ ವಾರದ ಅನ್ವೇಷಣೆ ‘ಮುಧೋಳ ನಾಯಿಯ ದೇಶಭಕ್ತಿ’. ಅದು ದೇಶಭಕ್ತಿಯ ಪರಿಕಲ್ಪನೆಯನ್ನೂ, ಚುನಾವಣಾ ಪ್ರಚಾರವನ್ನೂ ಏಕಕಾಲಕ್ಕೆ ವಿಕೃತಗೊಳಿಸಿ ಕೀಳು ಮಟ್ಟಿಗೆ ತೆಗೆದುಕೊಂಡು ಹೋಗುವ ಅದ್ಭುತ ರೂಪಕ. ಮುಧೋಳದ ಮತ್ತು ಕರ್ನಾಟಕದ ಜನ, ನಿಜವಾದ ದೇಶಭಕ್ತಿ ಏನೆಂದು ಗೊತ್ತಿರುವವರು ಈ ರೂಪಕವನ್ನು ಒಂದು ಅವಮಾನವೆಂದೂ ಕೆಟ್ಟ ಐಡಿಯಾ ಎಂದೂ ಬಗೆಯಬಹುದು ಎಂಬ ಸಣ್ಣ ಅನುಮಾನವೂ ಅವರಿಗೆ ಇದ್ದಂತಿಲ್ಲ. ಅಥವಾ ಅದೇ ಅವರ ಉದ್ದೇಶವೋ ಏನೋ! ಮೋದಿ ಚುನಾವಣೆಯನ್ನು ನಾಯಿಯ ಮಟ್ಟಕ್ಕೆ ಇಳಿಸಿದ್ದು ಇದೇ ಮೊದಲ ಬಾರಿಯಲ್ಲ. 2014 ಚುನಾವಣೆಯ ಮೊದಲು ಸಹ ಅವರ ‘ನಾಯಿಮರಿ’ ರೂಪಕ ಕುಖ್ಯಾತವಾಗಿತ್ತು. ಅದೇ ‘ನಾಯಿಮರಿ’ ಈಗ ಬೆಳೆದು ‘ಮುಧೋಳ ನಾಯಿ’ಯಾಗಿದೆ ಅಂತ ಕಾಣುತ್ತದೆ.

ಸ್ಥಳೀಯ/ಪ್ರಾದೇಶಿಕ ಭಾವನಾತ್ಮಕ ವಿಷಯಗಳನ್ನು ಕೆದಕುವ ಅವರ ಹಳೆಯ ಚಾಳಿಯೂ ಮುಂದುವರೆಯಿತು. ಮಧ್ಯ ಕರ್ನಾಟಕದಲ್ಲಿ ನಿಜಲಿಂಗಪ್ಪನವರಿಗೆ, ಕೋಲಾರದಲ್ಲಿ ವೀರಪ್ಪ ಮೊಯಿಲಿಗೆ ಕಾಂಗ್ರೆಸ್ ಅವಮಾನ ಮಾಡಿ ಮೂಲೆಗೆ ತಳ್ಳಿತು ಎಂದರು. ಮಂಗಳೂರಿನಲ್ಲಿ ಜನಾರ್ಧನ ಪೂಜಾರಿ ಅವರ ಬಗ್ಗೆ ಹಾಗೇ ಮಾತನಾಡಬಹುದು ಎಂದು (ಪೂಜಾರಿಯವರನ್ನು ಸೇರಿಸಿ!) ನಿರೀಕ್ಷಿಸಿದ್ದವರಿಗೆ ನಿರಾಸೆಯಾಯಿತು. ಕರ್ನಾಟಕ ಚುನಾವಣಾ ಪ್ರಚಾರದಲ್ಲಿ ಬಿಲ್ಕುಲ್ ಸತ್ಯ ಹೇಳುವುದಿಲ್ಲ ಎಂದು ಮೋದಿ ಪಣ ತೊಟ್ಟಿರಬೇಕು! ಕೊನೆಗೂ ಮಹದಾಯಿ ವಿವಾದದ ಬಗ್ಗೆ ಮೌನ ಮುರಿದು ಇತ್ಯರ್ಥ ಮಾಡುವ ಭರವಸೆ ಕೊಟ್ಟರು. ಅದೂ ಸ್ಥಳೀಯ/ಪ್ರಾದೇಶಿಕ ಭಾವನಾತ್ಮಕ ವಿಷಯಗಳನ್ನು ಪ್ರಸ್ತಾಪಿಸುವ ಭಾಗವಾಗಿ ಅಷ್ಟೇ. ಈ ವರೆಗೆ ಏಕೆ ಮಧ್ಯಪ್ರವೇಶ ಮಾಡಿಲ್ಲ. ಇನ್ನು ಮುಂದಾದರೂ ಹೇಗೆ ಬಗೆಹರಿಸುತ್ತಾರೆ ಎಂಬುದರ ಬಗ್ಗೆ ವಿವರಿಸಲು ಹೋಗಲಿಲ್ಲ. ಈ ವಾರವೂ ಕೀಳು ಮಟ್ಟದ ವೈಯಕ್ತಿಕ ಟೀಕೆಗಳನ್ನು ಮುಂದುವರೆಸಿದರು. ಆಂಜನೇಯ, ಜಾರ್ಜ್, ರೋಷನ್ ಬೇಗ್ ಮತ್ತು ಹ್ಯಾರಿಸ್ ಅವರುಗಳನ್ನು ಹೆಸರಿಸದೆ ಕೀಳುಭಾಷೆಯಲ್ಲಿ ಟೀಕಿಸಿದರು. ಟೀಕೆಗೆ ಅಲ್ಪಸಂಖ್ಯಾತ ಮತ್ತು ದಲಿತ ನಾಯಕರನ್ನೇ ವಿಶೇಷವಾಗಿ ಆರಿಸಿಕೊಂಡದ್ದೂ ಗಮನಾರ್ಹ. ಅವರ ಕೀಳುಮಟ್ಟದ ಟೀಕೆ ಎಷ್ಟು ಅಸಹ್ಯಕರವಾಗಿದೆಯೆಂದರೆ ಸಿದ್ದರಾಮಯ್ಯ ನೂರು ಕೋಟಿ ರೂ. ಗೆ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ಕರ್ನಾಟಕದ ‘ಸೋಲಿನ’ ನಂತರ ಕಾಂಗ್ರೆಸ್ ಪಿಪಿಪಿ(ಪಂಜಾಬ್–ಪುದುಚೇರಿ–ಪಾರ್ಟಿ) ಅಗುತ್ತದೆಂದು ಲೇವಡಿ ಮಾಡುತ್ತಾ ಮೋದಿ ತಮ್ಮ ‘ಕಾಂಗ್ರೆಸ್–ಮುಕ್ತ ಭಾರತದ ದಂಡಯಾತ್ರೆ’ಯನ್ನು ಮುಂದುವರೆಸಿದರು. ಆದರೆ ಅವರ ಹಿಂದಿನ 2+1 ಸೂತ್ರಕ್ಕೆ ಆದ ಗತಿ ಇದಕ್ಕೂ ಆಯಿತು. ಅವರ 2+1ಕ್ಕೆ ‘2ರೆಡ್ಡಿ+1ಯೆಡ್ಡಿ’ ಎಂದು ಕಾಂಗ್ರೆಸ್ ಮರುದಾಳಿ ಮಾಡಿತ್ತು. ಅದೇ ರೀತಿ ಈಗಲೂ ಬಿಜೆಪಿಯ ಪಿಪಿಪಿ ಅಂದರೆ ‘ಪ್ರಿಸನ್ (ಜೈಲು) – ಪ್ರೈಸ್(ಬೆಲೆಏರಿಕೆ) – ಪಕೋಡಾ(ಉದ್ಯೋಗ)’ ಎಂಬ ಮರುದಾಳಿ ಎದುರಿಸಬೇಕಾಯಿತು.

ಸಿದ್ಧರಾಮಯ್ಯ ಜಾತಿ–ಧರ್ಮ ಒಡೆಯುತ್ತಿದ್ದಾರೆಂದು ದೂರಿದರು. ದೇಶದಲ್ಲೂ ರಾಜ್ಯದಲ್ಲೂ ಜಾತಿ–ಧರ್ಮದ ಹೆಸರಲ್ಲಿ ಜನತೆಯನ್ನು ಒಡೆಯುವ ತಂತ್ರದಲ್ಲಿ ‘ಪೇಟೆಂಟ್’ ಪಡೆದಿರುವ ಮತ್ತು ಹಲವು ‘ವಿಕ್ರಮ’ಗಳನ್ನು ಸಾಧಿಸಿರುವ ಮತ್ತು ತಮ್ಮದೇ 2002 ಗುಜರಾತ್ ನರಮೇಧಧ ‘ವಿಕ್ರಮ’ದ ಹಿನ್ನೆಲೆಯಲ್ಲಿ ಅವರಿಗೆ ಈ ಟೀಕೆ ಮಾಡಲು ಯಾವ ನೈತಿಕ ಹಕ್ಕಿದೆ? ಬೆಂಗಳೂರು ಅಪರಾಧಧ ರಾಜಧಾನಿ, ಕಸದ ನಗರ, ಬೆಂಕಿ ಬೀಳುವ ಕೆರೆಗಳ ನಗರವಾಗಿದೆ ಎಂದು ಟೀಕಿಸಿದರು. ತಾವು ಪ್ರತಿನಿಧಿಸುವ ವಾರಣಾಸಿ ಅತ್ಯಂತ ಗಲೀಜು ನಗರಗಳಲ್ಲಿ ಒಂದು ಎಂಬ ಸಾಧನೆಗೈದಿರುವ ಹಿನ್ನೆಲೆಯಲ್ಲಿ ಯಾವ ಮುಖ ಹೊತ್ತು ಯಾರಾದರೂ ಇಂತಹ ಟೀಕೆ ಮಾಡಬಲ್ಲ? ರಾಹುಲ್ ಗಾಂಧಿ 2019ರಲ್ಲಿ ತಾನೇ ಪ್ರಧಾನಿ ಎಂದು ಹೇಳಿದ್ದು ಜನತೆಗೆ ಅವಮಾನ ಎಂದೂ ಹಾರಾಡಿದರು. ಇದೇ ಕೆಲವು ದಿನಗಳ ಹಿಂದೆ ಅವರದೇ ಪಕ್ಷದ ಯೆಡಿಯೂರಪ್ಪ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಪ್ರಮಾಣವಚನ ಸ್ವೀಕಾರದ ದಿನ, ಸ್ಥಳ, ಗೆಸ್ಟ್ ಲಿಸ್ಟ್ ಪ್ರಕಟಿಸಲಿಲ್ಲವೇ? ತಮ್ಮ ತಟ್ಟೆಯಲ್ಲಿ ಇರುವ ಹೆಗ್ಗಣ ನಿರ್ಲಕ್ಷಿಸಿ, ಪಕ್ಕದವನ ತಟ್ಟೆಯಲ್ಲಿ ನೊಣ ಬಿದ್ದಿದ್ದಕ್ಕೆ ಲೇವಡಿ ಮಾಡುವ ಈ ಕಾಯಿಲೆಗೆ ಏನು ಮದ್ದು?

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬಂತೆ ಕರ್ನಾಟಕಕ್ಕೆ ಬಂದ ತಾರಾಪ್ರಚಾರಕರೂ ಅದನ್ನೇ ಮಾಡಿದರು. ಯೋಗಿ ಆದಿತ್ಯನಾಥ ನಿಮಗೆ ಹನುಮ ಬೇಕೋ ಟಿಪ್ಪು ಬೇಕೋ ಎಂದು ಕೇಳಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಟಿಪ್ಪು ಜಯಂತಿ ನಿಷೇಧಿಸುವುದಾಗಿ ಘೋಷಿಸಿದರು. ಉತ್ತರ ಪ್ರದೇಶದಲ್ಲಿ ಬಿರುಗಾಳಿ ಅವಾಂತರದಿಂದ ಜನ ನರಳುತ್ತಿದ್ದಾಗ ಮುಖ್ಯಮಂತ್ರಿ ಕರ್ನಾಟಕದಲ್ಲಿ ‘ಹನುಮ ಬ್ರಿಗೇಡ್’ ಕಟ್ಟುವುದರಲ್ಲಿ ಬ್ಯುಸಿಯಾಗಿದ್ದರು. ರಾಜನಾಥ ಸಿಂಗ್, ಸ್ಮೃತಿ ಇರಾನಿ, ಅವರೂ ತಮ್ಮ ಶಕ್ತ್ಯಾನುಸಾರ ಪ್ರಚಾರವನ್ನು ಕೀಳುಮಟ್ಟಕ್ಕೆ ಇಳಿಸುವ ಹರಸಾಹಸ ಮಾಡಿದರು. ಅನಂತ ಕುಮಾರ್ ಹೆಗಡೆ, ಪ್ರತಾಪ ಸಿಂಹರುಗಳು ಅವರ ‘ಸಂಸ್ಕೃತ ಭಾಷಣ’ಗಳನ್ನು ಮುಂದುವರೆಸಿದರೂ ಯಾಕೋ ಮೋದಿ ಎದುರು ಅವರ ಭಾಷಣಗಳು ಪೀಚು ಎನಿಸಿದವು! ಒಲ್ಲದವರನ್ನು ಕೈ–ಕಾಲು ಕಟ್ಟಿ ಮತಗಟ್ಟೆಗೆ ಎಳೆದುಕೊಂಡು ಬಂದು ಬಿಜೆಪಿಗೆ ಮತ ಹಾಕಿಸಿ ಎಂದ ಯೆಡಿಯೂರಪ್ಪನವರೇ ಅವರಿಗಿಂತ ಮಿಂಚಿದರು. ಆದರೆ ಯಾರೂ ಮೋದಿ ‘ಲೆವೆಲ್’ಗೆ ಏರಲಿಲ್ಲ (ಅಥವಾ ಇಳಿಯಲಿಲ್ಲ!). ಹಿಂದೆ ಬಾಲಿವುಡ್ ಫಿಲಂಗಳಲ್ಲಿ ಕ್ಯಾಬರೇ ಅಥವಾ ಐಟಂ ಡ್ಯಾನ್ಸ್ ಮಾಡುವ ಬೇರೆ ‘ಖಳನಾಯಕಿ’ಯರು ಇರುತ್ತಿದ್ದರು. ಹಿರೋಯಿನ್ ಅವನ್ನೆಲ್ಲಾ ಮಾಡುತ್ತಿರಲಿಲ್ಲ. ಹಾಗೆನೇ ಕೊಲೆ–ಸುಲಿಗೆ–ರೇಪ್ ಗಳನ್ನು ಹೀರೊ ಮಾಡುತ್ತಿರಲಿಲ್ಲ. ಬರಬರುತ್ತಾ ಹೀರೊ–ಹಿರೋಯಿನ್ ಗಳೇ ಇವನ್ನೆಲ್ಲಾ ಮಾಡಲು ಶುರು ಮಾಡಿದಂತೆ ಬಿಜೆಪಿ–ಸಂಘ ಪರಿವಾರದಲ್ಲೂ ಬದಲಾವಣೆ ಬಂದಿದೆ. ಮಾಧ್ಯಮ ಭಾಷೆಯಲ್ಲಿ ಸಂಘ ಪರಿವಾರದ ‘ಫ್ರಿಂಜ್ ಎಲಿಮೆಂಟ್’ ಮತ್ತು ‘ಕೋರ್ ಎಲಿಮೆಂಟ್’ ಒಂದಾಗಿಬಿಟ್ಟಿವೆ. ಅವು ಹಿಂದಿನಿಂದಲೂ ಒಂದೇ ಕೇಂದ್ರದಿಂದ ನಿರ್ದೇಶಿತವಾಗುತ್ತಿದ್ದವು. ಈಗ ಆ ನಾಟಕವೂ ಬೇಕಾಗಿಲ್ಲ ಅಥವಾ ಇದು ಕಾಲದ ಅಗತ್ಯ ಎಂದು ಅವರಿಗೆ ಅನಿಸಿರಬೇಕು.

ಜೆಡಿ–ಎಸ್ ಒಂದು ಕಡೆ ಹಿಂದೂ ಕೋಮುವಾದಿ ಬಿಜೆಪಿ ಜತೆ ಬಹಿರಂಗ ಜಗಳ ಮತ್ತು ಗುಟ್ಟಿನಲ್ಲಿ ರೊಮ್ಯಾನ್ಸ್ ಮಾಡುತ್ತಿದ್ದರೆ, ಇನ್ನೊಂದು ಕಡೆ ಮುಸ್ಲಿಂ ಕೋಮುವಾದಿ ಒವೈಸಿಯನ್ನು ತನ್ನ ಪ್ರಚಾರಕ್ಕೆ ಕರೆತಂದು ಅದರ ಬೋರ್ಡಿನಲ್ಲಿರುವ ‘ಜಾತ್ಯತೀತ’ದ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆದಿದೆ.

ಮೋದಿಯವರ ಈ ಕೀಳು ಮಟ್ಟದ ಪ್ರಚಾರ ತಮ್ಮ ಕೇಂದ್ರ ಸರಕಾರದ ಮತ್ತು ಹಿಂದಿನ ಕರ್ನಾಟಕ ಬಿಜೆಪಿ ರಾಜ್ಯ ಸರಕಾರದ ಅಗಾಧ ವೈಫಲ್ಯಗಳ ಬಗ್ಗೆ ಚರ್ಚೆಯಾಗದಂತೆ ಎಂಬುದು ಸ್ಪಷ್ಟ. ಆದರೆ ಅವರು ಕಾಂಗ್ರೆಸಿನ ನೀತಿಗಳ ವೈಫಲ್ಯಗಳ ಟೀಕೆ ಯಾಕೆ ಮಾಡಬಾರದು? ತಮ್ಮ ಹಲವಾರು ಪ್ರಣಾಳಿಕೆಗಳ ಬಗ್ಗೆ ಯಾಕೆ ಮಾತನಾಡಬಾರದು? ತಾನು ಮಾಡಿದ್ದನ್ನು ಇತರರು ಮಾಡಿದಾಗ ಯಾವುದೇ ಮರ್ಯಾದೆ ಇಲ್ಲದೆ ಟೀಕೆ ಮಾಡುವ 56 ಇಂಚಿನ ಛಾತಿಯವರಿಗೆ ಅದೇಕೆ ಸಾಧ್ಯವಾಗುವುದಿಲ್ಲ? ಆಗ ತಾನು ಹರಿಯಬಿಡುತ್ತಿರುವ ಆಕ್ರಾಮಕ ನವ–ಉದಾರವಾದಿ ನೀತಿಗಳ ಬಗ್ಗೆ ಟೀಕೆಯತ್ತ ಹೋಗುತ್ತದೆ. ಆಗ ಈ ನೀತಿಗಳ ಆಕ್ರಾಮಕ ಜಾರಿಗೆ ಅವರನ್ನು ನೇಮಿಸಿರುವ ಅಂಬಾನಿ–ಅದಾನಿಗಳ ಮತ್ತು ಟ್ರಂಪ್ ಗಳ ಕಣ್ಣು ಕೆಂಪಗಾಗುತ್ತದೆ. ಅವರ ಎತ್ತಂಗಡಿಯೂ ಆಗಬಹುದು. ಸರಿ ಹೋಗಲಿ, ಕಾಂಗ್ರೆಸ್ ಬಿಜೆಪಿಯ ಕೀಳು ಮಟ್ಟದ ಪ್ರಚಾರಕ್ಕೆ ಪ್ರತಿಕ್ರಿಯಿಸುವುದು ಬಿಟ್ಟು ತಮ್ಮ ಹಲವು ಪ್ರಣಾಳಿಕೆಗಳ ಬಗ್ಗೆ ಯಾಕೆ ಮಾತನಾಡಬಾರದು? ಇದು ಕಾಂಗ್ರೆಸಿಗೂ ಬೇಡ. ಅವರಿಗೂ ಚುನಾವಣಾ ಚರ್ಚೆ ಈ ನೀತಿಗಳತ್ತ ಮತ್ತು ಅವುಗಳಿಂದಾಗಿರುವ ತಮ್ಮ ಅಗಾಧ ವೈಫಲ್ಯಗಳತ್ತ ಹೋಗದಿದ್ದರೆನೇ ಸೇಫು. ಚರ್ಚೆ ‘ಮುಧೋಳ ನಾಯಿ ಧೇಶಭಕ್ತಿ’ ‘ಬೀದಿ ನಾಯಿ ಕಚ್ಚಾಟ’ಗಳಿಗೆ ಸೀಮಿತವಾಗಿದ್ದರೆ ಒಳ್ಳೆಯದು. ಇದೂ ಒಂದು ರೀತಿಯ ಮ್ಯಾಚ್ ಫಿಕ್ಸಿಂಗೇ.

ಈ ಮ್ಯಾಚ್ ಫಿಕ್ಸಿಂಗ್ ಒಡೆಯಬೇಕಾದರೆ ‘ಮುಧೋಳ’ ಮಟ್ಟಕ್ಕೆ ಚರ್ಚೆಯನ್ನು ಒಯ್ಯುತ್ತಿರುವ ಬಿಜೆಪಿಯನ್ನು ಸೋಲಿಸಬೇಕು. ವಿಧಾನಸಭೆಯ ಒಳಗೂ ಹೊರಗೂ ರಾಜಕೀಯ ಚರ್ಚೆಯ ವಿಷಯ ಬದಲಾಗಬೇಕು. ಅದು ಆಗಬೇಕಾದರೆ ವಿಧಾನಸಭೆಯಲ್ಲಿ ದುಡಿಯುವ ವರ್ಗದ ಪ್ರತಿನಿಧಿಗಳು ಪ್ರವೇಶಿಸಬೇಕು. ಹೊರಗೆ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ದುಡಿಯುವ ಜನರನ್ನು ಇದಕ್ಕಾಗಿ ಅಣಿನೆರೆಸಬೇಕು. ●



ಲಾಲ್ ಸಲಾಂ ಸುಭಾಸ ಕೊಪ್ಪಿಕರ್

ಹೋರಾಟಗಾರ, ಸಂಘಟಕ ಸಿಪಿಐ(ಎಂ) ಪಕ್ಷದ ಭಟ್ಕಳ ತಾಲೂಕು ಕಾರ್ಯದರ್ಶಿ ಮತ್ತು ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುಭಾಸ ಕೊಪ್ಪಿಕರ್ ಮೇ 5ರಂದು ತೀವ್ರ ಹೃದಯಾಘಾತದಿಂದ ನಮ್ಮನ್ನಗಲಿದ್ದಾರೆ. ಸಿಐಟಿಯು ರಾಜ್ಯ ಸಮಿತಿ ಸದಸ್ಯರು ಮತ್ತು ಜಿಲ್ಲಾ ಪದಾಧಿಕಾರಿಗಳು, ಗ್ರಾಮ ಪಂಚಾಯತಿ ನೌಕರರ ಸಂಘದ ಅಧ್ಯಕ್ಷರು, ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಮುಂದಾಳು, ಹಲವಾರು ಕಾರ್ಮಿಕ ಸಂಘಟನೆಗಳನ್ನು ಮೊದಲು ಸಂಘಟಿಸುವಲ್ಲಿ ಮುಂಚೂಣಿಯಲ್ಲಿರುವ ಇವರ ಅಗಲಿಕೆ ಆಘಾತಕಾರಿ. ಚಳುವಳಿಗೆ ಬದ್ಧರಾದ ಇವರು ಸಮಾಜ ಸುಧಾರಣೆ ಮತ್ತು ಬದಲಾವಣೆಯ ಕೆಲಸದಲ್ಲಿ ಸದಾ ಮುಂದೆ. ತನಗೆ ಕಷ್ಟ ಇದ್ದರೂ ಎಲ್ಲರ ಕಷ್ಟಗಳಿಗೆ ಸ್ಪಂದಿಸುವ ಜನಾನುರಾಗಿಗಳು.

ಸುಭಾಸ್ ರವರು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಮುಂದಾಳುವಾಗಿ, ಹಂಚು ಕಾರ್ಮಿಕರು, ಗುತ್ತಿಗೆ, ಗೋಡಂಬಿ, ಅಂಗನವಾಡಿ, ಬಿಸಿಯೂಟದಂಥ ದುಡಿಯುವ ಮಹಿಳೆಯರನ್ನು ಸಂಘಟಿಸಿದವರು. ಶೈಕ್ಷಣಿಕ ಮೂಲಸೌಕರ್ಯ ಹೋರಾಟ, ಹೊನ್ನಾವರ ಸೇತುವೆ ಹೋರಾಟ, ಅನಂತವಾಡಿ ಹಂಚು ಮುಷ್ಕರ, ಭೂಮಿ, ಅತಿಕ್ರಮಣ ಭೂಮಿ ಹೋರಾಟ, ಸಾಕ್ಷರತೆ, ಪ್ರೇರಕ ಉಪಪ್ರೇರಕರ ಹೋರಾಟ, ಪಂಚಾಯತ ಕಾರ್ಮಿಕರ ಹೋರಾಟ, ಬಂದರು ಕಾರ್ಮಿಕರ ಹೋರಾಟ, ವಿದ್ಯುತ್ ಗುತ್ತಿಗೆ ಕಾರ್ಮಿಕರ ಹೋರಾಟ – ಹೀಗೆ ನೂರಾರು ಹೋರಾಟಗಳ ಸಂಘಟಕರು.

ಕಾಲೇಜು ಮೂಲಸೌಕರ್ಯ ನಿರ್ಣಾಯಕ ಹೋರಾಟದಲ್ಲಿ ಆಡಳಿತ ಮಂಡಳಿಯ ಕೆಂಗಣ್ಣಿಗೆ ಗುರಿಯಾದರು. ಅನಂತವಾಡಿ ಕಾರ್ಮಿಕ ಹೋರಾಟದಲ್ಲಿ ಧ್ವನಿವರ್ಧಕ ಇಲ್ಲದೇ ಪೋಲಿಸ್ ದೌರ್ಜನ್ಯದಲ್ಲಿ ಧ್ವನಿ ಕಳಕೊಂಡಿದ್ದರು. ಎಸ್.ಎಫ್.ಐ ಗೆ ಹಲವರನ್ನು ಆಕರ್ಷಿಸಿದ ಅವರು ಸಂಗಾತಿತ್ವ ಭಾವದಿಂದ ಸಂಪರ್ಕ ಸಂವಹನ ಕೊನೆತನಕ ಇಟ್ಟುಕೊಂಡವರು.

–ಯಮುನಾ ಗಾಂವ್ಕರ್

ಜೆ ಆರ್ ಲೋಬೊ ಅವ್ಯವಹಾರ, ಅಧಿಕಾರ ದುರುಪಯೋಗದ ಪಟ್ಟಿ

- 2003 ರಿಂದ 2013 ರವರಗೆ ಜೆ ಆರ್ ಕುಡ್ಸೆಂಪ್ ಯೋಜನಾ ನಿರ್ದೇಶಕರಾಗಿದ್ದಾಗ ಏಡಿಬಿ ಯಿಂದ ಪಡೆದ ಐನೂರು ಕೋಟಿಗೂ ಹೆಚ್ಚು ಸಾಲದಿಂದ ಕಾರವಾರ, ಭಟ್ಕಳ, ಕುಂದಾಪುರ, ಉಡುಪಿ, ಮಂಗಳೂರು, ಪುತ್ತೂರಿನಲ್ಲಿ ನಡೆದ ಮೂಲಭೂತ ಸೌಲಭ್ಯ ಕಾಮಗಾರಿಗಳಲ್ಲಿ ಪೂರ್ಣ ವೈಫಲ್ಯ, ಕಳಪೆ ಕಾಮಗಾರಿ, ಕೋಟ್ಯಾಂತರ ರೂಪಾಯಿ ವ್ಯರ್ಥ. ಸಾಲಕ್ಕೆ ಬೆಳೆಯುತ್ತಿರುವ ಬಡ್ಡಿ.
- ನಿಯಮಗಳಿಗೆ ವಿರುದ್ದವಾಗಿ ತನ್ನ ಸೇವಾವಧಿಯ 30 ವರ್ಷಗಳನ್ನು ಸತತವಾಗಿ ತನ್ನ ತವರು ಮಂಗಳೂರಿನಲ್ಲಿ ಕಳೆದಿರುವುದು.
- ತಾನು ಪಾಲಿಕೆ ಆಯುಕ್ತ ಆಗಿದ್ದಾಗ ತನ್ನ ಸಂಬಂಧಿಯ ಹೆಸರಿನಲ್ಲಿ ತೆರೆದ ಬೇನಾಮಿ ಜಾಹೀರಾತು ಕಂಪೆನಿ ಸಿಲಾ ಹೆಸರಲ್ಲಿ ಲಕ್ಷಗಟ್ಟಲೆಯ ಜಾಹೀರಾತುಗಳನ್ನು ಪಡೆದು ಪಾಲಿಕೆಯ ತೆರಿಗೆ ಹಣವನ್ನು ದುರುಪಯೋಗ ಪಡಿಸಿದ್ದು
- ಮಂಗಳೂರಿಗೆ ಮಂಜೂರಾಗಿದ್ದ 310 ಕೋಟಿಯ ಏಡಿಬಿ ಸಾಲದಲ್ಲಿ ಸುರತ್ಕಲ್ ಭಾಗದಲ್ಲಿ ನಿರ್ಮಿಸಲಾಗಿದ್ದ ಒಳಚರಂಡಿ ಯೋಜನೆ ಕಳಪೆ ಕಾಮಗಾರಿ, ಅವ್ಯವಹಾರದಿಂದ ಸಂಪೂರ್ಣ ವ್ಯರ್ಥಗೊಂಡಿದೆ. ಈ ಕುರಿತು ನಗರಾಭಿವೃದ್ಧಿ ಸಚಿವ ರೋಷನ್ ಬೇಗ್ ಸಿಐಡಿ ತನಿಖೆಗೆ ಅದೇಶಿಸಿದ್ದರು, ತನಿಖೆಯಾಗದಂತೆ ತಡೆದದ್ದು. ಈಗ ಏಡಿಬಿ ಬಡ್ಡಿ ಬೆಟ್ಟದಷ್ಟು ಏರಿದೆ.
- ಏಡಿಬಿ ಎರಡನೇ ಹಂತದ 410 ಕೋಟಿಯ ಸಾಲದಲ್ಲಿ ಮತ್ತೆ ವ್ಯಾಪಕ ಭ್ರಷ್ಟಾಚಾರ. 60 ಕೋಟಿಯ ಪಂಪಿಂಗ್ ಮೇನ್ ಬದಲಾಯಿಸುವ ಕಾಮಗಾರಿಯ ಮೊತ್ತವನ್ನು ಸಕಾರಣವಿಲ್ಲದೆ 94 ಕೋಟಿಗೆ ಏರಿಸಿದ್ದು. ಭ್ರಷ್ಟ ಗುತ್ತಿಗೆದಾರರು, ಕನ್ಸಲ್ಟಂಟ್ ಗಳು ಕೂಟ ಕಟ್ಟಿಕೊಂಡದ್ದು.
- ಸ್ಮಾರ್ಟ್ ಸಿಟಿ ಯೋಜನೆಯಡಿ ಕೋಟ್ಯಾಂತರ ರೂಪಾಯಿ ಪಾಲಿಕೆಗೆ ಅನುದಾನ ಹರಿದು ಬಂದಿದ್ದರೂ, ತನ್ನ ಸ್ವಾರ್ಥಕ್ಕಾಗಿ ಅನುದಾನ ಖರ್ಚಾಗದಂತೆ ತಡೆದದ್ದು.
- ವಸತಿ ರಹಿತರಿಗೆ ವಸತಿ ಒದಗಿಸುವ ಯೋಜನೆಯಲ್ಲಿ ಬಡ ನಿವೇಶನ, ವಸತಿ ರಹಿತರನ್ನು ವಂಚಿಸಿದ್ದು. ಕಾಮಗಾರಿ ಆರಂಭವೇ ಆಗದೆ ಫ್ಲಾಟ್ ಗಳನ್ನು ವಿತರಿಸಿದ್ದು.
- ಕದ್ರಿ, ಉರ್ಮಸ್ಟೋರ್ ಮಾರುಕಟ್ಟೆ ನಿರ್ಮಾಣ ಯೋಜನೆಗಳನ್ನು ನೆನೆಗುದಿಗೆ ಬೀಳಿಸಿದ್ದು. ಸೆಂಟ್ರಲ್ ಮಾರ್ಕೆಟ್ ಮರು ನಿರ್ಮಾಣ ಯೋಜನೆ ಬರದಂತೆ ತಡೆದದ್ದು.
- ಹಿಂದಿನ ಸರಕಾರದಲ್ಲಿ ಮಂಜೂರಾತಿ ದೊರಕಿದ್ದ ಮಂಗಳೂರಿನ ಸುಸಜ್ಜಿತ ಬಸ್ ನಿಲ್ದಾಣ ಯೋಜನೆ ಚಾಲನೆ ನೀಡದಿರುವುದು.
- ಪಂಪ್ ವೆಲ್, ನಂತೂರು ಹೆದ್ದಾರಿ ಮೇಲ್ಸೇತುವೆ ನಿರ್ಮಾಣದಲ್ಲಿ ಮೀನಾಮೇಶ. ಅರಾಜಕ ಸ್ಥಿತಿ ನಿರ್ಮಾಣ.
- ದಶಕಗಳ ಕಾಲ ಜವಾಬ್ದಾರಿ ಹೊಂದಿದ್ದ ಪಿಲಿಕುಳ ನಿಸರ್ಗಧಾಮ ರಾಜ್ಯಮಟ್ಟದ ಪ್ರವಾಸೋದ್ಯಮದ ಕೇಂದ್ರವಾಗುವ ಅವಕಾಶ ತಪ್ಪಿಸಿದ್ದು. ತನ್ನ ಸಂಬಂಧಿಗಳಿಗೆ ಮಾನಸ ಸಹಿತ ಇತರ ಯೋಜನೆಗಳ ಗುತ್ತಿಗೆ ನೀಡಿ ಅಧಿಕಾರದ ದುರುಪಯೋಗ ನಡೆಸಿದ್ದು.
- ತಾನು ಪಾಲಿಕೆ ಆಯುಕ್ತ ಆಗಿದ್ದಾಗ, ಬೆಂಗ್ರೆ ನಿವಾಸಿಗಳಿಗೆ ಹಕ್ಕುಪತ್ರ ನೀಡದಂತೆ ರಾಜ್ಯ ಸರಕಾರಕ್ಕೆ ವರದಿ ನೀಡಿದ್ದು

ನಕಲಿ ಮತದಾರರಿದ್ದಾರೆ... ಎಚ್ಚರಿಕೆ..

ಸೋಲಿನ ಭೀತಿಯಿಂದ ಕಂಗೆಟ್ಟ ಜೆ.ಆರ್. ಲೋಬೋ....

ಕಳೆದ 4 ತಿಂಗಳಿನಿಂದ 15,000ಕ್ಕೂ ಮಿಕ್ಕಿದ ನಕಲಿ ಮತದಾರರ ಸೇರ್ಪಡೆ...

ನಗರದ ಹ್ರದಯಭಾಗದ ಎಲ್ಲಾ ವಾರ್ಡ್ ಗಳಲ್ಲಿ ನಕಲಿ ಮತದಾರರ ಪತ್ತೆ...

ಒಂದೇ ಮನೆ ನಂಬ್ರದಲ್ಲಿ 50,150,300 ಮತಗಳು...

ಹಿಂದೂ,ಮುಸ್ಲಿಂ, ಕ್ರಿಶ್ಚಿಯನ್ ಮತಗಳು ಒಂದೇ ಡೋರ್ ನಂಬ್ರದಲ್ಲಿ....

ತಂದೆ/ಗಂಡನ ಹೆಸರಿನ ಬದಲು ಇತರರು ಎಂದು ನಮೂದಿಸಲಾಗಿದ್ದು,ಅಲ್ಲಿ ಎಂಬ ಹೆಸರು 25ಕ್ಕೂ ಹೆಚ್ಚಿನ ಮತದಾರರ ಪಟ್ಟಿಯಲ್ಲಿ ದಾಖಲು..

ಇವೆಲ್ಲವೂ ಹೇಗೆ ಸಾಧ್ಯ...ಊಹಿಸಿ...

ಅಧಿಕಾರಿಗಳೊಂದಿಗೆ ಎಖ ಲೋಬೋ ನೇರ ಶಾಮೀಲು..

ತನ್ನ ಗೆಲುವಿಗಾಗಿ ಕೀಳು ಮಟ್ಟದ ರಾಜಕೀಯ ನಡೆಸುವ ಲೋಬೋಗೆ ಧಿಕ್ಕಾರವಿರಲಿ...



ಇದು ಈಗಾಗಲೇ ಚುನಾವಣಾ ಅಧಿಕಾರಿಗಳ ಗಮನಕ್ಕೆ ಬಂದಿದ್ದು, ಕಠಿಣ ಕ್ರಮ ತೆಗೆದುಕೊಳ್ಳುವ ಸಾಧ್ಯತೆ..

ಅಸಲಿ ಮತದಾರರೇ...ನಕಲಿ ಮತದಾರರು ಮತದಾನ ಕೇಂದ್ರಕ್ಕೆ ಆಗಮಿಸಿದರೆ ಅವರನ್ನು ಒದ್ದೋಡಿಸಿರಿ...

– ಸುನೀಲ್ ಬಜಾಲ್

ನಾನು ಯಾವ ಊರಿಗೆ ಪ್ರಚಾರಕ್ಕೆ ಹೋಗುತೇನೋ, ಮರುದಿನ ಆ ಊರಿಗೆ ಹಣದೊಂದಿಗೆ ಹೋಗುವ ಏಜಂಟರು ಕೆಲವು ಪಕ್ಷಗಳಲ್ಲಿ ಸೃಷ್ಟಿಯಾಗಿದ್ದಾರೆ. ನನ್ನನ್ನು ಗೌರವಿಸುವ ಕೆಲವು ಯುವಕರು ನನ್ನಲ್ಲಿ ಹೇಳುತ್ತಾರೆ, ಆ ಪಕ್ಷದವರು ನಮಗೆ ಹಣ ನೀಡಿದಕ್ಕಾಗಿ ಅವರ ಪರವಾಗಿ ಪ್ರಚಾರಕ್ಕೆ ಹೋಗುತ್ತೇವೆ. ಆದರೆ ನಮ್ಮ ಹಾಗೂ ನಮ್ಮ ಕುಟುಂಬದ ಮತ ನಿಮಗೇ ಹಾಕುತ್ತೇವೆ. ಅಂತವರಿಗೆ ನನ್ನ ಉತ್ತರ, ನೀವು ನನಗೆ ಮತ ಹಾಕದಿದ್ದರೂ ಬೇಜಾರಿಲ್ಲ. ಆದ್ರೆ ನಿಮ್ಮ ಸ್ವಾಭಿಮಾನವನ್ನು ಕಪ್ಪು ಹಣದ ಧನಿಗಳಿಗೆ ಮಾರಾಟ ಮಾಡಬೇಡಿ. ಶ್ರೀಮಂತರ ದುಡ್ಡಿನ ಅಹಂಕಾರದ ಮುಂದೆ ಎದೆ ಸೆಟೆದು ನಿಲ್ಲಿ*

– ಮುನೀರ್ ಕಾಟಿಪಳ್ಳ



ಮೊಯ್ದೀನ್ ಬಾವಾ ಅಪಪ್ರಚಾರಕ್ಕೆ ಮುನೀರ್ ಕಾಟಿಪಳ್ಳ ದಿಟ್ಟ ಉತ್ತರ ಇದು ಧರ್ಮಗಳ ನಡುವಿನ ಸಂಘರ್ಷವಲ್ಲ 90% ಬಡವರು ಮತ್ತು 10% ಸಿರಿವಂತರ ನಡುವಿನ ಸಂಘರ್ಷ

"ಜನನಾಯಕ ಎಂದೆನಿಸಿಕೊಂಡವನು ತನ್ನ ಪ್ರಜೆಗಳಿಗೆ ನಿಷ್ಠೆಯಾಗಿರಬೇಕು. ಬಡವರ ನೋವನ್ನು ಅನುಭವಿಸಿ ಅರ್ಥ ಮಾಡಿಕೊಳ್ಳಬಲ್ಲವರು ಮಾತ್ರ ರಾಜಕಾರಣಕ್ಕಿಳಿಯಬೇಕು" ಎಂದು ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರದ ಸಿಪಿಎಂ ಅಭ್ಯರ್ಥಿಮುನೀರ್ ಕಾಟಿಪಳ್ಳ ಅಭಿಪ್ರಾಯಪಟ್ಟಿದ್ದಾರೆ. ಅವರು ಅಡ್ಡೂರಿನಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಇಲ್ಲಿನ ಜನಪ್ರತಿನಿಧಿಗಳಿಗೆ ಜನಸಮುದಾಯದ ಕಷ್ಟಕಾರ್ಪಣ್ಯಗಳು ಬೇಡವಾಗಿದ್ದು, ಕೇವಲ ಧರ್ಮಗಳ ಆಧಾರದಲ್ಲಿ ಮತ ಯಾಚಿಸುತ್ತಿದ್ದಾರೆ. ಈ ಬಾರಿ ಚುನಾವಣೆ ಧರ್ಮಗಳ ಮಧ್ಯೆ ನಡೆಯುವ ಸಂಘರ್ಷ ಅಲ್ಲ. ಬದಲಾಗಿ 90% ಬಡವರ ಹಾಗೂ10% ಇರುವ ಶ್ರೀಮಂತರ ನಡುವಿನ ಸಂಘರ್ಷ ಆಗಿದೆ" ಎಂದು ಅವರು ಹೇಳಿದರು.

ಬಿಜೆಪಿಯ ಕೋಮುವಾದವನ್ನು ಸೋಲಿಸಲು ಕಮ್ಯುನಿಸ್ಟ್ ಸೇರಿದಂತೆ ಇತರ ಪಕ್ಷಗಳು ಕಾಂಗ್ರೆಸ್ ವಿರುದ್ಧ ಸ್ಪರ್ಧಿಸದಂತೆ ಒತ್ತಡ ಹೇರಲಾಗಿದೆ. ಒಂದು ವೇಳೆ ಕಾಂಗ್ರೆಸ್ ಗೆ ಸೀಟ್ ಸಿಗದಿದ್ದ ವೇಳೆ ಅದು ಬಿಜೆಪಿಯಾಗಿ ಪರಿವರ್ತನೆಯಾಗುತ್ತದೆ. ಇದರಿಂದ ಪ್ರಯೋಜನವೇನು?" ಎಂದು ಅವರು ಪ್ರಶ್ನಿಸಿದರು

ಮುಸ್ಲಿಮ್ ಮೌಲವಿ ಗಫೂರ್ ರನ್ನು ಹತ್ಯೆಗೈದ ಕೊಲೆಗಡುಕರನ್ನು ಪಕ್ಷಕ್ಕೆ ಸೇರ್ಪಡಿಸಿದ ಶಾಸಕ ಮೊಯಿದ್ದೀನ್ ಬಾವಾ ನಡೆ ವಿರುದ್ಧ ಹರಿಹಾಯ್ದ ಮುನೀರ್ ಕಾಟಿಪಳ್ಳ, "ಅಮಾಯಕ ಕಬೀರ್ ಮೇಲೆ ಎನ್ ಕೌಂಟರ್ ನಡೆಸಿದ ಎಎ–ಎಫ್ ಸಿಬ್ಬಂದಿಯ ಅಮಾನತು ವಾಪಸ್ ಪಡೆದು ಪ್ರಕರಣವನ್ನು ಮುಚ್ಚಿ ಹಾಕುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಮೊಯಿದ್ದೀನ್ ಬಾವಾ ಚಕಾರ ಎತ್ತಿಲ್ಲವೇಕೆ" ಎಂದು ಪ್ರಶ್ನಿಸಿದರು.

"ಈ ಭಾಗದ ಯುವಕರಿಗೆ ಎಂಆರ್ ಪಿಎಲ್ ಕಂಪೆನಿಗಳಲ್ಲಿ ಉದ್ಯೋಗ ಕಲ್ಪಿಸುವ ಬದ್ಧತೆ ಇರದ ಮೊಯಿದ್ದೀನ್ ಬಾವಾ ಸೌದಿ ಅರೇಬಿಯಾದಲ್ಲಿ ಸಭೆ ನಡೆಸಿ ತನಗೆ ವೋಟು ಹಾಕುವಂತೆ ಯುವಕರಲ್ಲಿ ಬಹಿರಂಗವಾಗಿ ವಿನಂತಿಸುತ್ತಿದ್ದಾರೆ.

"ದೇಶದಲ್ಲಿ ಒಂದು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಪ್ರಣಾಳಿಕೆಯಲ್ಲಿ ಹೇಳಿದ ನರೇಂದ್ರ ಮೋದಿಯವರು ಇಂದು ಯುವಕರಿಗೆ ಹತಾಶೆ ಮೂಡಿಸಿ ವಂಚಿಸಿದ್ದಲ್ಲದೆ, ನೋಟ್ ಬ್ಯಾನ್ ಮೂಲಕ ಬಡವರನ್ನು ಕೊಂದಿದ್ದಾರೆ" ಎಂದು ಆರೋಪಿಸಿದ ಅವರು, "ರಾಷ್ಟ್ರೀಯ ಪಕ್ಷಗಳ ಅಧಃಪತನದಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಸಂಪೂರ್ಣ ಕುಂಠಿತಗೊಂಡಿದ್ದು, ಇದರಿಂದ ಸರಕಾರಿ ಶಿಕ್ಷಣ ಸಂಸ್ಥೆ, ಸರಕಾರಿ ಆಸ್ಪತ್ರೆಗಳು ಸೇರಿ ಹಲವಾರು ಮೂಲಭೂತ ಸೌಕರ್ಯಗಳು ನಿರ್ಮಾಣವಾಗಿಲ್ಲ. ಆದ್ದರಿಂದ ತೃತೀಯ ಶಕ್ತಿಯಾಗಿರುವ ಕಮ್ಯುನಿಸ್ಟ್ ಪಕ್ಷಕ್ಕೆ ಮತ ಚಲಾಯಿಸುವ ಮೂಲಕ ತನ್ನನ್ನು ಗೆಲ್ಲಿಸಬೇಕು" ಎಂದು ವಿನಂತಿಸಿದರು.

ನಮಗೆ ಎಂತಹ ಶಾಸಕರು ಮಂತ್ರಿಗಳು ಸಿಗಲಿದ್ದಾರೆ?

ಮೂರು ಪಕ್ಷಗಳ ನಡುವೆ ಹಣಾಹಣಿಯ ನಂತರ ಯಾರು ಗೆಲ್ಲುತ್ತಾರೆ ಎಂಬುದು ಮೇ 15ರಂದು ನಿರ್ಣಯವಾಗಲಿದೆ. ಆದರೆ ನಮಗೆ ಎಂತಹ ಶಾಸಕರು ಮಂತ್ರಿಗಳು ಸಿಗಲಿದ್ದಾರೆ ಎಂಬುದು ಅಭ್ಯರ್ಥಿಗಳ ಆಸ್ತಿ, ಕ್ರಿಮಿನಲ್ ಪ್ರಕರಣಗಳ ಇತಿಹಾಸ, ಅವರು ಮಾಜಿ ಶಾಸಕರು/ಮಂತ್ರಿಗಳಾಗಿದ್ದರೆ ಅವರ ಆಸ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಆದ ಹೆಚ್ಚಳ, ಅವರು ಮತ್ತು ಅವರ ಪಕ್ಷ ಚುನಾವಣೆಗೆ ಮಾಡಿದ ಖರ್ಚು – ಇವುಗಳಿಂದ ಈಗಾಗಲೇ ಸ್ಪಷ್ಟವಾಗಿದೆ. ಚುನಾವಣಾ 'ಜ್ಯೋತಿಷಿ'ಗಳು ಆಡಳಿತ–ವಿರೋಧಿ ಅಲೆ ಇತ್ಯಾದಿ ಬಗ್ಗೆ ಏನೇ ಹೇಳಲಿ, ಎನ್.ಡಿ..ಟಿ.ವಿ. ವರದಿ ಪ್ರಕಾರ ಕರ್ನಾಟಕದ ಶಾಸಕರ ಮಟ್ಟದಲ್ಲಿ 2004ರಿಂದ ಹಾಲಿ ಶಾಸಕರು ಪುನರಾಯ್ಕೆಯಾಗುವ ದರ ಹೆಚ್ಚಿದೆಯಂತೆ. 1990ರ ದಶಕದಲ್ಲಿ ಶೇ. 30 ಇದ್ದಿದ್ದು ಈಗ ಶೇ. 70ಕ್ಕೆ ಏರಿದೆಯಂತೆ. ಆದ್ದರಿಂದ ಕಣದಲ್ಲಿರುವ ಶಾಸಕರ ಇತಿಹಾಸ ನಮ್ಮ ಭವಿಷ್ಯವನ್ನು ಕಾಡಲಿದೆ. ಇದಕ್ಕೆ ಪಕ್ಷಗಳು ಗೆಲ್ಲುವ ತಾಕತ್ತು ಇರುವ ಅಭ್ಯರ್ಥಿಗೆ ಮಾತ್ರ ಟಿಕೇಟು ಕೊಡುವುದು ಮತ್ತು ಶಾಸಕರ 'ಜನಪ್ರಿಯತೆ' ಕಾರಣವಾಗಿರಬಹುದು ಎಂದು ಈ 'ಜ್ಯೋತಿಷಿ'ಗಳು ಹೇಳುತ್ತಾರೆ. ಆದರೆ ನಿಜವಾಗಿಯೂ ಒಮ್ಮೆ ಗೆದ್ದ ಅಭ್ಯರ್ಥಿ ಅಧಿಕಾರ ಬಳಸಿ ತನ್ನ ಹಣ ಮತ್ತು ತೋಳ್ಬಲ ಹೆಚ್ಚಿಸಿಕೊಳ್ಳುವುದರಿಂದ 'ಗೆಲ್ಲುವ ತಾಕತ್ತು' ಗಳಿಸಿರುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಈ ನಿಟ್ಟಿನಲ್ಲಿ ಲಭ್ಯವಿರುವ ಮಾಹಿತಿ ಸಂಗ್ರಹಿಸಿ, ನಮಗೆ ಎಂತಹ ಶಾಸಕರು ಮಂತ್ರಿಗಳು ಸಿಗಲಿದ್ದಾರೆ ಎಂಬುದನ್ನು ತಿಳಿಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಬಿಜೆಪಿ ನಂಬರ್ ಒನ್ ಜಾಹೀರಾತು ಖರ್ಚಿನಲ್ಲೂ–ಕ್ರಿಮಿನಲ್ ದಾಖಲೆಯಲ್ಲೂ

ಕಳೆದ ಎರಡು ವಾರಗಳು ಕರ್ನಾಟಕದ ಮಾಧ್ಯಮಗಳಿಗಂತೂ ನಿಜಕ್ಕೂ ಅಚ್ಛೇ ದಿನ್. ರಾಜ್ಯದ ಎಲ್ಲ ದೈನಿಕಗಳಲ್ಲಿ ಮುಖಪುಟಗಳ ಪ್ರತಿದಿನದ ಮಾಸ್ಟ್ ಗಳಲ್ಲೂ ಮತ್ತು ಎಲ್ಲ ಟಿವಿ ಚಾನಲುಗಳಲ್ಲೂ ಬಿಜೆಪಿ ಜಾಹೀರಾತುಗಳದ್ದೇ ದರಬಾರು. ನ್ಯೂಸ್ ಲಾಂಡ್ರಿ ವೆಬ್ ಪತ್ರಿಕೆ ಕಲೆ ಹಾಕಿದ ಮಾಹಿತಿಯ ಪ್ರಕಾರ ಬಿಜೆಪಿಯ ಒಟ್ಟು ಜಾಹಿರಾತು ಬಜೆಟ್ 300ಕೋಟಿ ರೂ. ಕಾಂಗ್ರೆಸಿನದ್ದು 50–60 ಕೋಟಿ ರೂ. ಮತ್ತು ಜನತಾದಳದ್ದು 10 ಕೋಟಿ ರೂ.

ಬೇರೆ ರೀತಿಯ ಚುನಾವಣಾ ಪ್ರಚಾರಗಳು ಮೇ10 ರ ಸಂಜೆ ಮುಕ್ತಾಯಗೊಳ್ಳುತ್ತವೆ. ಆದರೆ ಇದು ಪತ್ರಿಕಾ ಜಾಹಿರಾತುಗಳಿಗೆ ಅನ್ವಯಿಸುವುದಿಲ್ಲ, ಮತದಾನದ ಬೆಳಿಗ್ಗೆಯೂ ಪತ್ರಿಕೆಗಳ ಮುಖಪುಟಗಳು ದಿನದ ಮುಖ್ಯ ಸುದ್ದಿಯ ಮೇಲೆಯೇ 'ಸರಕಾರ ಬದಲಿಸಿ' ಎಂಬ ಘೋಷಣೆಯನ್ನು ಮೌನವಾಗಿ ಸಾರುತ್ತವೆ!

ಇದು ಚುನಾವಣೆಯಲ್ಲಿ ಹಣಬಲದ ಒಂದು ಸ್ಯಾಂಪಲ್ ಆಗಿದ್ದರೆ, ತೋಳ್ಬಲದ ಒಂದು ಸ್ಯಾಂಪಲ್ ನ್ನು ಇನ್ನೊಂದು ವರದಿ ಕೊಡುತ್ತದೆ. ಎಡಿಆರ್(ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್) ವಿಶ್ಲೇಷಿಸಿರುವ ಬಿಜೆಪಿಯ 224, ಕಾಂಗ್ರೆಸಿನ 220 ಮತ್ತು ಜೆಡಿ(ಎಸ್)ನ 199 ಅಭ್ಯರ್ಥಿಗಳಲ್ಲಿ ತಮ್ಮ ಮೇಲೆ ಕ್ರಿಮಿನಲ್ ಆಪಾದನೆಗಳಿವೆ ಎಂದು ಅಫಿಡವಿಟುಗಳಲ್ಲಿ ಹೇಳಿಕೊಂಡಿರುವ ಅಭ್ಯರ್ಥಿಗಳಲ್ಲಿ 83 ಬಿಜೆಪಿಯವರು, 59 ಕಾಂಗ್ರೆಸಿನವರು ಮತ್ತು 41 ಜೆಡಿ(ಎಸ್)ನವರು. ಅಂದರೆ ಬಿಜೆಪಿಯ 37% ಅಭ್ಯರ್ಥಿಗಳು ಕ್ರಿಮಿನಲ್ ದಾಖಲೆಗಳನ್ನು ಹೊಂದಿದ್ದರೆ, ಕಾಂಗ್ರೆಸಿನ 27% ಮತ್ತು ಜೆಡಿ(ಎಸ್)ನ 21% ಅಭ್ಯರ್ಥಿಗಳು ಈ ಸಾಲಿಗೆ ಸೇರಿದವರು.. ಬಿಜೆಪಿಯ 58(26%), ಕಾಂಗ್ರೆಸಿನ 32(15%), ಜೆಡಿ(ಎಸ್)ನ 29(15%) ಅಭ್ಯರ್ಥಿಗಳು ಗಂಭೀರ ಕ್ರಿಮಿನಲ್ ಪ್ರಕರಣಗಳಲ್ಲಿ ಆಪಾದಿತರು. 1090 ಪಕ್ಷೇತರರಲ್ಲೂ 108(10%) ಕ್ರಿಮಿನಲ್ ಪ್ರಕರಣಗಳಲ್ಲಿ ಆಪಾದಿತರಾಗಿದ್ದು, 70(6%) ಗಂಭೀರ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ಬಿಜೆಪಿ ಕಾಂಗ್ರೆಸ್ ಸರಕಾರ ಮತ್ತು ಸಿದ್ಧರಾಮಯ್ಯ ಅವರ ಮೇಲೆ ವೈಯಕ್ತಿಕವಾಗಿ ಗಂಭೀರ ಆಧಾರ–ರಹಿತ ನಿರ್ದಿಷ್ಟ ಆಪಾದನೆಗಳನ್ನು ಮಾಡಿರುವ ಕಾರಣಕ್ಕೆ ದೂರಿನ ಆಧಾರದ ಮೇಲೆ ಚುನಾವಣೆ ಕಮಿಶನ್ ಹಲವು ದಿನಗಳ ನಂತರ, ಕೆಲವು ಬಿಜೆಪಿಯ ಜಾಹಿರಾತುಗಳನ್ನು ತಡೆಹಿಡಿಯಿತು.

ಶಾಸಕರ ಸರಾಸರಿ ಆಸ್ತಿ ರೂ. 17 ಕೋಟಿ ಹೆಚ್ಚಳ ಕಾಂಗ್ರೆಸ್ ಇದರಲ್ಲಿ ನಂಬರ್ 1

ರಾಜ್ಯ ವಿಧಾನಸಭೆಗೆ ಪುನರಾಯ್ಕೆ ಬಯಸಿರುವ 184 ಶಾಸಕರ ಆಸ್ತಿ ರೂ. 17.31 ಕೋಟಿ ಹೆಚ್ಚಾಗಿದೆ. 2013ರಲ್ಲಿ ಇದ್ದ ಸರಾಸರಿ ಸಂಪತ್ತು ಪ್ರಮಾಣ ರೂ. 26.92 ಕೋಟಿಯಿಂದ ರೂ. 44.24 ಕೋಟಿಗೆ ಏರಿದೆ. ಚುನಾವಣೆಗೆ ಸ್ಪರ್ಧಿಸಿರುವ 2654 ಅಭ್ಯರ್ಥಿಗಳಲ್ಲಿ 883 (ಸುಮಾರು ಶೆ. 35 ರಷ್ಟು) ಕೋಟ್ಯಾಧಿಪತಿಗಳು. ಅವರ ಸರಾಸರಿ ಆಸ್ತಿ 7.5 ಕೊಟಿ ರೂ.ಗಳು. ಬಿಜೆಪಿಯ 208, ಕಾಂಗ್ರೆಸಿನ 207, ಜೆಡಿ–ಎಸ್ ನ 154 ಅಭ್ಯರ್ಥಿಗಳು ಕೋಟ್ಯಾಧಿಪತಿಗಳು.

ಈ ಸಾಲಿನ ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಲಗತ್ತಿಸಿದ ಅಫಿಡವಿತ್ ಆಧಾರದಲ್ಲಿ 'ಕರ್ನಾಟಕ ಎಲೆಕ್ಷನ್ ವಾಚ್' ಹಾಗೂ 'ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ ಸಂಸ್ಥೆ' ಈ ವಿಶ್ಲೇಷಣೆ ನಡೆಸಿದೆ. ಶಾಸಕರ ಸಂಪತ್ತಿನಲ್ಲಿ ಶೇ 64ರಷ್ಟು ಹೆಚ್ಚಾಗಿದೆ ಎಂದೂ ಅದು ಹೇಳಿದೆ.

ಹುನಗುಂದದ ವಿಜಯಾನಂದ ಕಾಶಪ್ಪನವರ (ಕಾಂಗ್ರೆಸ್) ಶೇ 862, ಚಿಕ್ಕಬಳ್ಳಾಪುರದ ಡಾ.ಕೆ. ಸುಧಾಕರ್ (ಕಾಂಗ್ರೆಸ್) ಶೇ 572, ರಾಣೆಬೆನ್ನೂರಿನ ಕೆ.ಬಿ.ಕೋಳಿವಾಡ (ಕಾಂಗ್ರೆಸ್) ಶೇ 542, ಮಾಲೂರಿನ ಕೆ.ಎಸ್.ಮಂಜುನಾಥ ಗೌಡ (ಜೆಡಿಎಸ್) ಶೇ 528, ಚಿತ್ರದುರ್ಗದ ಜಿ.ಎಚ್.ತಿಪ್ಪಾರೆಡ್ಡಿ (ಬಿಜೆಪಿ) ಶೇ 418, ಗೌರಿಬಿದನೂರಿನ ಎನ್.ಎಚ್.ಶಿವಶಂಕರ ರೆಡ್ಡಿ (ಕಾಂಗ್ರೆಸ್) ಶೇ 392, ಚಳ್ಳಕೆರೆಯ ಟಿ.ರಘುಮೂರ್ತಿ (ಕಾಂಗ್ರೆಸ್) ಶೇ 377, ಶಿರಹಟ್ಟಿಯ ರಾಮಕೃಷ್ಣ ದೊಡ್ಡಮನಿ (ಕಾಂಗ್ರೆಸ್) ಶೇ 330, ಯಲಬುರ್ಗಾದ ಬಸವರಾಜ ರಾಯರಡ್ಡಿ (ಕಾಂಗ್ರೆಸ್) ಶೇ 275, ಹುಮನಾಬಾದಿನ ರಾಜಶೇಖರ ಪಾಟೀಲ (ಕಾಂಗ್ರೆಸ್) ಶೇ 246, ಮದ್ದೂರಿನ ಡಿ.ಸಿ. ತಮ್ಮಣ್ಣ (ಜೆಡಿಎಸ್) ಶೇ 245, ಇಂಧನ ಸಚಿವ ಡಿ.ಕೆ. ಶಿವಕುಮಾರ್ (ಕಾಂಗ್ರೆಸ್) ಶೇ 234, ಆಳಂದದ ಬಿ.ಆರ್.ಪಾಟೀಲ (ಕೆಜೆಪಿಯಿಂದ ಕಾಂಗ್ರೆಸ್ಗೆ ಸೇರಿರುವ) ಶೇ 220, ಶಿವಮೊಗ್ಗ ಗ್ರಾಮಾಂತರದ ಶಾರದಾ ಪೂರ್ಯಾನಾಯ್ಕ್ (ಜೆಡಿಎಸ್) ಆಸ್ತಿ ಶೇ 213 ಪಟ್ಟು ಹೆಚ್ಚಾಗಿದೆ.

ಇದು ಇವರು ಕೊಟ್ಟ ಅಫಿಡವಿತ್ ಆಧಾರದ ಮೇಲಿನ ವಿಶ್ಲೇಷಣೆ. ತಮ್ಮ ಎಲ್ಲಾ ಆಸ್ತಿಗಳನ್ನು ಯಾವ ಶಾಸಕನೂ ಪೂರ್ಣ ಘೋಷಣೆ ಮಾಡುತ್ತಾನೆ ಎಂದು ನಂಬಲು ಕಾರಣವಿಲ್ಲ. ಅಂದರೆ ಇದು ಕನಿಷ್ಟ (ಬೇನಾಮಿಯಲ್ಲಿಲ್ಲದ) ಆಸ್ತಿ. ನಿಜವಾದ ಹೆಚ್ಚಳ ಇನ್ನೂ ಹೆಚ್ಚು ಇರುತ್ತದೆ.

ಅಗ್ರ ಐವರು ಕುಬೇರರ ಆಸ್ತಿ ಹೆಚ್ಚಳದಲ್ಲೂ ಮೇಲಿನ ಸ್ಥಾನಗಳನ್ನು ಪಡೆದಿದ್ದಾರೆ. ಈ ಎಲ್ಲಾ ಐವರೂ ಕಾಂಗ್ರೆಸಿನವರು ಎನ್ನುವುದನ್ನು ಗಮನಿಸಬಹುದು. ಅವರ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಅಗ್ರ ಐವರು ಕುಬೇರ ಶಾಸಕರ ಆಸ್ತಿ ಹೆಚ್ಚಳ

ಶಾಸಕ	ಪಕ್ಷ	ಕ್ಷೇತ್ರ	2018 ಆಸ್ತಿ (ಕೋಟಿ ರೂ,ಗಳಲ್ಲಿ)	2013 ಆಸ್ತಿ (ಕೋಟಿ ರೂ,ಗಳಲ್ಲಿ)	ಹೆಚ್ಚಳದ ಪ್ರಮಾಣ (ಶೇ.)
ಪ್ರಿಯಕೃಷ್ಣ	ಕಾಂಗ್ರೆಸ್	ಗೋವಿಂದರಾಜನಗರ	1,020	910	12
ಎಂ.ಟಿ.ಬಿ.ನಾಗರಾಜ್	ಕಾಂಗ್ರೆಸ್	ಹೊಸಕೋಟೆ	1,015	470	116
ಡಿ.ಕೆ.ಶಿವಕುಮಾರ್	ಕಾಂಗ್ರೆಸ್	ಕನಕಪುರ	840	251	234
ಆರ್.ವಿ.ದೇಶಪಾಂಡೆ	ಕಾಂಗ್ರೆಸ್	ಹಳಿಯಾಳ	215	113	89
ಶಾಮನೂರು ಶಿವಶಂಕರಪ್ಪ	ಕಾಂಗ್ರೆಸ್	ದಾವಣಗೆರೆ ದಕ್ಷಿಣ	183	67	170

ಪಕ್ಷವಾರು ಶಾಸಕರ 2013ರ ಮತ್ತು 2018ರ ಸ್ವಯಂಘೋಷಿತ ಸರಾಸರಿ ಆಸ್ತಿ ಮತ್ತು ಆಸ್ತಿಯಲ್ಲಿ ಸರಾಸರಿ ಹೆಚ್ಚಳವನ್ನೂ ಇನ್ನೊಂದು ಕೋಷ್ಟಕದಲ್ಲಿ ಕೊಡಲಾಗಿದೆ. ಇಲ್ಲೂ ಸರಾಸರಿ ಆಸ್ತಿಯಲ್ಲಿ ಕಾಂಗ್ರೆಸ್ ಬಿಜೆಪಿ ಮತ್ತು ಜೆಡಿ–ಎಸ್ ನ ಸರಿಸುಮಾರು ಮೂರುವರೆ ಪಟ್ಟು ಇದೆ. ಜೆಡಿ–ಎಸ್ ಬಿಜೆಪಿಗಿಂತಲೂ ಸ್ವಲ್ಪ ಮುಂದಿದೆ. ಇದರಿಂದ ಬಿಜೆಪಿ ಕಡಿಮೆ ಭ್ರಷ್ಟ ಎಂದು ಹೇಳುವಂತಿಲ್ಲ. ಕಾಂಗ್ರೆಸ್ ಶಾಶಕರಿಗೆ ಆಸ್ತಿ ಮಾಡಲು ಸಮಯ ಮತ್ತು ಅವಕಾಶಗಳಿದ್ದವು. ಬಿಜೆಪಿ ಶಾಸಕರಿಗೆ ವಿರೋಧ ಪಕ್ಷದಲ್ಲಿ ಇದ್ದಿದ್ದರಿಂದ ಸಮಯ ಮತು ಅವಕಾಶಗಳು ಇರಲಿಲ್ಲ, ಎಂಬುದು ಕಾರಣವಿರಬಹುದು. ಜನಾರ್ಧನ ರೆಡ್ಡಿ ಈ ಪಟ್ಟಿಯಲ್ಲಿ ಇಲ್ಲದೆ ಇರುವುದೂ ಸರಾಸರಿ ಇಳಿಯಲು ಕಾರಣವಿರಬಹುದೇ?! ಆದರೆ ಬಿಜೆಪಿ ಶಾಸಕರೂ ಬಹಳ ಶೀಘ್ರ 'ಕ್ಯಾಚ್–ಅಪ್' ಮಾಡುತ್ತಿದ್ದಾರೆ. ಏಕೆಂದರೆ ಕಾಂಗ್ರೆಸ್–ಬಿಜೆಪಿ ಪಕ್ಷಗಳ ಸರಾಸರಿ ಹೆಚ್ಚಳದ ದರ ಸರಿಸುಮಾರು (ಶೇ. 66 ಮತ್ತು 65) ಒಂದೇ ಇದೆ. ಇದರಲ್ಲಿ ಜೆಡಿ–ಎಸ್ ಮಾತ್ರ ಸ್ವಲ್ಪ ಹಿಂದೆ ಇದೆ.

ಪಕ್ಷವಾರು ಶಾಸಕರ ಆಸ್ತಿ ಹೆಚ್ಚಳ

ಪಕ್ಷ	ಕಣದಲ್ಲಿರುವ ಶಾಸಕರು	2018 ಆಸ್ತಿ ಕೋಟಿ ರೂ.ಗಳಲ್ಲಿ	2013 ಆಸ್ತಿ ಕೋಟಿ ರೂ.ಗಳಲ್ಲಿ	ಆಸ್ತಿ ಹೆಚ್ಚಳ (ಶೇ.)
ಕಾಂಗ್ರೆಸ್	108	62	37	66
ಬಿಜೆಪಿ	49	17	10	65
ಜೆಡಿ–ಎಸ್	24	21	14	49
ಒಟ್ಟು	184	44	27	64

"ಪ್ಯಾರಿಸ್ ಕಮ್ಯೂನ್" ಯಾಕೆ ಓದಬೇಕು?

ವಸಂತರಾಜ ಎನ್.ಕೆ.

ನವಕರ್ನಾಟಕ ಮತ್ತು ಕ್ರಿಯಾ ಜಂಟಿಯಾಗಿ ಪ್ರಕಟಿಸುತ್ತಿರುವ "ಮಾರ್ಕ್ಸ್ 200-ಕ್ಯಾಪಿಟಲ್ 150" ಮಾಲಿಕೆಯ ಮೊದಲ ಎರಡು ಪುಸ್ತಕಗಳನ್ನು ಮೇ 20 ರಂದು ಬಿಡುಗಡೆ ಮಾಡಲಿದೆ. ಅಂದು ಬಿಡುಗಡೆಯಾಗುವ "ಫ್ರಾನ್ಸಿನ ಅಂತರ್ಯುದ್ಧ - ಪ್ಯಾರಿಸ್ ಕಮ್ಯೂನ್ : ಕಾರ್ಮಿಕರ ಮೊದಲ ಕ್ರಾಂತಿ"ಯಲ್ಲಿ ಪ್ರಕಟವಾಗಲಿರುವ ಮುನ್ನುಡಿ ಪುಸ್ತಕದ ಪರಿಚಯ ಮಾಡುವುದರಿಂದ ಮತ್ತು ಅದರ ಮಹತ್ವವನ್ನು ಸಾರುವುದರಿಂದ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಪ್ಯಾರಿಸ್ಸಿನ ಕಾರ್ಮಿಕರು 1871ರ ಮಾರ್ಚ್ 18 ರಂದು ತಮ್ಮ ನಗರವನ್ನು ಆಳುತ್ತಿದ್ದ ಬಂಡವಾಳಶಾಹಿಗಳನ್ನು ಓಡಿಸಿ, 10 ದಿನಗಳಲ್ಲಿ ಸ್ಥಾಪಿಸಿದ ಕಾರ್ಮಿಕರ ಆಡಳಿತವನ್ನು "ಪ್ಯಾರಿಸ್ ಕಮ್ಯೂನ್" ಎಂದು ಕರೆದರು. "ಪ್ಯಾರಿಸ್ ಕಮ್ಯೂನ್" ಜಗತ್ತಿನಲ್ಲೇ ಮೊದಲ ಕಾರ್ಮಿಕರ ಪ್ರಭುತ್ವ ಮತ್ತು ಕ್ರಾಂತಿ ಎಂದೇ ಆದರೂ ಅದು ಇನ್ನೂ ಹಲವು ರೀತಿಯಲ್ಲಿ ಚಿರಂತನ ಮಹತ್ವವನ್ನು ಪಡೆದಿದೆ. "ಪ್ಯಾರಿಸ್ ಕಮ್ಯೂನ್" ಎಂಬ ಕಾರ್ಮಿಕರ ಕ್ರಾಂತಿಕಾರಿ ಪ್ರಭುತ್ವವು ಕೇವಲ 72 ದಿನಗಳ ಕಾಲ ಮಾತ್ರ ಬಾಳಿತಾದರೂ, ಅದು ತನ್ನ ಸಾಧನೆ-ವೈಫಲ್ಯಗಳು ಬಲ-ದೌರ್ಬಲ್ಯಗಳು ಎರಡರಿಂದಾಗಿಯೂ ಆ ನಂತರದ ಕಾರ್ಮಿಕ ಪ್ರಭುತ್ವ ಮತ್ತು ಕ್ರಾಂತಿಗಳಿಗೆ ಸ್ಫೂರ್ತಿಯ ಚಿಲುಮೆಯೂ ದಾರಿದೀವಿಗೆಯೂ ಆಯಿತು. ಮಾರ್ಕ್ಸ್-ಎಂಗೆಲ್ಸ್ ಕಮ್ಯೂನಿನ ಹೋರಾಟಕ್ಕೆ ಸಕ್ರಿಯವಾದ ಭೌತಿಕ ಮತ್ತು ಸೈದ್ಧಾಂತಿಕ ಬೆಂಬಲ ಕೊಟ್ಟಿದ್ದಲ್ಲದೆ, ಅದರ ಅನುಭವವನ್ನು ಕ್ರೋಢೀಕರಿಸಿ ಮುಂದಿನ ಕ್ರಾಂತಿಗಳಿಗೆ ದಾರಿದೀವಿಗೆ ಆಗುವಂತೆ ಸಿದ್ಧಾಂತೀಕರಿಸಿದ ಕೃತಿಯೇ ನಿಮ್ಮ ಕೈಯಲ್ಲಿರುವ "ಫ್ರಾನ್ಸಿನ ಅಂತರ್ಯುದ್ಧ - 1871 (ಪ್ಯಾರಿಸ್ ಕಮ್ಯೂನ್ - ಕಾರ್ಮಿಕರ ಮೊದಲ ಕ್ರಾಂತಿ)". ಪ್ಯಾರಿಸ್ ಕಮ್ಯೂನ್‌ಅನ್ನು ಸ್ಥಾಪಿಸಿದ ಪ್ಯಾರಿಸಿನ ಕಾರ್ಮಿಕರು "ಸ್ವರ್ಗಕ್ಕೆ ಲಗ್ಗೆ ಹಾಕಿದ್ದರು" ಎಂದು ಅವರ ಕೆಚ್ಚನ್ನು ಮಾರ್ಕ್ಸ್ ಮೆಚ್ಚಿಕೊಂಡಿದ್ದಾರೆ. ಈ ಕೃತಿಯ ಅಧ್ಯಯನ ಮಾಡಿದವರೆಲ್ಲರೂ, ಪ್ರಮುಖವಾಗಿ ಲೆನಿನ್ ಮತ್ತು ಮಾವೋ, ಪ್ಯಾರಿಸ್ ಕಮ್ಯೂನ್‌ನ ಎಲ್ಲಾ ಸಕಾರಾತ್ಮಕ ಹಾಗೂ ನಕಾರಾತ್ಮಕ ಪಾಠಗಳನ್ನು ಸಫಲ ಕ್ರಾಂತಿಗಳಲ್ಲಿ ತಮ್ಮ ದೇಶ-ಕಾಲಕ್ಕೆ ಅನುಸಾರವಾಗಿ ಅನ್ವಯಿಸಿದರು. ಜಗತ್ತಿನಾದ್ಯಂತ ಕಾರ್ಮಿಕರ ಪ್ರಭುತ್ವ ಮತ್ತು ಸಮತಾವಾದಿ ಸಮಾಜ ಕಟ್ಟುವ ಕನಸು ಹೊತ್ತ ಎಲ್ಲರಿಗೂ ಇಂದಿಗೂ ಇದೊಂದು ಸ್ಫೂರ್ತಿದಾಯಕ ಮತ್ತು ದಾರಿದೀಪವಾಗಬಲ್ಲ ಕೃತಿ.

ಈ ಪುಸ್ತಕದಲ್ಲಿ 4 ಅಧ್ಯಾಯಗಳಿವೆ. ಇದು ಪ್ಯಾರಿಸ್ ಕಮ್ಯೂನಿನ 20ನೇ ವಾರ್ಷಿಕ ಸ್ಮರಣೆಯ (1891) ಸಂದರ್ಭದಲ್ಲಿ ಪ್ರಕಟವಾದ ಪುಸ್ತಕದ ಆವೃತ್ತಿಯ ಅನುವಾದ. ಪ್ಯಾರಿಸ್ ಕಮ್ಯೂನ್ ಬಗ್ಗೆ ಮಾರ್ಕ್ಸ್, ಅದು ಪತನವಾದ 2 ದಿನಗಳಲ್ಲಿ (ಮೇ 30, 1871) ಅಂತರ್ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯ ಜನರಲ್ ಕೌನ್ಸಿಲನ್ನು ಉದ್ದೇಶಿಸಿ ಬರೆದರು. ಈ ಬರಹದ ಕೊನೆಯ (ಅಂದರೆ 4ನೇ) ಅಧ್ಯಾಯ ಪುಸ್ತಕದ ಮುಖ್ಯ ಭಾಗ. ಅಧ್ಯಾಯ 2 ಮತ್ತು 3ರಲ್ಲಿ ಫ್ರಾನ್ಸ್-ಪ್ರಶ್ಯಾ ಯುದ್ಧದ ಬಗ್ಗೆ, ಮಿಲಿಟರಿವಾದ ಮತ್ತು ಯುದ್ಧಗಳ ವಿರುದ್ಧ ಶ್ರಮಜೀವಿಗಳ ಸಂಘಟನೆಯ ಧೋರಣೆ ಏನಿರಬೇಕು ಎಂದು ಮಾರ್ಕ್ಸ್ ವಿವರಿಸುತ್ತಾರೆ. ಫ್ರಾನ್ಸ್-ಪ್ರಶ್ಯಾ ಯುದ್ಧದ ಮೊದಲ ಘಟ್ಟದಲ್ಲಿ ಎರಡೂ ದೇಶಗಳ ಪ್ರತಿಗಾಮಿ ಆಳುವ ವರ್ಗಗಳು ಸಾಮ್ರಾಜ್ಯ ವಿಸ್ತರಣೆಗೆ ಹೂಡಿದ ಯುದ್ಧದ ಬಗ್ಗೆ ಜುಲೈ 23, 1870ರಂದು ಮಾರ್ಕ್ಸ್ ಮಾಡಿದ ಮೊದಲ ಭಾಷಣ, ಅಧ್ಯಾಯ 2ರಲ್ಲಿ ಇದೆ. ಯುದ್ಧಗಳನ್ನು ಶ್ರಮಜೀವಿಗಳು ವಿರೋಧಿಸಬೇಕು. ಶ್ರಮಜೀವಿಗಳು ತರುವ ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ ಶಾಂತಿಯು ಸಾಮಾನ್ಯ ನಿಯಮವಾಗಿರುತ್ತದೆ, ಏಕೆಂದರೆ ಆಗ ಎಲ್ಲಾ ದೇಶಗಳಲ್ಲಿನ ಆಳ್ವಿಕೆಯು ಶ್ರಮಜೀವಿ ವರ್ಗದ್ದೇ ಆಗಿರುತ್ತದೆ, ಎಂದು ಮಾರ್ಕ್ಸ್ ಅದರಲ್ಲಿ ಪ್ರತಿಪಾದಿಸುತ್ತಾರೆ. ಫ್ರಾನ್ಸ್ ಯುದ್ಧದಲ್ಲಿ ಸೋತು ಪ್ರಶ್ಯಾ ಫ್ರಾನ್ಸಿನ ಹಲವು ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಫ್ರಾನ್ಸ್-ಪ್ರಶ್ಯಾ ಯುದ್ಧದ ಎರಡನೇ ಘಟ್ಟದಲ್ಲಿ, ಶ್ರಮಜೀವಿಗಳ ಸಂಘಟನೆಯ ಧೋರಣೆ ಏನಿರಬೇಕು ಎಂಬುದರ ಬಗ್ಗೆ ಅಧ್ಯಾಯ 3ರಲ್ಲಿ ಹೇಳಲಾಗಿದೆ. ಎರಡನೇ ಘಟ್ಟದಲ್ಲಿ ಫ್ರೆಂಚ್ ಪ್ರದೇಶಗಳನ್ನು ಪ್ರಶ್ಯಾ ವಶಪಡಿಸಿಕೊಂಡಿದ್ದರಿಂದ, ಫ್ರಾನ್ಸಿನ ಮಟ್ಟಿಗೆ ಆ ಯುದ್ಧವು ವಿಮೋಚನಾ ಯುದ್ಧವಾಗಿದೆ ಎಂದು ಮಾರ್ಕ್ಸ್ ವಾದಿಸುತ್ತಾರೆ. ಪ್ರತಿಗಾಮಿ ಶಕ್ತಿಗಳು ಇನ್ನೂ ಪ್ರಬಲವಾಗಿರುವಾಗ ಈ ಹಂತದಲ್ಲಿ ರಿಪಬ್ಲಿಕನ್ ಸಂವಿಧಾನ ಕೊಡುವ ಅವಕಾಶವನ್ನು ಬಳಸಿ ರಾಜಕೀಯವಾಗಿ ಗಟ್ಟಿಯಾಗಬೇಕು. ಅಕಾಲಿಕವಾಗಿ ದಂಗೆಯೆದ್ದರೆ ಅದು ರಾಜಸತ್ತೆಯ ಮರುಸ್ಥಾಪನೆಗೆ ಸಹಾಯಕವಾಗಬಹುದು ಎಂದು ಎಚ್ಚರಿಸುತ್ತಾರೆ. ಆದರೆ ನಿಜವಾಗಿಯೂ ವಿಶಿಷ್ಟ ಪರಿಸ್ಥಿತಿಯಲ್ಲಿ ಜನರು ದಂಗೆಯೆದ್ದಾಗ ಅದನ್ನು ಸ್ವಾಗತಿಸುತ್ತಾರೆ. ಇತರ ಆರಾಮಕುರ್ಚಿ ಬುದ್ಧಿಜೀವಿಗಳಂತೆ ಟೀಕಿಸುವುದಿಲ್ಲ.

ಪುಸ್ತಕದ ಮುಖ್ಯ ಭಾಗವಾದ ಅಧ್ಯಾಯ 4ರಲ್ಲಿ ನಾಲ್ಕು ಭಾಗಗಳಿವೆ. ಇವು ಕ್ರಮವಾಗಿ ಕಮ್ಯೂನಿನ ಹಿನ್ನೆಲೆ, ಹುಟ್ಟು, ಬೆಳವಣಿಗೆ ಮತ್ತು ಅವಸಾನದ ಹಂತಗಳನ್ನು ಕುರಿತಾಗಿ ಇವೆ. ಫ್ರೆಂಚ್ ಸರಕಾರದ ಶರಣಾಗತಿ ಮತ್ತು ಥೀಯರ್ಸ್ ಸರಕಾರ, ಪ್ಯಾರಿಸ್ ಕಾರ್ಮಿಕರನ್ನು ನಿಶ್ಶಸ್ತ್ರಗೊಳಿಸುವ ಪ್ರಯತ್ನದಲ್ಲಿ ನರಮೇಧ ಮತ್ತು ಕ್ರಾಂತಿ, ಪ್ಯಾರಿಸ್ ಕಮ್ಯೂನ್‌ನ ರಚನೆ ಮತ್ತು ಕೆಲಸ, ಕಮ್ಯೂನಿನ ಪತನ ಮತ್ತು ಅವಸಾನ – ಈ ಹಂತಗಳ ಘಟನಾವಳಿಗಳನ್ನು ಮಾರ್ಕ್ಸ್ ವಿವರಿಸುತ್ತಾ, ಕಾರ್ಮಿಕ ಕ್ರಾಂತಿಯ ಪ್ರಮುಖ ಆಯಾಮಗಳನ್ನು ಗುರುತಿಸುತ್ತಾರೆ. ಕಮ್ಯೂನ್ ಸಫಲ ಕ್ರಾಂತಿಯಲ್ಲದಿದ್ದರೂ ಅದೊಂದು ಚಾರಿತ್ರಿಕ ಮಹತ್ವದ ಜಾಗತಿಕ ಸಮಾಜವಾದಿ ಕ್ರಾಂತಿಯ ಬೆಳವಣಿಗೆಯಲ್ಲಿ ಒಂದು ನೆಗೆತ ಎಂದು ಗ್ರಹಿಸುತ್ತಾರೆ. ಪ್ಯಾರಿಸ್ ಕಮ್ಯೂನ್ ಸಾಧ್ಯವಾಗಿದ್ದು ಫ್ರಾನ್ಸ್-ಪ್ರಶ್ಯಾ ಯುದ್ಧದ ವಿಶಿಷ್ಟ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗ ಸಶಸ್ತ್ರವಾಗಿದ್ದುದರಿಂದ ಎಂದು ಗುರುತಿಸುತ್ತಾರೆ. ಅವರು ಕಮ್ಯೂನ್ ನಾಯಕರನ್ನು ಹಲವು ತಪ್ಪುಗಳಿಗಾಗಿ ಟೀಕಿಸುತ್ತಾರೆ ಕೂಡಾ. ಅವುಗಳಲ್ಲಿ ಬಂಡವಾಳಶಾಹಿಗಳ ಆರ್ಥಿಕ ಶಕ್ತಿಯನ್ನು ದಮನ ಮಾಡದೇ ಹೋದದ್ದೂ ಒಂದು. ಭೌತವಾದಿಯಾಗಿದ್ದ ಮಾರ್ಕ್ಸ್ ನೂರು ಕಾರ್ಯಕ್ರಮಗಳು, ವಾದ-ವಿವಾದ, ಸಿದ್ಧಾಂತಗಳಿಗಿಂತ ವಾಸ್ತವದಲ್ಲಿ ಕೆಲಸ ಮಾಡಿದ ಕಾರ್ಮಿಕ ಕ್ರಾಂತಿ ಮತ್ತು ಪ್ರಭುತ್ವದ ನಿರ್ದಿಷ್ಟ ಅಧ್ಯಯನದಿಂದ ಹೊಮ್ಮಿದ ನೀತಿಗಳು ಹೆಚ್ಚು ಮಹತ್ವದ್ದು ಎಂದು ಅವನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ. ಅವುಗಳಿಂದ ಹೊಮ್ಮಿದ ಕಾರ್ಮಿಕ ಕ್ರಾಂತಿ ಮತ್ತು ಪ್ರಭುತ್ವದ ಕೆಲವು ಸಾಮಾನ್ಯ ನಿಯಮಗಳನ್ನು ನಿರೂಪಿಸುತ್ತಾರೆ.

ಈ ಎರಡೂ ಘಟ್ಟಗಳ ಫ್ರಾನ್ಸ್-ಪ್ರಶ್ಯಾ ಯುದ್ಧದ ಸ್ವರೂಪ ಆ ಮೇಲಿನ ಪ್ಯಾರಿಸ್ ಕಮ್ಯೂನ್ ಕ್ರಾಂತಿ ಅರ್ಥೈಸಲು ಆವಶ್ಯಕ ಹಿನ್ನೆಲೆ. ಮೊದಲ ಅಧ್ಯಾಯ ಎಂಗೆಲ್ಸ್ 1891ರಲ್ಲಿ ಪ್ರಕಟವಾದ ಪುಸ್ತಕಕ್ಕೆ ಬರೆದ ಮುನ್ನುಡಿ. ಕಮ್ಯೂನಿನ ಒಟ್ಟು ಅನುಭವಗಳನ್ನು ಕ್ರೋಢೀಕರಿಸಿ, ಅದರಿಂದ ಮಾರ್ಕ್ಸ್ ಸಿದ್ಧಪಡಿಸಿದ ಪ್ರಭುತ್ವ, ಸಮಾಜವಾದಿ ಕ್ರಾಂತಿ ಮತ್ತು ಕಾರ್ಮಿಕರ ಸರ್ವಾಧಿಕಾರದ ಸಿದ್ಧಾಂತದ ಮುಖ್ಯ ಅಂಶಗಳ ಸಾರಾಂಶವನ್ನು ಎಂಗೆಲ್ಸ್ ತನ್ನ ಮುನ್ನುಡಿಯಲ್ಲಿ ಪರಿಣಾಮಕಾರಿಯಾಗಿ ಹೇಳುತ್ತಾರೆ. ಈ ಪುಸ್ತಕದ ಪ್ರಕಟಣೆಯ ಮೊದಲೂ ಮತ್ತು ಆ ನಂತರವೂ ಮಾರ್ಕ್ಸ್ ಬರೆದ ಅಗಣಿತ ಪುಸ್ತಕಗಳು, ಲೇಖನಗಳು, ಪತ್ರಗಳಲ್ಲಿ ಕಮ್ಯೂನಿನ ಬಗ್ಗೆ ಕೊಡುವ ಶ್ರೀಮಂತ ಒಳನೋಟಗಳು, ವಿವರಗಳ ಸಾರಾಂಶವನ್ನು ಎಂಗೆಲ್ಸ್ ಪ್ರಸ್ತುತಪಡಿಸುತ್ತಾರೆ. ಫ್ರಾನ್ಸ್-ಪ್ರಶ್ಯಾ ಯುದ್ಧದಿಂದ ಆರಂಭವಾಗಿ ಪ್ಯಾರಿಸ್ ಕಮ್ಯೂನಿನ ಅವಸಾನದೊಂದಿಗೆ ಕೊನೆಯಾದ ಈ ಕೆಲವು ತಿಂಗಳುಗಳ ಸಂಕೀರ್ಣ ಬೆಳವಣಿಗೆಗಳ ಅನುಭವಗಳ ನಿರೂಪಣೆಯನ್ನು ಆ ನಂತರದ ಎರಡು ದಶಕಗಳ ಕಾರ್ಮಿಕರ ಚಳುವಳಿಯ ಅನುಭವಗಳು ಮತ್ತು ಚರ್ಚೆಗಳ ಮೂಲಕ ಶ್ರೀಮಂತಗೊಳಿಸುತ್ತಾರೆ. ಕಮ್ಯೂನ್ ಕಾರ್ಯನಿರತವಾಗಿದ್ದಾಗಲೂ, ಮತ್ತು ಆಮೇಲೂ ಬ್ಲಾಂಕಿ ಮತ್ತು ಪ್ರೂಧೋನ್‌ರ ಅನುಯಾಯಿಗಳು ಮತ್ತು ಸೋಶಿಯಲ್ ಡೆಮೊಕ್ರಾಟರು ಮಾಡುವ ತಪ್ಪುಗಳನ್ನು ಎತ್ತಿ ತೋರಿಸುತ್ತಾರೆ. ಅವರ ಮತ್ತು ಇತರ ಕಾರ್ಮಿಕ ಚಳುವಳಿಯಲ್ಲಿ ಇರುವ ಕೆಲವರ ಮತ್ತು ಬೂರ್ಜ್ವಾ ಪ್ರತಿನಿಧಿಗಳ ಕಮ್ಯೂನಿನ ಅರ್ಥೈಸುವಿಕೆಯನ್ನು ವಿಮರ್ಶೆಗೆ ಒಳಪಡಿಸುತ್ತಾರೆ.



"ಪ್ಯಾರಿಸ್ ಕಮ್ಯೂನ್ ನಾಶವಾದರೆ, ಈ ಸಂಘರ್ಷ ಮುಂದಕ್ಕೆ ಹೋಗುತ್ತದೆ, ಅಷ್ಟೆ. ಕಮ್ಯೂನ್‌ನ ಧೋರಣೆಗಳು ಚಿರಂತನ ಮತ್ತು ಅಳಿಸಲಾಗದವು; ಅವು ಕಾರ್ಮಿಕ ವರ್ಗದ ವಿಮೋಚನೆ ಆಗುವವರೆಗೆ ಮತ್ತೆ ಮತ್ತೆ ಮರುಕಳಿಸುತ್ತಲೇ ಇರುತ್ತವೆ"

– ಮಾರ್ಕ್ಸ್

ಈ ಕೃತಿಯನ್ನು ಮತ್ತು ಮಾರ್ಕ್ಸ್-ಎಂಗೆಲ್ಸ್‌ರ ಆ ಮೇಲಿನ ಹಲವು ಕೃತಿಗಳು, ಪತ್ರ-ಭಾಷಣ-ಲೇಖನಗಳನ್ನೂ, ಆಮೇಲಿನ ಕಾರ್ಮಿಕ ಚಳುವಳಿಗಳ ಅನುಭವಗಳನ್ನೂ ಅಧ್ಯಯನ ಮಾಡಿದ ಲೆನಿನ್, ಸರಿಸುಮಾರು ಐದು ದಶಕಗಳ ನಂತರ, ಬಂಡವಾಳಶಾಹಿಯ ಸಾಮ್ರಾಜ್ಯಶಾಹಿ ಘಟ್ಟದಲ್ಲಿಯೂ ಕಮ್ಯೂನಿನ ವಿಶ್ಲೇಷಣೆಯಿಂದ ಹೊಮ್ಮಿದ ಕಾರ್ಮಿಕ ಕ್ರಾಂತಿಯ ಮತ್ತು ಪ್ರಭುತ್ವದ ಪ್ರಮುಖ ಅಂಶಗಳು ಪ್ರಸ್ತುತವೆಂದು ಹೇಳುತ್ತಾರೆ. "ಪ್ರಭುತ್ವ ಮತ್ತು ಕ್ರಾಂತಿ" ಎಂಬ ಮಹತ್ವದ ಕೃತಿಯಲ್ಲಿ ಒಂದು ಇಡೀ ಅಧ್ಯಾಯವನ್ನು ಅವರು ಕಮ್ಯೂನಿನ ಬಗ್ಗೆ ಮಾರ್ಕ್ಸ್ ಮಾಡಿದ ವಿಶ್ಲೇಷಣೆಗೆ ಮೀಸಲಾಗಿಡುತ್ತಾರೆ. 20ನೇ ಶತಮಾನದ ಕ್ರಾಂತಿಗಳಿಗೂ ಅದರ ಪ್ರಸ್ತುತತೆಯನ್ನು ಒತ್ತಿ ಹೇಳುತ್ತಾರೆ. ಅವರು ಕಮ್ಯೂನಿನ ಬಗ್ಗೆ ಮಾರ್ಕ್ಸ್ ವಿಶ್ಲೇಷಣೆಯ ಪ್ರಮುಖ ಅಂಶಗಳನ್ನು ಪಟ್ಟಿ ಮಾಡುತ್ತಾ, ಐದು ದಶಕಗಳಲ್ಲಿ ಅವುಗಳಲ್ಲಿ ಕೆಲವನ್ನು ನಿರ್ಲಕ್ಷ ಮಾಡಿದ, ಕೆಲವನ್ನು ವಿಕೃತಗೊಳಿಸಿದ ಕಾರ್ಮಿಕ ಮತ್ತು ಸಮಾಜವಾದಿ ಚಳುವಳಿಯ ನಾಯಕರನ್ನು ತೀವ್ರವಾಗಿ ಟೀಕೆಗೊಳಪಡಿಸುತ್ತಾರೆ. ಲೆನಿನ್ "ಪ್ರಭುತ್ವ ಮತ್ತು ಕ್ರಾಂತಿ"ಯಲ್ಲಿ ನಿರೂಪಿಸುವ, ಈಗಲೂ ಮನನೀಯವಾಗಿರುವ ಪ್ರಮುಖ ಅಂಶಗಳು ಹೀಗಿವೆ:

- ಬಂಡವಾಳಶಾಹಿ ಮಿಲಿಟರಿ-ಅಧಿಕಾರಶಾಹಿ-ನ್ಯಾಯಾಲಯಗಳ ಪ್ರಭುತ್ವ ಯಂತ್ರವನ್ನು ಅದು ಇರುವಹಾಗೆಯೇ ಅಥವಾ ಬದಲಾಯಿಸಿ ಸಹ ಸಮಸಮಾಜ ಕಟ್ಟಲು ಬಳಸಲಸಾಧ್ಯ. ಬಂಡವಾಳಶಾಹಿ ಪ್ರಭುತ್ವ ಯಂತ್ರವನ್ನು ನಾಶ ಮಾಡುವುದು ಜನತಾ ಕ್ರಾಂತಿಯ ಮೊದಲ ಕೆಲಸ. ಇದನ್ನು ಹಲವು ಪರಿಷ್ಕರಣವಾದಿಗಳು ನಿರ್ಲಕ್ಷ ಮಾಡುವ, ವಿಕೃತಗೊಳಿಸುವ (ಕೆಲವರು ಮಾರ್ಕ್ಸ್‌ನ ಹೆಸರಲ್ಲೇ) ಪ್ರಯತ್ನವನ್ನು ಮಾಡಿದ್ದಾರೆ. ಆದರೆ 1872ರ ಕಮ್ಯುನಿಸ್ಟ್ ಪ್ರಣಾಳಿಕೆಯ ಅವತರಣಿಕೆಯಲ್ಲಿಯೇ ತಿದ್ದುಪಡಿಯಾಗಿ ಸೇರಿಸುವಷ್ಟು ಇದನ್ನು ಮೂಲಭೂತ ಅಂಶ ಎಂದು ಮಾರ್ಕ್ಸ್-ಎಂಗೆಲ್ಸ್‌ರು ಪರಿಗಣಿಸಿದ್ದರು. ಈ ಪ್ರಭುತ್ವಯಂತ್ರದ ಜಾಗದಲ್ಲಿ ಬರುವ ಆಡಳಿತಯಂತ್ರವು ಕಾರ್ಮಿಕ ವರ್ಗವನ್ನು ಆಳುವವರ್ಗವನ್ನಾಗಿಸುವಂಥದು ಮತ್ತು ಪ್ರಜಾಪ್ರಭುತ್ವದ ಹೋರಾಟವನ್ನು ಗೆಲ್ಲುವಂಥದೂ ಆಗಿರಬೇಕು.
- ಇದರರ್ಥ ಪಾರ್ಲಿಮೆಂಟ್ ಅಥವಾ ಚುನಾಯಿತ ಸಂಸ್ಥೆಗಳನ್ನು ರದ್ದು ಮಾಡುವುದಲ್ಲ. ಅವು ಬರಿಯ "ಮಾತನಾಡುವ" ಸಂಸ್ಥೆಗಳಾಗಿರದೆ "ಕೆಲಸ ಮಾಡುವ" ಸಂಸ್ಥೆಗಳೂ ಆಗಿರಬೇಕು. ಕಮ್ಯೂನ್ ಬರಿಯ 'ಹರಟೆಕಟ್ಟೆ'ಯಂತಹ ಪಾರ್ಲಿಮೆಂಟರಿ ಸಂಸ್ಥೆ ಆಗಿರಲಿಲ್ಲ. ಅದು ಶಾಸಕಾಂಗ ಮತ್ತು ಕಾರ್ಯಾಂಗ ಎರಡೂ ಆಗಿತ್ತು. ಕಾರ್ಮಿಕ ಕ್ರಾಂತಿಯ ನಂತರ ಶಾಶ್ವತ ಮಿಲಿಟರಿ-ಅಧಿಕಾರಶಾಹಿ-ನ್ಯಾಯಾಲಯ ವ್ಯವಸ್ಥೆಯನ್ನು ರದ್ದು ಮಾಡಬೇಕು. ಸಾರ್ವಜನಿಕ ಕೆಲಸ ಮಾಡುವ ಎಲ್ಲರೂ ಚುನಾಯಿತರಾಗಿರಬೇಕು. ಮಾತ್ರವಲ್ಲ, ತಮ್ಮ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಅವರನ್ನು ವಾಪಸು ಕರೆಯುವುದು ಸಾಧ್ಯವಾಗಬೇಕು. ಇಂತಹ ಸಾರ್ವಜನಿಕ ಕೆಲಸಗಾರರಿಗೆ ಯಾವುದೇ ವಿಶೇಷ ಸವಲತ್ತುಗಳಿರಬಾರದು. ಅವರಿಗೆ ಸರಾಸರಿ ಕಾರ್ಮಿಕನ ಕೂಲಿಯಷ್ಟೇ ವೇತನವಿರಬೇಕು. ಅಂದರೆ ಈ ಪ್ರಜಾಪ್ರಭುತ್ವವು ಬೂರ್ಜ್ವಾ ಪ್ರಜಾಪ್ರಭುತ್ವವನ್ನು ವಿಸ್ತರಿಸುವಂಥದ್ದು ಮತ್ತು ಹೆಚ್ಚು ಪೂರ್ಣವಾದದ್ದು ಹಾಗೂ ಗುಣಾತ್ಮಕವಾಗಿ ಭಿನ್ನವಾಗಿರುವಂಥದ್ದು ಆಗಿರಬೇಕು. ಬೂರ್ಜ್ವಾ ಪ್ರಜಾಪ್ರಭುತ್ವದಡಿ ಕಾರ್ಮಿಕ ವರ್ಗದ ರಾಜಕೀಯ ಬಲವನ್ನು ಬೆಳೆಸುವ ಅವಕಾಶಗಳನ್ನು ಬಳಸಿಕೊಳ್ಳುತ್ತಲೇ, ಅದು ಬೂರ್ಜ್ವಾ ಪ್ರಭುತ್ವದ ಅಂಗ ಎಂಬುದನ್ನು ಮರೆತುಬಿಡುವ ಪಾರ್ಲಿಮೆಂಟರಿವಾದಿಗಳು ಕಮ್ಯೂನಿನ ಪಾಠಗಳನ್ನು ಕಲಿಯಬೇಕು.
- ಇಂತಹ ಕ್ರಾಂತಿ ಕಾರ್ಮಿಕ ವರ್ಗದ ಕ್ರಾಂತಿ ಮಾತ್ರ ಆಗುವುದು ಸಾಧ್ಯವಿಲ್ಲ. ಅದು ದೇಶದ ಬಹುಸಂಖ್ಯಾತರನ್ನು ಒಳಗೊಳ್ಳುವ ಜನತಾ ಕ್ರಾಂತಿಯಾಗಬೇಕು. ಬಂಡವಾಳಶಾಹಿ ಪ್ರಭುತ್ವ ಯಂತ್ರದಿಂದ ಸಮಾನವಾಗಿ ದಮನಕ್ಕೊಳಗಾಗುವ ಕಾರ್ಮಿಕ ಮತ್ತು ರೈತರ ಸಖ್ಯತೆಯಿಂದ ಮಾತ್ರ ಇದು ಸಾಧ್ಯ. ಇಂತಹ ಸಖ್ಯತೆಯಿಲ್ಲದೆ ಪ್ರಜಾಸತ್ತೆ ಸುಭದ್ರವಾಗಿರುವುದಿಲ್ಲ, ಸಮಾಜವಾದಿ ಬದಲಾವಣೆ ಸಾಧ್ಯವಾಗುವುದಿಲ್ಲ. ಬಂಡವಾಳಶಾಹಿಯನ್ನು ಮಾತ್ರ ದಮನ

ಪುಟ 11 ಕ್ಕೆ



ಇರಾನ್ ಬಗ್ಗೆ ಟ್ರಂಪ್ ಅಪಾಯಕಾರಿ ನಡೆ



ನಿರೀಕ್ಷೆಯಂತೆ, ಇರಾನ್ ಜೊತೆಗಿನ ಅಣ್ವಸ್ತ್ರ ಒಪ್ಪಂದದಿಂದ ಹಿಂದೆ ಸರಿಯುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇರಾನ್ ಜೊತೆ ಆರು ದೇಶಗಳು ಮಾಡಿಕೊಂಡಿರುವ ಈ ಜಂಟಿ ಸಮಗ್ರ ಕಾರ್ಯ ಯೋಜನೆ ಒಡಂಬಡಿಕೆಯಿಂದ ಹಿಂದೆ ಸರಿಯುವ ಈ ಭಂಡ ಮತ್ತು ಅಸಮರ್ಥನೀಯ ಕ್ರಮ ಮಧ್ಯಪೂರ್ವದ ಶಾಂತಿ ಪ್ರಕ್ರಿಯೆ ಮೇಲೆ ಗಂಭೀರ ಪರಿಣಾಮಗಳನ್ನು ಬೀರಲಿದೆ.

ಇರಾನ್ ಮತ್ತು ಪಿ5+1, ಅಂದರೆ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ಐದು ಕಾಯಂ ದೇಶಗಳಾದ ಅಮೇರಿಕ, ರಷ್ಯಾ, ಚೀನಾ, ಫ್ರಾನ್ಸ್, ಬ್ರಿಟನ್; ಹಾಗೂ ಜರ್ಮನಿ ಜೊತೆ ದೀರ್ಘ ಕಾಲದ ಸಮಾಲೋಚನೆಗಳ ನಂತರ 2015ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಇರಾನ್‌ನಲ್ಲಿರುವ ಪರಮಾಣು ರಿಯಾಕ್ಟರ್‌ಗಳು ಉತ್ಪಾದಿಸುವ ಇಂಧನವನ್ನು ಸಮೃದ್ಧಗೊಳಿಸುವುದರ (ಎನ್‌ರಿಚ್‌ಮೆಂಟ್) ಮೇಲೆ ಈ ಒಪ್ಪಂದ ಮಿತಿ ಹೇರಿತ್ತು. ಭಾರ ಜಲವನ್ನು ವಿದೇಶಗಳಿಗೆ ರಫ್ತು ಮಾಡುವುದಕ್ಕೂ ಅದು ಅವಕಾಶ ಕಲ್ಪಿಸಿತ್ತು ಹಾಗೂ ಇರಾನ್‌ನ ಪರಮಾಣು ಸ್ಥಾವರಗಳ ಕಟ್ಟುನಿಟ್ಟಿನ ಪರಿಶೀಲನೆಗೆ ಅವಕಾಶ ಮಾಡಿಕೊಟ್ಟಿತ್ತು. ಇವುಗಳಿಗೆ ಪ್ರತಿಯಾಗಿ, ಒಪ್ಪಂದದ ಇರಾನ್ ತನ್ನ ಭಾಗವನ್ನು ಅನುಷ್ಠಾನಗೊಳಿಸಿದ್ದಕ್ಕೆ ಅನುಗುಣವಾಗಿ, ಅದರ ಮೇಲೆ ಹೇರಿರುವ ನಿರ್ಬಂಧಗಳನ್ನು ಹಂತಹಂತವಾಗಿ ತೆಗೆದು ಹಾಕಬೇಕೆಂದು ಒಪ್ಪಲಾಗಿತ್ತು.

ಈ ಪರಮಾಣು ಒಪ್ಪಂದ ಬಯಸಿದ ಫಲಿತಾಂಶ ನೀಡಿದೆ ಎಂಬುದನ್ನು ಎಲ್ಲಾ ವರದಿಗಳು ತೋರಿಸಿದ್ದವು. ತೀರಾ ಇತ್ತೀಚೆಗೆ, ಅಂದರೆ 2018 ಫೆಬ್ರವರಿಯಲ್ಲಿ, ಇರಾನ್ ಒಡಂಬಡಿಕೆಗೆ ಅನುಗುಣವಾಗಿ ನಡೆದುಕೊಳ್ಳುತ್ತಿದೆ ಎಂದು ಅಂತಾರಾಷ್ಟ್ರೀಯ ಅಣು ಇಂಧನ ಸಂಸ್ಥೆ (ಐಎಇಎ) ಹೇಳಿತ್ತು.

ಆದರೆ, ದಿಗ್ಬಂಧನಗಳ ನಿರ್ಬಂಧಗಳಿಲ್ಲದೆ ಇರಾನ್ ಆರ್ಥಿಕವಾಗಿ ಸಬಲವಾಗಿ ಬೆಳೆದು ಈ ಪ್ರದೇಶದಲ್ಲಿ ಒಂದು ಪೂರ್ಣ ಪ್ರಮಾಣದ ಪ್ರಬಲ ಶಕ್ತಿಯಾಗಿ ಹೊರಹೊಮ್ಮುವುದು ಅಮೆರಿಕ ಸಾಮ್ರಾಜ್ಯಶಾಹಿ ವಲಯಗಳಿಗೆ ಎಂದೂ ಇಷ್ಟವಿಲ್ಲದ ವಿಚಾರ. ಅಮೆರಿಕದ ಭದ್ರತಾ ವ್ಯವಸ್ಥೆಯ ಒಂದು ಪ್ರಭಾವಿ ವಿಭಾಗ ಜಾರ್ಜ್ ಬುಷ್ ಕಾಲದಿಂದಲೂ ಪಶ್ಚಿಮ ಏಷ್ಯಾದಲ್ಲಿ ಇರಾನ್ ಮುಖ್ಯ ಅಪಾಯ ಎಂದು ಪರಿಗಣಿಸುತ್ತಾ ಬಂದಿದೆ. ಸಿರಿಯಾದಲ್ಲಿ ಇತ್ತೀಚೆಗೆ ಅಷರ್ ಅಲ್ ಅಸದ್ ಸರಕಾರವು ಅಮೆರಿಕ ಮತ್ತು ಅದರ ಪ್ರಾದೇಶಿಕ ಮಿತ್ರರಾದ ಸೌದಿ ಅರೇಬಿಯಾದಂಥ ದೇಶಗಳ ಬೆಂಬಲಿತ ಸಶಸ್ತ್ರ ಬಂಡಾಯವನ್ನು ರಷ್ಯಾ ಹಾಗೂ ಇರಾನ್ ನೆರವಿನಿಂದ ವಿಫಲಗೊಳಿಸಿದ್ದು ಇರಾನ್ ಬಗ್ಗೆ ಅವರು ಹಬ್ಬಿಸುತ್ತಿರುವ ಚಿತ್ತಭ್ರಾಂತಿಯನ್ನು ಹೆಚ್ಚಿಸಿದೆ ಅಷ್ಟೆ.

ಅಮೆರಿಕನ್ ಅಧ್ಯಕ್ಷರ ಭಂಡ ಮತ್ತು ಅಸಮರ್ಥನೀಯ ಕ್ರಮ ಮಧ್ಯಪೂರ್ವದ ಶಾಂತಿ ಪ್ರಕ್ರಿಯೆ ಮೇಲೆ ಗಂಭೀರ ಪರಿಣಾಮಗಳನ್ನು ಬೀರಲಿದೆ. ತನ್ನ ಒಡಂಬಡಿಕೆಗಳು ಮತ್ತು ಬದ್ಧತೆಗಳಿಗೆ ನಿಷ್ಠವಾಗಿರುವಲ್ಲಿ ಅಮೆರಿಕವು ನಂಬಿಕೆಗೆ ಅರ್ಹವಲ್ಲ ಎನ್ನುವುದನ್ನು ಟ್ರಂಪ್ ಸಾಬೀತುಪಡಿಸಿದ್ದಾರೆ. ಭಾರತದ ಮಟ್ಟಿಗೂ ಈ ಕ್ರಮ ಒಂದು ತೀವ್ರ ಕಳವಳದ ಸಂಗತಿ. ಇರಾನಿನೊಂದಿಗೆ ಮತ್ತೆ ಬೆಸೆದಿರುವ ಸಂಬಂಧಗಳನ್ನು ಕಡಿದುಕೊಳ್ಳುವಂತೆ ಭಾರತದ ಮೇಲೆ ಅಮೆರಿಕ ಒತ್ತಡ ಹೇರುತ್ತದೆಂದು ನಿರೀಕ್ಷಿಸಬಹುದು. ದೂರದೃಷ್ಟಿಯ ಕೊರತೆಯಿಂದಾಗಿ ಅಮೆರಿಕವನ್ನು ವ್ಯೂಹಾತ್ಮಕವಾಗಿ ಗಾಢವಾಗಿ ಅಪ್ಪಿಕೊಂಡಿರುವ ಮೋದಿ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಹಾಗೂ ಇರಾನ್ ಜೊತೆಗಿನ ಸಂಬಂಧಗಳನ್ನು ಹಾಳು ಮಾಡಿಕೊಳ್ಳುವ ಒತ್ತಡಗಳಿಗೆ ಬಲಿಯಾಗಬಾರದು. ಹಾಗೇನಾದರೂ ಮಾಡಿದರೆ ಅದು ರಾಷ್ಟ್ರೀಯ ಹಿತಗಳಿಗೆ ಮಾರಕವಾಗುತ್ತದೆ.



* ಪ್ರಕಾಶ್ ಕಾರಟ್

ಇಸ್ರೇಲ್‌ನ ನೇತ್ಯಾನಹು ಸರಕಾರ ಈ ಪರಮಾಣು ಒಪ್ಪಂದದ ಮೇಲೆ ಆಕ್ರಮಣ ನಡೆಸುವಲ್ಲಿ ಮುಂಚೂಣಿಯಲ್ಲಿದ್ದು ಇದೀಗ ಅದಕ್ಕೆ ಟ್ರಂಪ್ ಬೆಂಬಲ ದೊರಕಿದೆ. ಈ ವಲಯದಲ್ಲಿ ಇಸ್ರೇಲ್ ಮಾತ್ರವೇ ಅಣ್ವಸ್ತ್ರ–ಶಕ್ತ ದೇಶವಾಗಿರಬೇಕೆಂಬುದು ಅಮೆರಿಕ–ಇಸ್ರೇಲ್ ಕೂಟದ ಬಯಕೆಯಾಗಿದೆ. ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದಕ್ಕೆ (ಎನ್‌ಪಿಟಿ) ಸಹಿ ಹಾಕದ ಇಸ್ರೇಲ್, ಎನ್‌ಪಿಟಿಗೆ ಸಹಿದಾರ ದೇಶವಾದ ಇರಾನ್ ಅಣ್ವಸ್ತ್ರ–ಪ್ರಸರಣ ತಡೆ ವ್ಯವಸ್ಥೆಯನ್ನು ಉಲ್ಲಂಘಿಸುತ್ತಿದೆ ಎಂದು ಆರೋಪಿಸುತ್ತಿರುವುದು ಒಂದು ಪ್ರಹಸನವೇ ಆಗಿದೆ.

ಇರಾನ್ ವಿರುದ್ಧ ಬಹಿರಂಗವಾಗಿಯೇ ದ್ವೇಷ ಕಾರಿರುವ ಮತ್ತು ತಮ್ಮ ಸಾಮಾನ್ಯ ವೈರಿಯನ್ನು ಎದುರಿಸಲು ಇಸ್ರೇಲ್ ಜೊತೆ ಸಹಕರಿಸಲೂ ಸಿದ್ಧವಿರುವ ಸೌದಿ ಆಡಳಿತಗಾರರಿಂದಲೂ ಟ್ರಂಪ್‌ಗೆ ಬೆಂಬಲ ದೊರಕಿದೆ..

ಒಪ್ಪಂದದಿಂದ ಹಿಂದೆ ಸರಿಯಬಾರದು ಹಾಗೂ ಒಪ್ಪಂದದ ನಿಯಮಗಳನ್ನು ಬಲಪಡಿಸಲು ಏನನ್ನಾದರೂ ಮಾಡಬೇಕೆಂಬ ನಿಕಟ ಯುರೋಪಿಯನ್ ಮಿತ್ರರಾದ ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿಯ ಮನವಿಗಳನ್ನು ಅಧ್ಯಕ್ಷ ಟ್ರಂಪ್ ನಿರ್ಲಕ್ಷಿಸಿದ್ದಾರೆ. ಟ್ರಂಪ್‌ರ ಪ್ರಸಕ್ತ ನಡೆಗೆ ಈ ಮೂರೂ ದೇಶಗಳು ತಮ್ಮ ಅನುಮೋದನೆ ಇಲ್ಲವೆಂದು ವ್ಯಕ್ತಪಡಿಸಿವೆ.

ಒಪ್ಪಂದ ಮುಂದುವರಿಯುವುದನ್ನು ಖಾತರಿಪಡಿಸುವಂತೆ ಇರಾನ್ ಅಧ್ಯಕ್ಷ ಹಸನ್ ರೌಹಾನಿ ಯುರೋಪಿಯನ್ ಮಿತ್ರ ದೇಶಗಳಿಗೆ ಕರೆ ನೀಡಿದ್ದಾರೆ. ಒಂದು ವೇಳೆ ಅದಕ್ಕೆ ವಿಫಲವಾದರೆ, ಯುರೇನಿಯಮ್‌ಅನ್ನು 'ಕೈಗಾರಿಕಾ ಮಟ್ಟ'ಕ್ಕೆ ಸಮೃದ್ಧಗೊಳಿಸಲು ಸಿದ್ಧರಿರುವಂತೆ ತಮ್ಮ ದೇಶದ ಅಣು ಇಂಧನ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ.

ಅಮೆರಿಕ ಹೊರತುಪಡಿಸಿ, ಒಪ್ಪಂದದ ಭಾಗವಾಗಿರುವ ಭದ್ರತಾ ಮಂಡಳಿಯ ಇತರ ನಾಲ್ಕು ದೇಶಗಳು ಈ ಒಡಂಬಡಿಕೆಯನ್ನು ಪಾಲಿಸುವಂತೆ ಮಾಡಲು ಎಲ್ಲಾ ಪ್ರಯತ್ನಗಳನ್ನು ನಡೆಸಬೇಕಾಗಿದೆ.

ಅಧ್ಯಕ್ಷ ಟ್ರಂಪ್‌ರ ನಡೆಯು, ಪಶ್ಚಿಮ ಏಷ್ಯಾದಲ್ಲಿ ಮೂಡಿರುವ ಅಮೆರಿಕ–ಇಸ್ರೇಲ್–ಸೌದಿ ಅರೇಬಿಯಾ ಕೂಟದ ಹೊಸ ಆಕ್ರಮಣಕಾರಿ ನಡೆಯನ್ನು ಸಂಕೇತಿಸುತ್ತದೆ. ಇಸ್ರೇಲ್ ಈಗಾಗಲೇ ಸಿರಿಯಾದಲ್ಲಿರುವ ಇರಾನಿ ಸ್ಥಾವರಗಳ ಮೇಲೆ ಕ್ಷಿಪಣಿ ದಾಳಿಗಳನ್ನು ನಡೆಸಿದೆ. ಇರಾಕ್, ಲಿಬ್ಯಾ ಮತ್ತು ಸಿರಿಯಾದ ನಂತರ ಅಮೆರಿಕ ಈಗ ಇರಾನ್‌ಅನ್ನು ಗುರಿಯಾಗಿಸಿಕೊಂಡಿದೆ. ಈ ವಲಯದಲ್ಲಿ ಒಂದು ಸಶಸ್ತ್ರ ಸಂಘರ್ಷದ ಅಪಾಯ ತೂಗಾಡತೊಡಗಿದೆ.

ದಿಗ್ಬಂಧನಗಳನ್ನು ಮತ್ತೆ ಹೇರುವುದಾಗಿಯೂ ಹೆಚ್ಚುವರಿ ದಂಡಗಳನ್ನು ಜಾರಿ ಮಾಡುವುದಾಗಿಯೂ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ಇಂಥ ಕ್ರಮಗಳ ವಿರುದ್ಧ ದೃಢವಾಗಿ ನಿಲ್ಲುವುದು ಹಾಗೂ ಭದ್ರತಾ ಮಂಡಳಿಯ ಮೂಲಕ ದಿಗ್ಬಂಧನಕ್ಕೆ ನ್ಯಾಯಸಮ್ಮತತೆಯನ್ನು ಒದಗಿಸಲು ನಿರಾಕರಿಸುವುದು ಭದ್ರತಾ ಮಂಡಳಿಯ ಇತರೆ ನಾಲ್ಕು ಕಾಯಂ ಸದಸ್ಯ ದೇಶಗಳ ಕರ್ತವ್ಯವಾಗಿದೆ.

ಭಾರತದ ಮಟ್ಟಿಗೆ ಹೇಳುವುದಾದರೆ, ಇರಾನ್ ವಿರುದ್ಧ ಅಮೆರಿಕದ ದ್ವೇಷಮಯ ಕ್ರಮಗಳು ತೀವ್ರ ಕಳವಳದ ಸಂಗತಿ. ಇರಾನ್‌ನಿಂದ ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿಸುವುದನ್ನು ಭಾರತ ಪುನಾರಂಭಿಸಿದೆ. ಛಬಹರ್ ಬಂದರಿನ ಹೂಡಿಕೆಯೂ ಸೇರಿದಂತೆ ಇರಾನ್ ಜೊತೆಗಿನ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳ ಪುನರುಜ್ಜೀವನವಾಗಿದೆ. ಈ ಸಂಬಂಧಗಳನ್ನು ಕಡಿದುಕೊಳ್ಳುವಂತೆ ಭಾರತದ ಮೇಲೆ ಅಮೆರಿಕ ಒತ್ತಡ ಹೇರುತ್ತದೆಂದು ನಿರೀಕ್ಷಿಸಬಹುದು. ದೂರದೃಷ್ಟಿಯ ಕೊರತೆಯಿಂದಾಗಿ ಅಮೆರಿಕವನ್ನು ವ್ಯೂಹಾತ್ಮಕವಾಗಿ ಗಾಢವಾಗಿ ಅಪ್ಪಿಕೊಂಡಿರುವ ಮೋದಿ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಹಾಗೂ ಇರಾನ್ ಜೊತೆಗಿನ ಸಂಬಂಧಗಳನ್ನು ಹಾಳು ಮಾಡಿಕೊಳ್ಳುವ ಒತ್ತಡಗಳಿಗೆ ಬಲಿಯಾಗಬಾರದು. ಹಾಗೇನಾದರೂ ಮಾಡಿದರೆ ಅದು ರಾಷ್ಟ್ರೀಯ ಹಿತಗಳಿಗೆ ಮಾರಕವಾಗುತ್ತದೆ.

ಇಲ್ಲಿ, ಮನಮೋಹನ್ ಸಿಂಗ್ ಸರಕಾರ ಇರಾನ್ ವಿಚಾರದಲ್ಲಿ ಅಮೆರಿಕದ ಒತ್ತಡಗಳಿಗೆ ಮಣಿದು ಪರಮಾಣು ಪ್ರಶ್ನೆಯಲ್ಲಿ ಐಎಇಎಯಲ್ಲಿ 2005 ಮತ್ತು 2006ರಲ್ಲಿ ಇರಾನ್ ವಿರುದ್ಧ ಮತ ಹಾಕಿದ್ದನ್ನು ನಾವು ನೆನಪಿಸಿಕೊಳ್ಳಬೇಕು. ಅಷ್ಟು ಮಾತ್ರವಲ್ಲದೆ ಅದು ಅಮೆರಿಕದ ಬೇಡಿಕೆಗಳಿಗೆ ಮಣಿದು ಇರಾನ್‌ನಿಂದ ತೈಲ ಆಮದನ್ನು ಗಣನೀಯ ಪ್ರಮಾಣದಲ್ಲಿ ಕಡಿತಗೊಳಿಸಿತು ಹಾಗೂ ಆರ್ಥಿಕ ಸಂಬಂಧಗಳನ್ನು ಕಡಿತಗೊಳಿಸಿತ್ತು. ಅದು ಪುನರಾವರ್ತನೆ ಆಗಬಾರದು.

ಅಧ್ಯಕ್ಷ ಟ್ರಂಪ್‌ರ ಏಕಪಕ್ಷೀಯ ಕ್ರಮ ಇನ್ನೊಂದು ಕ್ಷೇತ್ರದಲ್ಲೂ ದುಷ್ಪರಿಣಾಮಗಳನ್ನು ಬೀರಬಹುದು. ಇನ್ನು ಕೆಲವೇ ವಾರಗಳಲ್ಲಿ ಡಿಪಿಆರ್‌ಕೆ ನಾಯಕ ಕಿಮ್ ಜಾಂಗ್–ಅನ್ ಟ್ರಂಪ್‌ರನ್ನು ಒಂದು ಮೂರನೇ ಸಥಳದಲ್ಲಿ ಭೇಟಿಯಾಗುವ ಕಾರ್ಯಕ್ರಮವಿದೆ. ಇರಾನ್ ಪರಮಾಣು ಒಪ್ಪಂದದಿಂದ ಹಿಂದೆ ಸರಿಯುವ ಟ್ರಂಪ್ ಘೋಷಣೆಯ ನಮತರ ಅಮೆರಿಕದ ಜೊತೆ ಪರಮಾಣು ವಿಷಯದಲ್ಲಿ ಯಾವುದೇ ಹೆಜ್ಜೆ ಇಡಬೇಕಾದರೂ ಉತ್ತರ ಕೊರಿಯಾ ಅಧ್ಯಕ್ಷರು ತೀರಾ ಎಚ್ಚರಿಕೆಯಿಂದ ಇರಲಿದ್ದಾರೆ ಎನ್ನುವುದು ನಿಶ್ಚಿತ. ತನ್ನ ಒಡಂಬಡಿಕೆಗಳು ಮತ್ತು ಬದ್ಧತೆಗಳಿಗೆ ನಿಷ್ಠವಾಗಿರುವಲ್ಲಿ ಅಮೆರಿಕವು ನಂಬಿಕೆಗೆ ಅರ್ಹವಲ್ಲ ಎನ್ನುವುದನ್ನು ಟ್ರಂಪ್ ಸಾಬೀತುಪಡಿಸಿರುವುದರಿಂದ ಉತ್ತರ ಕೊರಿಯಾ ನಾಯಕನ ಅಂತಹ ನಡೆ ಸರ್ವಥಾ ಸಮರ್ಥನೀಯವಾಗುತ್ತದೆ.

ಅನು: ವಿಶ್ವ



ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ವಿರುದ್ಧ ಬಿಜೆಪಿಯೊಡನೆ ಮೈತ್ರಿಯೆಂಬುದು ದುರುದ್ದೇಶಪೂರ್ಣ ಅಪಪ್ರಚಾರ – ಸೂರ್ಯಕಾಂತ್ ಮಿಶ್ರ

ಪಶ್ಚಿಮ ಬಂಗಾಲದಲ್ಲಿ ಎಡಪಕ್ಷಗಳು ಆಳುವ ಟಿಎಂಸಿ ವಿರುದ್ಧ ಬಿಜೆಪಿಯೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ಹರಡಿಸಲಾಗುತ್ತಿದ್ದು, ಇದು ದುರುದ್ದೇಶಪೂರಿತ, ಆಧಾರಹೀನ ಅಪಪ್ರಚಾರ, ಟಿಎಂಸಿ ಮತ್ತು ಬಿಜೆಪಿ ಎರಡೂ ಈ ಅಪಪ್ರಚಾರಕ್ಕೆ ತುಪ್ಪ ಸುರಿಯುತ್ತಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಸೂರ್ಯಕಾಂತ್ ಮಿಶ್ರ ಹೇಳಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ನಮ್ಮ ಘೋಷಣೆ "ಬಿಜೆಪಿಯನನು ಒದೋಡಿಸಿ, ಭಾರತವನ್ನು ರಕ್ಷಿಸಿ, ಟಿಎಂಸಿಯನ್ನು ಒದ್ದೋಡಿಸಿ, ಬಂಗಾಲವನ್ನು ರಕ್ಷಿಸಿ" ಎಂಬುದೇ ಆಗಿದೆ. ಈ ಎರಡೂ ಪಕ್ಷಗಳು 2014ರಿಂದ ಕೋಮುವಾದಿ ಧ್ರುವೀಕರಣದ ಮೂಲಕ ರಾಜಕೀಯ ಧ್ರುವೀಕರಣದ ಪ್ರಯತ್ನ ನಡೆಸಿದ್ದಾರೆ, ಈಗ ತಾವು ಮಾಡಿದ್ದೆಲ್ಲವನ್ನೂ ಮರೆಮಾಚಲು ಎಡಪಕ್ಷಗಳ ಮೇಲೆ ಸುಳ್ಳು ಪ್ರಚಾರ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಟಿಎಂಸಿಯ ಆಳ್ವಿಕೆಯಲ್ಲಿ ಆರೆಸ್ಸೆಸ್ ತನ್ನ ಶಕ್ತಿಯನ್ನು 11 ಪಟ್ಟು ಹೆಚ್ಚಿಸಿಕೊಂಡಿದೆ. ಅದೀಗ ತಾನೇ ಪ್ರಮುಖ ಪ್ರತಿಪಕ್ಷ ಎಂದು ಬಿಂಬಿಸುವ ಪ್ರಯತ್ನ ನಡೆಸುತ್ತಿದೆ. ಎಡಪಕ್ಷಗಳು ಟಿಎಂಸಿಯ ನೆರವಿನಿಂದ ಬಿಜೆಪಿಯ ವಿರುದ್ಧ ಹೋರಾಟ ನಡೆಸಬಯಸುತ್ತಾರೆಂದೋ, ಅಥವ ಬಿಜೆಪಿಯ ನೆರವಿಂದ ಟಿಎಂಸಿ ವಿರುದ್ಧ ಹೋರಾಟ ನಡೆಸಬಯಸುತ್ತಾರೆಂದೋ ಜನರನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಿದ್ದಾರೆ. ಜನತೆ ಇದಕ್ಕೆ ಬಲಿಬೀಳಬಾರದು ಎಂದು ಡಾ. ಮಿಶ್ರ ಮನವಿ ಮಾಡಿದ್ದಾರೆ.

ಟಿಎಂಸಿ ಮತ್ತು ಬಿಜೆಪಿ ತಮ್ಮ ನಡುವೆ ಸದಾ ಸರಾಗವಾದ ಸಂಪರ್ಕಗಳನ್ನು ಇಟ್ಟುಕೊಂಡಿದ್ದಾರೆ. ತಕ್ಷಣದ ಉದಾಹರಣೆಯೆಂದರೆ ಮುಕುಲ್ ರಾಯ್; ಒಂದೊಮ್ಮೆ ಟಿಎಂಸಿ ಮುಖಂಡರಾಗಿದ್ದ ಲಾಕೆಟ್ ಚಟರ್ಜಿ ಕೂಡ ಇಂದು ಬಿಜೆಪಿ ಮುಖಂಡರು. ಆದರೆ ಈ ಮಟ್ಟದ ಯಾವ ಎಡ ಮುಖಂಡರ ಬಗ್ಗೆಯೂ ಈ ರೀತಿಯ ಉದಾಹರಣೆ ಕೊಡಲು ಸಾಧ್ಯವಿಲ್ಲ, ಈ ಸುಳ್ಳು ಸುದ್ದಿ ಹರಡಲು ಬಳಸುತ್ತಿರುವ ಸಿಪಿಐ(ಎಂ) ಶಾಸಕಿ ರಮಾ ಬಿಸ್ವಾಸ್ ನಡಿಯಾ ಜಿಲ್ಲೆಯಲ್ಲಿನ ಒಂದು ಮೆರವಣಿಗೆಯಲ್ಲಿ ಇರುವ ಫೋಟೋದ ಬಗ್ಗೆ ಸಂಪೂರ್ಣ ತಪ್ಪು ಮಾಹಿತಿ ಹರಡಲಾಗುತ್ತಿದೆ. ಅದು ಚುನಾವಣಾ ಪ್ರಚಾರದ ಮೆರವಣಿಗೆಯಲ್ಲ. ಒಂದು ಹಳ್ಳಿಯಲ್ಲಿ ಗ್ರಾಮಸ್ಥರು ಆಳುವ ಪಕ್ಷದ ದಾಳಿಯ ವಿರುದ್ಧ ಪ್ರತಿಭಟನೆ ಸಂಘಟಿಸುತ್ತಿದ್ದರು, ಸ್ಥಳೀಯ ಶಾಸಕಿಯಾದ್ದರಿಮದ ರಮಾ ಬಿಸ್ವಾಸ್ ಭಾಗವಹಿಸಿದರು. ಇಲ್ಲಿ ಚುನಾವಣಾ ಪ್ರಚಾರದ ಮತ್ತು ಶತ್ರು ಪಾಳೆಯದೊಂದಿಗೆ ಚುನಾವಣಾ ಮೈತ್ರಿಯ ಮಾತು ಅರ್ಥವಿಲ್ಲದ್ದು ಎಂದಿರುವ ಸೂರ್ಯಕಾಂತ್ ಮಿಶ್ರ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗದ ಅಥವ ಎಡರಂಗದೊಡನೆ ಸಹಕರಿಸುವ ಯಾವುದೇ ಅಭ್ಯರ್ಥಿಗಳಿಲ್ಲದಲ್ಲಿ ಟಿಎಂಸಿ ಮತ್ತು ಬಿಜೆಪಿ ವಿರುದ್ಧ ಯಾರಾದರೂ ರಾಜಕೀಯವಾಗಿ ಸ್ಪರ್ಧಿಸಿದ್ದರೆ ಅಂತಹ ಅಭ್ಯರ್ಥಿಯನ್ನು ಬೆಂಬಲಿಸುವುದಾಗಿ ನಾವು ಜನತೆಗೆ ಹೇಳಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ದುಡಿಯುವ ಜನರ ದನಿ ವಿಧಾನಸಭೆಯಲ್ಲಿ ಮೊಳಗಿಸಲು ಅಂತಿಮ ಘಟ್ಟದ ಚುನಾವಣಾ ಪ್ರಚಾರ


ಕಲಬುರ್ಗಿ


ಕಲಬುರ್ಗಿ

ಕಲಬುರ್ಗಿ ಗ್ರಾಮೀಣ
'ಒಡೆದಾಳುವ ಮೋದಿಗೆ ಪಾಠ ಕಲಿಸಿ': ಬೃಂದಾ ಕಾರಟ್

ಬ್ರಿಟೀಷರ ಹಾಗೆ ಒಡೆದಾಳುವ ನೀತಿ ಅನುಸರಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿಗೆ ಈ ಬಾರಿ ರಾಜ್ಯದ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಮೂಲಕ ಪಾಠ ಕಲಿಸುವಂತೆ ಸಿಪಿಐ (ಎಂ) ಪಕ್ಷದ ಕೇಂದ್ರ ಸಮಿತಿ ಪೋಲೀಟ್ ಬ್ಯುರೋ ಸದಸ್ಯೆ ಬೃಂದಾ ಕಾರಟ ಕರೆ ನೀಡಿದರು. ಕಮಲಾಪುರದ ಬುದ್ಧವಿಹಾರದಲ್ಲಿ ಆಯೋಜಿಸಿದ್ದ ಸಿಪಿಐ(ಎಂ) ಪಕ್ಷದ ಚುನಾವಣಾ ಪ್ರಚಾರ ಬಹಿರಂಗ ಸಭೆಯಲ್ಲಿ ಮೇ 7ರಂದು ಅವರು ಮಾತನಾಡಿದರು.

ಹಿಂದು–ಮುಸ್ಲಿಮರ ನಡುವೆ ವಿಷ ಬೀಜ ಬಿತ್ತುತ್ತಿರುವ ಮೋದಿ ನೇತೃತ್ವದ ನಾಯಕರು ಸಮಾಜದಲ್ಲಿ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿದ್ದಾರೆ. ಜನರಲ್ಲಿ ಕೋಮು ಭಾವನೆ ಕೆರಳಿಸಿ ಮತ ಪಡೆಯಲು ಮುಂದಾಗಿದ್ದಾರೆ. ಕೆಲವು ಚುನಾವಣೆಗಳಲ್ಲಿ ಹೀನಾಯ ಸೋಲನುಭವಿಸಿದ ಕಾಂಗ್ರೆಸ್ ಸಹ ಮುಸ್ಲಿಮರು ಮತ್ತು ಹಿಂದುಳಿದವರ ಹಿತ ಕಾಯದೆ, ಮೃದು ಹಿಂದುತ್ವ ಧೋರಣೆ ತಾಳುತ್ತಿದೆ. ಆ ಮೂಲಕ ಮನುವಾದಕ್ಕೆ ಕುಮ್ಮಕ್ಕು ಕೊಡುತ್ತಿದೆ ಎಂದು ಆರೋಪಿಸಿದರು.

ಉದ್ಯೋಗ ಖಾತ್ರಿ ಅನುಷ್ಠಾನಕ್ಕೆ ತರಲು ಹೋರಾಡಿದವರು ನಾವು. ಸ್ವಾಮಿನಾಥನ್ ಆಯೋಗದ ವರದಿ ಜಾರಿ ಮಾಡುವಂತೆ ಅನೇಕ ವರ್ಷಗಳಿಂದ ಹೋರಾಟ ನಡೆಸುತ್ತಿದ್ದೇವೆ. ಬಂಡವಾಳಶಾಹಿಗಳ ಸಾಲ ಮನ್ನಾ ಮಾಡುತ್ತಿರುವ ಕೇಂದ್ರದ ಬಿಜೆಪಿ ಸರ್ಕಾರ ರೈತರ ಸಾಲ ಮನ್ನಾಕ್ಕೆ ಮುಂದಾಗುತ್ತಿಲ್ಲ. ಪ್ರತಿ ವರ್ಷ 16ಸಾವಿರ ರೈತರು ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆಲ್ಲ ಬಿಜೆಪಿ ಹಾಗೂ ಕಾಂಗ್ರೆಸಿನ ಇಬ್ಬಗೆ ನೀತಿಯೆ ಕಾರಣ ಎಂದರು. ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಇಳಿಕೆಯಾಗಿದೆ. ಆದರೆ ಭಾರತದಲ್ಲಿ ಮೋದಿ ಸರ್ಕಾರ 9ಬಾರಿ ತೈಲ ಬೆಲೆ ಹೆಚ್ಚಿಸಿದ್ದಾರೆ. ಇದರಿಂದ ನಿತ್ಯ ವಸ್ತುಗಳ ಬೆಲೆಯೂ ಏರಿಕೆಯಾಗತೊಡಗಿದೆ. ಮೋದಿ ಬಡ ಜನರ ಬೆನ್ನಿಗೂ ಚೂರಿ ಹಾಕುತ್ತಿದ್ದಾರೆ ಎಂದರು.

ಅಭ್ಯರ್ಥಿ ಮಾರುತಿ ಮಾನ್ಪಡೆ ಮಾತನಾಡಿ,'ತೊಗರಿ ಬೆಲೆ ಕುಸಿತಕ್ಕೆ ಬಿಜೆಪಿಯೇ ಕಾರಣ. ಬಂಡವಾಳ ಶಾಹಿಗಳಿಗೆ ಲಾಭ ಮಾಡಿಕೊಡಲು ಪ್ರತಿ ವರ್ಷ ಹೊರದೇಶಗಳಿಂದ ತೊಗರಿ ಆಮದು ಮಾಡಕೊಳ್ಳುತ್ತಿದೆ. ಇದರಿಂದ ಗೌತಮ ಅದಾನಿ 90 ಸಾವಿರ ಕೋಟಿ ಆದಾಯ ಮಾಡಿಕೊಂಡಿದ್ದಾನೆ. ಇದನ್ನು ಜನರು ಮನಗಾಣಬೇಕು' ಎಂದರು. ಈ ಹಿಂದೆ ಕ್ಷೇತ್ರವನ್ನು ಪ್ರತಿ ನಿಧಿಸಿದ ಶಾಸಕರ ಲಂಚಬಾಕ ತನದಿಂದಾಗಿ ಸುಮಾರು 22 ಸಾವಿರ ಎಕರೆ ಪ್ರದೇಶಕ್ಕೆ ನೀರು ಒದಗಿಸಬೇಕಾದ ಗಂಡೋರಿನಾಲ ಅಣೆಕಟ್ಟೆ ವಿಫಲವಾಗಿದೆ.

ಇವರನ್ನು ತಕ್ಕ ಪಾಠ ಕಲಿಸಿ ಸಿಪಿಐ (ಎಂ) ಪಕ್ಷವನ್ನು ಗೆಲ್ಲಿಸುವಂತೆ ಮನವಿ ಮಾಡಿದರು.ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ವಿಜಯಕುಮಾರ ರಟಕಲ್, ಮಸ್ತಾನ ದಂಡೆ, ವಿರೂಪಾಕ್ಷಪ್ಪ ತಡಕಲ್, ಗೌರಮ್ಮ ಪಾಟೀಲ, ಶರಣಬಸಪ್ಪ ಮಮಶೆಟ್ಟಿ ಇದ್ದರು.

ಕೆ.ಆರ್.ಪುರಂ ಬೆಂಗಳೂರು

ಸಿಪಿಐ(ಎಂ) ಸಂಸದ ಎಂ.ಬಿ,ರಾಜೇಶ್ ಮೇ 6ರಂದು ಕೆ.ಆರ್.ಪುರಂ ಕ್ಷೇತ್ರದಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿ ಅಭ್ಯರ್ಥಿ ಹೆಚ್.ಎನ್. ಗೋಪಾಲಗೌಡ ಅವರಿಗೆ ಮತ ನೀಡಲು ಕರೆ ನೀಡಿದರು.

ದಾಸರಹಳ್ಳಿ ಬೆಂಗಳೂರು

ಕಾರ್ಮಿಕರು ಬಹುಸಂಖ್ಯಾತರಾಗಿರುವ ಈ ಕ್ಷೇತ್ರದಲ್ಲಿ ಪ್ರಚಾರಕ್ಕೆ ಸಾಮಾಜಿಕ ಮಾಧ್ಯಮ ಬಳಸಿ ವಿಶೇಷ ಪ್ರಯತ್ನ ಮಾಡಿದರು. ಕ್ಷೇತ್ರದ ಜನಾಭಿಪ್ರಾಯ ಸಂಗ್ರಹಗಳ 8 ವಿಡಿಯೋ ತಯಾರಿಸಿ ಯೂ ಟ್ಯೂಬಿನಲ್ಲಿ ಹಾಕಿ ಅದನ್ನು ಫೇಸ್ ಬುಕ್ ವಾಟ್ಸಪ್ ಗಳ ಮೂಲಕ ಪ್ರಸಾರ ಮಾಡಲಾಯಿತು. ಕಾರ್ಮಿಕರ ಮೇಲೆ ದೌರ್ಜನ್ಯ ಉದ್ಯೋಗ ಭದ್ರತೆ, ಮಹಿಳಾ ಕಾರ್ಮಿಕರ ವಿಶಿಷ್ಟ ಸಮಸ್ಯೆಗಳು, ಕ್ಷೇತ್ರದ ಕಸ ನಿರ್ವಹಣ/ ಕೆರೆ ಮಾಲಿನ್ಯೆ, ಅಟೋ ಚಾಲಕರ ಸಮಸ್ಯೆಗಳ ಬಗ್ಗೆ ಬಾಧಿತ ವಿವಿಧ ಜನರನ್ನು ಮಾತನಾಡಿಸಿದ್ದಲ್ಲದೆ ಸಿಪಿಐ(ಎಂ) ಅಭ್ಯರ್ಥಿ ಪ್ರತಾಪ್ ಸಿಂಹ ಮತ್ತು ಕಾರ್ಮಿಕ ನಾಯಕ ಮೀನಾಕ್ಷಿಸುಂದರಂ ಅವರ ಸಂದರ್ಶನಗಳ ಸುತ್ತ 8 ವಿಡಿಯೋಗಳನ್ನು ತಯಾರಿಸಲಾಗಿತ್ತು.

ಹಗರಿಬೊಮ್ಮನಹಳ್ಳಿ, ಬಳ್ಳಾರಿ

ಹಗರಿಬೊಮ್ಮನಹಳ್ಳಿ ಮತಕ್ಷೇತ್ರದಲ್ಲಿ ಮೂರು ಪಕ್ಷಗಳಿಗೆ ಸಿಪಿಎಂ ಅಭ್ಯರ್ಥಿ ಮಾಳಮ್ಮ ಅವರು ಪ್ರಬಲ ಪೈಪೋಟಿ ನೀಡುವ ಮೂಲಕ ಅನೈತಿಕ ರಾಜಕೀಯಕ್ಕೆ ನಡುಕ ಸೃಷ್ಟಿಸಿದ್ದಾರೆ. ಅವರ ಪ್ರಚಾರದ ಕೆಲವು ದೃಶ್ಯಗಳು

ಮಂಗಳೂರು (ಉಳ್ಳಾಲ)

ಮಂಗಳೂರು ಕ್ಷೇತ್ರದಲ್ಲಿ ಅತ್ಯಂತ ಕಿರಿಯ ಅಭ್ಯರ್ಥಿ ನಿತಿನ್ ಕುತ್ತಾರ್ ಅವರ ಪ್ರಚಾರದ ಕೆಲವು ದೃಶ್ಯಗಳು


ಮಂಗಳೂರು (ಉಳ್ಳಾಲ)


ಮಂಗಳೂರು (ಉಳ್ಳಾಲ)


ಕೆ.ಆರ್. ಪುರಂ


ಕೆ.ಆರ್. ಪುರಂ



ಹಗರಿಬೊಮ್ಮನಹಳ್ಳಿ


ಹಗರಿಬೊಮ್ಮನಹಳ್ಳಿ


ದಾಸರಹಳ್ಳಿ


ದಾಸರಹಳ್ಳಿ

ಕಾರ್ಲ್ ಮಾರ್ಕ್ಸ್ ಅವರ ಜನ್ಮದ್ವಿಶತಾಬ್ಧಿ ಆಚರಣೆಯ ಸಂದರ್ಭದಲ್ಲಿ ಅವರ ಜನ್ಮದಿನ ಮೇ 5ರಂದು, ಮಾರ್ಕ್ಸ್ ರವರ ಕ್ರಾಂತಿಕಾರಿ ಚಟುವಟಿಕೆಗಳ, ಅಧ್ಯಯನಗಳ ಪ್ರಮುಖ ಕೇಂದ್ರವಾಗಿದ್ದ, ಮತ್ತು ಅವರು ಮಾರ್ಚ್ 14, 1883 ರಂದು ಕೊನೆಯುಸಿರೆಳೆದ ಲಂಡನ್ ನಲ್ಲಿ ಮಾರ್ಕ್ಸ್ ಮೆಮೋರಿಯಲ್ ಲೈಬ್ರೆರಿ "ಮಾರ್ಕ್ಸ್ 200: ಅಂತರ್ರಾಷ್ಟ್ರೀಯ ಸಮ್ಮೇಳನ"ವನ್ನು ಏರ್ಪಡಿಸಿತ್ತು. "ಮಾರ್ಕ್ಸ್‌ವಾದ ಬದಲಾವಣೆಯ ಒಂದು ಶಕ್ತಿಯಾಗಿ ಇಂದು" ಎಂಬ ವಿಷಯ ಕುರಿತ ಪ್ಲಿನರಿ ಅಧಿವೇಶನದಲ್ಲಿ ಮಾತನಾಡಲು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರನ್ನು ಆಹ್ವಾನಿಸಲಾಗಿತ್ತು. ವಿಶ್ವದ ಮೂಲೆ-ಮೂಲೆಗಳಿಂದ ಬಂದಿದ್ದ ಮಾರ್ಕ್ಸ್‌ವಾದಿಗಳು, ಇತರ ಚಿಂತಕರು ಮತ್ತು ದುಡಿಯುವ ಜನಗಳಿಗೆ ಮತ್ತು ಈ ಸ್ಮಾರಕ ಸಮ್ಮೇಳನವನ್ನು ಏರ್ಪಡಿಸಿದ್ದ ಸಂಘಟಕರಿಗೆ ಭಾರತೀಯ ಕಮ್ಯುನಿಸ್ಟರ ಪರವಾಗಿ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತ, ಯೆಚುರಿಯವರು ಮಾಡಿದ ಭಾಷಣದ ಅನುವಾದವನ್ನು ನಮ್ಮ ಓದುಗರಿಗಾಗಿ ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ.



ಮಾರ್ಕ್ಸ್‌ವಾದ ಬದಲಾವಣೆಯ ಒಂದು ಶಕ್ತಿಯಾಗಿ ಇಂದು

ಆರಂಭದಲ್ಲಿ, ಭಾರತೀಯ ಕಮ್ಯುನಿಸ್ಟರು, ನಿರ್ದಿಷ್ಟವಾಗಿ ಸಿಪಿಐ(ಎಂ), ಹೇಗೆ ಮಾರ್ಕ್ಸ್‌ವಾದವನ್ನು ಅಂತರ್ಗತ ಮಾಡಿಕೊಂಡಿದ್ದಾರೆ ಎಂಬುದರ ರೂಪುರೇಷೆಯನ್ನು ಕೊಡಬಯಸುತ್ತೇನೆ.

ಮಾರ್ಕ್ಸ್‌ವಾದವನ್ನು ಮೀರಿ ಹೋಗುವುದು ಅದರ ಕಾರ್ಯಸೂಚಿಯನ್ನು ಈಡೇರಿಸಿದಾಗ ಮಾತ್ರ ಸಾಧ್ಯ. ಈ ಅರ್ಥದಲ್ಲಿ ಅದು ಅನನ್ಯವಾಗಿದೆ. ಈ ಕಾರ್ಯಸೂಚಿ ಎಂದರೆ, ಒಂದು ವರ್ಗರಹಿತ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆ. ನಿರ್ದಿಷ್ಟವಾಗಿ ಬಂಡವಾಳಶಾಹಿಯ ಅಡಿಯಲ್ಲಿ, ಬಂಡವಾಳಶಾಹಿಯ ಬಗ್ಗೆ ಮಾರ್ಕ್ಸ್‌ವಾದದ ತಿಳುವಳಿಕೆಯೇ ಅದರ ಆಚೆಗಿರುವ ಚಾರಿತ್ರಿಕ ಸಾಧ್ಯತೆಗಳನ್ನು ಗ್ರಹಿಸಿಕೊಳ್ಳಲು ಸಾಕಷ್ಟು ಆಮೂಲಾಗ್ರ ವಾಗಿದೆ. ಆದ್ದರಿಂದ ಬಂಡವಾಳಶಾಹಿಯ ಅಡಿಯಲ್ಲಿ ಅದೆಂದೂ ಅನಗತ್ಯ ಎಂದು ಆಗಲಾರದು- ಬಂಡವಾಳಶಾಹಿಯನ್ನೇ ಮೀರಿ ಹೋಗುವ ವರೆಗೂ. ಬಂಡವಾಳಶಾಹಿಯ ನಂತರವೂ ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ಅದರ ವಿಶ್ವ ಕಣ್ಣೋಟ ಸಮಾಜವಾದವನ್ನು ಕಟ್ಟಲು ಮತ್ತು ಕಮ್ಯುನಿಸಂನತ್ತ ಸ್ಥಿತ್ಯಂತರಕ್ಕೆ ಆಧಾರ ಮತ್ತು ವೈಜ್ಞಾನಿಕ ಮಾರ್ಗದರ್ಶಿಯಾಗಿ ಮುಂದುವರೆಯುತ್ತದೆ.

ಮಾರ್ಕ್ಸ್‌ವಾದ ಒಂದು ಕುರುಡುನಂಬಿಕೆಯಲ್ಲ, ಬದಲಿಗೆ ಅದು ಒಂದು 'ಸೃಜನಾತ್ಮಕ ವಿಜ್ಞಾನ". ಅದು "ಮೂರ್ತ ಪರಿಸ್ಥಿತಿಗಳ ಒಂದು ಮೂರ್ತ ವಿಶ್ಲೇಷಣೆ" ಮತ್ತಿತರ ಅಂಶಗಳ ಮೇಲೆ ನಿಂತಿದೆ. ಅದು ಒಟ್ಟಾರೆಯಾಗಿ ಇತಿಹಾಸದ, ನಿರ್ದಿಷ್ಟವಾಗಿ ಬಂಡವಾಳಶಾಹಿಯ ವಿಶ್ಲೇಷಣೆಗೆ ಒಂದು ದಾರಿ. ಇದರ ಆಧಾರದಲ್ಲಿ ಮಾರ್ಕ್ಸ್ ಒದಗಿಸಿದ ಬುನಾದಿಯ ಮೇಲೆ ಕಟ್ಟುತ್ತ ನಾವು ನಿರಂತರವಾಗಿ ಪ್ರಸಕ್ತ ಸಂಧಿಕಾಲವನ್ನು ತಿಳಿಯುವ ಮತ್ತು ಅದು ತೆರೆಯುವ ಭವಿಷ್ಯದ ಸಾಧ್ಯತೆಗಳ ಕುರಿತು ನಮ್ಮ ಸಿದ್ಧಾಂತವನ್ನು ಶ್ರೀಮಂತಗೊಳಿಸುತ್ತಿರುತ್ತೇವೆ. ಮಾರ್ಕ್ಸ್‌ವಾದ ಮುಚ್ಚಿದ ಸೈದ್ಧಾಂತಿಕ ವ್ಯವಸ್ಥೆಯಂತೂ ಖಂಡಿತಾ ಅಲ್ಲ, ಬದಲಿಗೆ ಅದು ನಿರಂತರವಾಗಿ ಸೈದ್ಧಾಂತಿಕವಾಗಿ ಶ್ರೀಮಂತಗೊಳ್ಳುವ ಒಂದು ಪ್ರಕ್ರಿಯೆಯನ್ನು ಪ್ರತಿನಿಧಿಸುತ್ತದೆ.

ಇದರಿಂದಾಗಿಯೇ, ಅಂದರೆ ಒಂದು 'ಸೃಜನಾತ್ಮಕ ವಿಜ್ಞಾನ' ವಾಗಿರುವುದರಿಂದಲೇ, ಚಿರಂತನ ಮಾನವ-ಪ್ರಕೃತಿ ತತ್ವಮೀಮಾಂಸೆಯ ಪರಿಣಾಮಗಳಾದ, ಮಾನವ ಪ್ರಯತ್ನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುವ ಬೆಳವಣಿಗೆಗಳ ಪ್ರವೃತ್ತಿಗಳನ್ನು ಮತ್ತು ದಿಕ್ಕುಗಳನ್ನು ಗುರುತಿಸಲು ಮಾರ್ಕ್ಸ್‌ವಾದ ಮಾತ್ರವೇ ಸಮರ್ಥವಾಗಿರುವುದು. ಖಗೋಳ ಭೌತವಿಜ್ಞಾನದಿಂದ ಹಿಡಿದು ಅತ್ಯಂತ ಸಣ್ಣ ಕಣಗಳನ್ನು ಆಧರಿಸಿದ ನ್ಯಾನೊ ತಂತ್ರಜ್ಞಾನದ ವರೆಗೆ ವಿಜ್ಞಾನದ ಪ್ರತಿಯೊಂದು ಆವಿಷ್ಕಾರ ಮತ್ತು ಬೆಳವಣಿಗೆ ಗತಿತಾರ್ಕಿಕ ಭೌತವಾದವನ್ನು ಪುಷ್ಟೀಕರಿಸುತ್ತದೆ. ಮಾನವ-ಕೃತ ಕೃತಕ ಬುದ್ಧಿಮತ್ತೆ ನಮ್ಮ ಬದುಕುಗಳನ್ನು ಕೈವಶ ಮಾಡಿಕೊಂಡು ಹತೋಟಿಗೊಳಪಡಿಸಿಕೊಂಡಾಗ ಉದ್ಭವವಾಗುವ ಸನ್ನಿವೇಶಗಳನ್ನು ಮುಂಗಂಡು , ಅವನ್ನು ನಿರ್ವಹಿಸಲು ನಮ್ಮನ್ನು ಸಜ್ಜುಗೊಳಿಸಲು ಮಾರ್ಕ್ಸ್‌ವಾದಕ್ಕೆ ಮಾತ್ರವೇ ಸಾಧ್ಯ.

ಇಂದಿನ ಜಗತ್ತು-
ಸಾಮ್ರಾಜ್ಯಶಾಹಿ ಜಾಗತೀಕರಣ

ಎರಡನೇ ಜಾಗತಿಕ ಮಹಾಯುದ್ಧಾನಂತರದಲ್ಲಿ, ಶೀತಲ ಸಮರದ ಅವಧಿಯ ದಶಕಗಳಲ್ಲಿ ಜಾಗತಿಕ ಬಂಡವಾಳಶಾಹಿಯ ಶಾಂತಿಯುತ ಬೆಳವಣಿಗೆ ಅಪಾರ ಪ್ರಮಾಣದಲ್ಲಿ ಬಂಡವಾಳವನ್ನು ಶೇಖರಿಸಿತು. ಇದು 20ನೇ ಶತಮಾನದ ಕೊನೆಯಲ್ಲಿ ಸೋವಿಯೆತ್ ಒಕ್ಕೂಟದ ಕುಸಿತ ಹಾಗೂ ಅದು ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಮತ್ತೆ ಬಂಡವಾಳಶಾಹಿಯ ಕಕ್ಷೆಗೆ ಮರಳಿದಾಗ ಇನ್ನಷ್ಟು ವೃದ್ಧಿಗೊಂಡಿತು. ಈ ಅಪಾರ ಪ್ರಮಾಣದ ಶೇಖರಣೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮೂಡಿ ಬರಲು ಮತ್ತು ಕ್ರೋಡೀಕರಣಗೊಳ್ಳಲು ಹಾದಿ ಮಾಡಿಕೊಟ್ಟಿತು. ಇದು ಬಂಡವಾಳದ ಶೇಖರಣೆ ಮತ್ತು ಕೇಂದ್ರೀಕರಣವನ್ನು ಇನ್ನೂ ಮೇಲ್ಮಟ್ಟಗಳಿಗೆ ಒಯ್ದಿತು.

ಸಾಮ್ರಾಜ್ಯಶಾಹಿಯ ಹಂತದಲ್ಲಿ ಜಾಗತೀಕರಣದ ಪ್ರಸಕ್ತ ಘಟ್ಟ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿ ಮತ್ತಷ್ಟು ಮೇಲಿನ ಮಟ್ಟಗಳ ವರೆಗೆ ಬಂಡವಾಳದ ಶೇಖರಣೆಗೆ ಹಾದಿ ಮಾಡಿಕೊಡುತ್ತಿದೆ. ಈ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳುವ ಭರದಲ್ಲಿ ಇಂದು ಕೈಗಾರಿಕಾ ಬಂಡವಾಳ ಮತ್ತು ಬಂಡವಾಳದ ಇತರ ಸ್ವರೂಪಗಳಲ್ಲಿ ತೊಡರಿಕೊಂಡಿದೆ. ಅದೀಗ ಬಂಡವಾಳ ಶೇಖರಣೆಯನ್ನು ಮತ್ತು ಲಾಭಗಳ ಗರಿಷ್ಟ ಮಟ್ಟಗಳನ್ನು ಮತ್ತಷ್ಟು ವಿಸ್ತರಿಸಲು ಹೊಸ ದಾಳಿಗಳನ್ನು ಹರಿಯ ಬಿಡುವ ಗುರಿಸಾಧನಗಳಿಗೆ ನೇತೃತ್ವ ನೀಡುತ್ತಿದೆ.


ಇಂತಹ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನಿರ್ದೇಶನಗಳ ಅಡಿಯಲ್ಲಿ ಗರಿಷ್ಟ ಲಾಭ ಗಳಿಗೆಗಾಗಿ ವಿಶ್ವದ ಮರುವ್ಯವಸ್ಥೆ ಯಾಗಿರುವುದನ್ನು ನವ-ಉದಾರವಾದ ನಿರೂಪಿಸುತ್ತದೆ. ಇದು ತನ್ನ ಕಾರ್ಯಾಚರಣೆ ನಡೆಸುತ್ತಿರುವುದು, ಮೊದಲನೆಯದಾಗಿ, ದೇಶಗಳ ಗಡಿಗಳ ಆಚೀಚೆ ಸರಕುಗಳು ಮತ್ತು ಬಂಡವಾಳದ ಹರಿವಿಗೆ ಇರುವ ಅಡೆ-ತಡೆಗಳನ್ನು ನಿವಾರಿಸುವ ಧೋರಣೆಗಳ ಮೂಲಕ. ವ್ಯಾಪಾರ ಉದಾರೀಕರಣ ದೇಶಗಳ ಆಂತರಿಕ ಉತ್ಪಾದಕರನ್ನು ಸ್ಥಾನಪಲ್ಲಟಗೊಳಿಸಿ, ನಿರ್ದಿಷ್ಟವಾಗಿ ಅಭಿವೃದ್ಧಿಶೀಲ ದೇಶಗಳ ದೇಶೀ ಕೈಗಾರಿಕೆಗಳ ನಾಶದ ವಿಕೈಗಾರಿಕೀಕರಣ ಪ್ರಕ್ರಿಯೆಯನ್ನು ಹುಟ್ಟಿಹಾಕುತ್ತದೆ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಉತ್ಪಾದನಾ ಮತ್ತು ವ್ಯಾಪಾರ ಕ್ರಿಯೆಗಳನ್ನು ಆ ದೇಶಗಳ ಹೊರಗೆ ಸ್ಥಳಾಂತರಿಸುವ ಮೂಲಕ ಇದು ಸಂಭವಿಸುತ್ತಿದೆ. ಅದೇ ರೀತಿಯಲ್ಲಿ ಬಂಡವಾಳ ಹರಿವಿನ ಉದಾರೀಕರಣ ಕೂಡ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ದೇಶೀ ಉತ್ಪಾದಕ ಆಸ್ತಿಗಳನ್ನು (ಭಾರತದ ಸಾರ್ವಜನಿಕ ವಲಯದಂತವುಗಳನ್ನು) ಕೈವಶ ಮಾಡಿಕೊಳ್ಳಲು ಅವಕಾಶ ನೀಡಿ ಬಂಡವಾಳ ಶೇಖರಣೆಯನ್ನು ದೊಡ್ಡಪ್ರಮಾಣದಲ್ಲಿ ವಿಸ್ತರಿಸುತ್ತದೆ.

ಬಂಡವಾಳ ಶೇಖರಣೆಯನ್ನುಕ್ರೋಡೀಕರಿಸುವ ಇತರ ದಾರಿಗಳೆಂದರೆ ಹಣದಿಳಿತ ತರುವ ಧೋರಣೆಗಳನ್ನು ಹೇರುವುದು. ಉದಾಹರಣೆಗೆ, ಹಣಕಾಸು ಶಿಸ್ತಿನ ಹೆಸರಲ್ಲಿ ಸರಕಾರದ ಖರ್ಚುಗಳ ಮೇಲೆ ಮಿತಿಗಳನ್ನು ಹಾಕುವುದು, ಆಮೂಲಕ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತಮ್ಮ ಸಟ್ಟಾ ವ್ಯವಹಾರಗಳ ಲಾಭಗಳನ್ನು ಹಲವು ಪಟ್ಟು ಹೆಚ್ಚಿಸಿಕೊಳ್ಳಲು ಹೆಚ್ಚೆಚ್ಚು ಪ್ರಮಾಣದಲ್ಲಿ ಹಣವನ್ನು ಲಭ್ಯಗೊಳಿಸುವ ಧೋರಣೆ. ಇದರ ಪರಿಣಾಮವಾಗಿ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯ ಮಟ್ಟ ಕೆಳಗಿಳಿಯುತ್ತದೆ; ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವ್ಯಾಪಾರ ಬಲಾಬಲವನ್ನು ರೈತರ ವಿರುದ್ಧ ತಿರುಗಿಸುತ್ತದೆ; ಸಾಮಾಜಿಕ ಸೇವೆಗಳನ್ನು ಒದಗಿಸುವ ಪ್ರಭುತ್ವದ ವಲಯ ಜಾಗತಿಕವಾಗಿ ಹಿಂದಕ್ಕೆ ತಳ್ಳಲ್ಪಡುತ್ತದೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಇದು ಖಾಸಗೀಕರಣದ ಮೂಲಕ, ಸಾರ್ವಜನಿಕ ಬಳಕೆ ವ್ಯವಸ್ಥೆಗಳ ಹೊಸ ಕ್ಷೇತ್ರಗಳನ್ನು ಖಾಸಗಿಯವರಿಗೆ ದೊಡ್ಡ ಪ್ರಮಾಣದಲ್ಲಿ ತೆರೆದು ಕೊಡುವ ಮೂಲಕ ಕಾಣಿಸಿಕೊಳ್ಳುತ್ತದೆ. ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತಿತರ ಸ್ವರೂಪಗಳಲ್ಲಿ ಜ್ಞಾನದ ಮೇಲೆ ಗುತ್ತೇದಾರಿಕೆ ಜ್ಞಾನದ ಉತ್ಪಾದನೆ ಮತ್ತು ಪುನರುತ್ಪಾದನೆಯ ಮೇಲೆ ಹತೋಟಿಯ ಮೂಲಕ ಬೃಹತ್ ಪ್ರಮಾಣದಲ್ಲಿ ಲಾಭಗಳನ್ನು ಉತ್ಪತ್ತಿ ಮಾಡುತ್ತದೆ.

ಹೀಗೆ ಸಮಕಾಲೀನ ಸಾಮ್ರಾಜ್ಯಶಾಹಿಯ ಒಂದು ಹೊಸ ಲಕ್ಷಣವೆಂದರೆ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳುವ ಹೊಸ ಮತ್ತು ಇದುವರೆಗೆ ಅಸ್ತಿತ್ವದಲ್ಲಿ ಇದ್ದಿರದಿದ್ದ ದಾರಿಗಳನ್ನು ಬಲವಂತದಿಂದ ತೆರೆಸಿ ಪಡೆಯುವುದು.

ಬಂಡವಾಳಶಾಹಿಯ ಇತಿಹಾಸದಾದ್ಯಂತ ಶೇಖರಣೆ ಎರಡು ವಿಧಗಳಲ್ಲಿ ನಡೆಯುತ್ತಿದೆ, ಒಂದು, ಅದರ ಉತ್ಪಾದಕ ಪ್ರಕ್ರಿಯೆ ಅನಾವರಣಗೊಳ್ಳುವ ಮೂಲಕ ಬಂಡವಾಳ ವಿಸ್ತರಣೆಯ(ಸ್ವಾಧೀನ ಪಡಿಸಿಕೊಳ್ಳುವ) ಎಂದಿನ ಕ್ರಿಯೆಗಳ ಮೂಲಕ. ಮತ್ತು ಇನ್ನೊಂದು ಬಲಪ್ರಯೋಗಿಸಿ ಮಾಡುವ ಲೂಟಿಯ ಮೂಲಕ. ಮಾರ್ಕ್ಸ್ ಈ ಅಮಾನುಷ ವ್ಯವಹಾರವನ್ನು ಆದಿಕಾಲದ ಬಂಡವಾಳ ಶೇಖರಣೆ ಎಂದು ನಿರೂಪಿಸಿದ್ದಾರೆ. ಆದಿಕಾಲ ಎನ್ನುವುದು ಇತ್ತಿಹಾಸದ ಒಂದು ವಿಧ, ಅಂದರೆ ಅದರ ಕಾಲಮಾನವನ್ನು ತೋರಿಸುವಂತದ್ದು ಎಂದು ತಪ್ಪಾಗಿ ವ್ಯಾಖ್ಯಿಸಲಾಗುತ್ತಿದೆ- ಅಂದರೆ ಆದಿಕಾಲ, ಅದಕ್ಕೆ ಪ್ರತಿಯಾಗಿ ಆಧುನಿಕ ಕಾಲ ಎಂದು. ಆದರೆ ಮಾರ್ಕ್ಸ್‌ಗೆ ಮತ್ತು ಮಾರ್ಕ್ಸ್‌ವಾದಿಗಳಿಗೆ ಅದು ವಿಶ್ಲೇಷಣೆಯ ವಿಧ. ಬಂಡವಾಳಶಾಹಿಯ ಸಾಮಾನ್ಯ ಚಲನೆಯೊಂದಿಗೇ ಈಗಲೂ ಅಸ್ತಿತ್ವದಲ್ಲಿ ಇರುವಂತದ್ದು.

ಪುಟ 10 ನೋಡಿ




ಲಂಡನ್ ನಗರದ ಹೈಗೇಟ್ ಸ್ಮಶಾನದಲ್ಲಿ ನ "ಎಲ್ಲಾ ನಾಡುಗಳ ಕಾರ್ಮಿಕರೇ ಒಂದಾಗಿ" ಎಂಬ ಘೋಷಣೆ ಹೊತ್ತ ಕಾರ್ಲ್ ಮಾರ್ಕ್ಸ್ ಸಮಾಧಿ

ಮುಂಬರುವ ದಿನಗಳಲ್ಲಿ ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಜನತೆಯ ಅಸಂತೃಪ್ತಿಯನ್ನು ತಮ್ಮ ಜೊತೆಗೊಯ್ಯುವಲ್ಲಿ ರಾಜಕೀಯ ಯಶಸ್ಸು ಪಡೆಯುವವರು ಎಡ-ಒಲವಿನ ಜನವಾದೀ ಶಕ್ತಿಗಳೋ ಅಥವ ರಾಜಕೀಯ ಬಲಪಂಥವೋ ಎಂಬುದರ ಮೇಲೆ ಮುಂದಿನ ರಾಜಕೀಯ ದಿಕ್ಕು ನಿರ್ಧಾರಿತವಾಗುತ್ತದೆ.

ಜನಗಳ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳು, ಅದರಿಂದಾಗಿ ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳು ಬಂಡವಾಳಶಾಹಿಯ ಸುಲಿಗೆಕೋರ ಸ್ವಭಾವ ಇನ್ನಷ್ಟು ನಗ್ನ ಸ್ವರೂಪ ಪಡೆದಿರುವುದನ್ನು ತೋರಿಸುತ್ತದೆ.

ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆ ಮಾಡಿದರೂ ಮಾನವಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲ. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ವಿಮೋಚನೆಯ ಗುರಿಯನ್ನು ಸಾಧಿಸಬಲ್ಲುದು. ಇದಕ್ಕೆ ಅಗತ್ಯವಾದ 'ಕರ್ತೃ' ಅಂಶವನ್ನು ಬಲಪಡಿಸಲು ವರ್ಗಹೋರಾಟಗಳನ್ನು ತೀಕ್ಷ್ಣಗೊಳಿಸಲು ಇಂದು ಮಾರ್ಕ್ಸ್‌ವಾದ ಮಾತ್ರವೇ ತಾತ್ವಿಕ ಬುನಾದಿಯನ್ನು ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಬಲ್ಲದು..

-ಸೀತಾರಾಮ್ ಯೆಚುರಿ



ಮಾರ್ಕ್ಸ್‌ವಾದ ಬದಲಾವಣೆಯ ಒಂದು ಶಕ್ತಿಯಾಗಿ ಇಂದು

ಪುಟ 9 ರಿಂದ

ಆದಿಕಾಲದ ಶೇಖರಣೆಯ ಪ್ರಕ್ರಿಯೆ ಈ ಹಿಂದೆ, ನೇರ ವಸಾಹತುಶಾಹಿಯ ಕಾಲದಲ್ಲೂ, ವಿವಿಧ ಸ್ವರೂಪಗಳನ್ನು ಪಡೆದಿದೆ. ಆದಿಕಾಲದ ಶೋಷಣೆಯ ಆಕ್ರಮಣಶೀಲತೆ ಆಯಾಯ ಕಾಲಘಟ್ಟದಲ್ಲಿ ಅಂತರ್ರಾಷ್ಟ್ರೀಯ ವರ್ಗ ಬಲಾಬಲದ ಮೇಲೆ ನೇರವಾಗಿ ಅವಲಂಬಿಸಿರುತ್ತದೆ. ಅಂದರೆ ಅದು ಇಂತಹ ಬಂಡವಾಳಶಾಹಿ ಅಮಾನುಷತೆ ಪ್ರಕಟವಾಗಲು ಅನುವು ಮಾಡಿ ಕೊಡಬಹುದು, ಇಲ್ಲವೇ ಅದರ ಮೇಲೆ ಕಡಿವಾಣ ಹಾಕಬಹುದು. ಸಮಕಾಲೀನ ಸಾಮ್ರಾಜ್ಯಶಾಹಿಯ ಪ್ರಸಕ್ತ ಘಟ್ಟದಲ್ಲಿ ಇಂತಹ ಅಮಾನುಷ ಆದಿಕಾಲದ ಶೇಖರಣೆಯ ಪ್ರಕ್ರಿಯೆ ತೀವ್ರಗೊಂಡಿರುವುದು, ವಿಶ್ವದ ಅಭಿವೃದ್ಧಿಶೀಲ ದೇಶಗಳಲ್ಲೂ, ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಬಹುಪಾಲು ಜನಸಾಮಾನ್ಯರ ಮೇಲೆ ಹೊಡೆತಗಳನ್ನು ಹಾಕುತ್ತಿದೆ.

ಜಾಗತಿಕವಾಗಿಯೂ, ಪ್ರತಿಯೊಂದು ದೇಶದ ಒಳಗೂ ಆರ್ಥಿಕ ಅಸಮಾನತೆಗಳನ್ನು ತೀಕ್ಷ್ಣ ಸ್ವರೂಪದಲ್ಲಿ ಹೆಚ್ಚಿಸುತ್ತಿರುವುದು ಸದಾ ತನ್ನ ಗರಿಷ್ಟ ಲಾಭಗಳನ್ನು ಗಳಿಸುವ ಈ ಸುಲಿಗೆಕೋರ ಬಂಡವಾಳಶಾಹಿಯ ಸ್ವಭಾವವೇ. ಅದೇ ವೇಳೆಯಲ್ಲಿ, ಇದು ಜಗತ್ತಿನ ಬಹುಪಾಲು ದುಡಿಯುವ ಜನಗಳ ಮೇಲೆ, ಬಡವರ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೊರಿಸುತ್ತಿದೆ. ಬಂಡವಾಳಶಾಹಿ ಬೆಳವಣಿಗೆಯ ಸಹಜ ನಿಯಮಗಳ ಪ್ರಕಾರವೇ ಪ್ರಸಕ್ತ ಘಟ್ಟದ ವ್ಯವಸ್ಥೆಯ ಬಿಕ್ಕಟ್ಟಿನಿಂದ ಹೊರಬರುವ ಪ್ರತಿಯೊಂದು ಪ್ರಯತ್ನವೂ ಇನ್ನಷ್ಟು ಆಳವಾದ ಹೊಸದೊಂದು ಬಿಕ್ಕಟ್ಟಿನತ್ತ ಒಯ್ಯುತ್ತಿದೆ.

ನವ-ಉದರವಾದದ ಬಿಕ್ಕಟ್ಟು-
ಬಲಪಂಥದತ್ತ ರಾಜಕಿಯ ಪಲ್ಲಟ

ಸದ್ಯದಲ್ಲಿ ಜಾಗತಿಕ ಹಣಕಾಸು ಕುಸಿತದ ಸುಮಾರು ಒಂದು ದಶಕದ ನಂತರ ಕೂಡ, ನವ-ಉದಾರವಾದವೇ ಬಿಕ್ಕಟ್ಟಿನಲ್ಲಿದೆ.

ನವ-ಉದಾರವಾದದ ಉದಯ, ಒಂದರ್ಥದಲ್ಲಿ ಅಮೆರಿಕಾದಲ್ಲಿ ರೇಗನ್ ಮತ್ತು ಬ್ರಿಟನ್ನಿನಲ್ಲಿ ಥ್ಯಾಚರ್ ಉದಯವನ್ನು ಅನುಸರಿಸಿ ಬಂತು ಎನ್ನಬಹುದು. ಇದು ಎಂತಹ ಆರ್ಥಿಕ ಪರಿಸ್ಥಿತಿಗಳನ್ನು ಸೃಷ್ಟಿಸಿತೆಂದರೆ, ಆರ್ಥಿಕ ಅಭಿವೃದ್ಧಿಯ ಮತ್ತು ಬೆಳವಣಿಗೆಯ ಬಹುಪಾಲನ್ನು ಒಂದು ಅತಿ ಸಣ್ಣ ಗುಂಪು ಮಾತ್ರ ದಕ್ಕಿಸಿಕೊಂಡು ಹೆಚ್ಚಿನ ಜನಗಳಿಗೆ ಹೆಚ್ಚೆಚ್ಚು ಸಂಕಟಗಳನ್ನೇ ತಂದಿತು.

ಎರಡನೇ ಮಹಾಯುದ್ಧಾನಂತರದ ಮೊದಲ ಎರಡೂವರೆ ದಶಕಗಳಲ್ಲಿ ಜಾಗತಿಕ ಬಂಡವಾಳಶಾಹಿಯು ಬೆಳವಣಿಗೆಯ ಒಂದು ಗತಿಶೀಲ ಅವಧಿಯನ್ನು ಕಂಡಿತು. ಇದನ್ನು ಬಂಡವಾಳಶಾಹಿಯ ಸುವರ್ಣಯುಗ ಎನ್ನಲಾಗುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 1948ರಿಂದ 1972ರ ಅವಧಿಯಲ್ಲಿ ಅಲ್ಲಿಯ ಪ್ರತಿಯೊಂದು ಜನವಿಭಾಗದ ಜೀವನ ಮಟ್ಟ ಏರಿತು. ಆದರೆ 1972ರಿಂದ 2013ರ ನಡುವೆ, ಅತ್ಯಂತ ಕೆಳಗಿನ 10% ಮಂದಿಯ ಆದಾಯಗಳು ಇಳಿಮುಖಗೊಂಡರೆ, ಮೇಲಿನ ಅತಿಶ್ರೀಮಂತ 10% ಮಂದಿಯ ಆದಾಯಗಳು ವಿಪರೀತವಾಗಿ ಏರಿದವು. ಪೂರ್ಣ ಕಾಲದ ಪುರುಷ ದುಡಿಮೆಗಾರರಲ್ಲಿ ಮಧ್ಯದ ನಿಜಆದಾಯ ನಾಲ್ಕು ದಶಕಗಳ ಹಿಂದೆ ಇದ್ದುದಕ್ಕಿಂತಲೂ ಕೆಳಗಿಳಿದಿದೆ. ಕೆಳಗಿನ 90% ಮಂದಿಯ ಆದಾಯ ಕಳೆದ 30 ವರ್ಷಗಳಲ್ಲಿ ಸ್ಥಗಿತಗೊಂಡಿದೆ. 25 ಹೆಚ್ಚು ಆದಾಯದ ಆರ್ಥಿಕ ವ್ಯವಸ್ಥೆಗಳಲ್ಲಿ ಸರಾಸರಿಯಾಗಿ 65ರಿಂದ 70 ಶೇಕಡಾ ಕುಟುಂಬಗಳ ನಿಜಆದಾಯ 2005ರಿಂದ 2014ರ ನಡುವೆ ಏರಲೇ ಇಲ್ಲ, ಇಲ್ಲವೇ ಇಳಿದಿದೆ. 2000ದಲ್ಲಿ ನಡೆಸಿದ ಒಂದು ಗಣನೆಯ ಪ್ರಕಾರ 33% ಅಮೆರಿಕನ್ನರು ಮಾತ್ರ ತಮ್ಮನ್ನು ಕಾರ್ಮಿಕ ವರ್ಗ ಎಂದು ಕರೆದುಕೊಂಡಿದ್ದರು. 2015ರ ವೇಳೆಗೆ ಸುಮಾರು ಅರ್ಧದಷ್ಟು, 48% ಅಮೆರಿಕನ್ನರು ತಮ್ಮನ್ನು ಕಾರ್ಮಿಕ ವರ್ಗ ಎಂದು ಹೇಳಿಕೊಂಡರು.

ಜಾಗತಿಕವಾಗಿ ಈ ವಿಶಾಲ ಜನವಿಭಾಗದ ಸಂಕಟಗಳು ದೊಡ್ಡಪ್ರಮಾಣದಲ್ಲಿ ಅಸಂತೃಪ್ತಿಯನ್ನು ಉಂಟು ಮಾಡಿವೆ. ಇದು ರಾಜಕೀಯವಾಗಿ ಅಭಿವ್ಯಕ್ತಗೊಳ್ಳಲು ಪ್ರಯತ್ನಿಸುತ್ತಿದೆ.

ನವ-ಉದಾರವಾದ ಸೃಷ್ಟಿಸಿದ ಈ ಬಿಕ್ಕಟ್ಟು ಸಾಮ್ರಾಜ್ಯಶಾಹಿ ದೇಶಗಳಲ್ಲಿ ಬ್ರೆಕ್ಸಿಟ್‌ನಂತಹ ಒಡಕುಗಳು, ಸಂಘರ್ಷಗಳಿಗೆ ಹಾದಿ ಮಾಡಿಕೊಟ್ಟಿದೆ. ಹೊಸ ರಾಜಕೀಯ ಶಕ್ತಿಗಳ ಉದಯ, ಹೆಚ್ಚೆಚ್ಚು ಉದ್ವಿಗ್ನತೆ ಈ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗುತ್ತಿವೆ.

ಪ್ರಸಕ್ತ ಅವಧಿ ಜಗತ್ತಿನ ಬಹಳಷ್ಟು ಭಾಗಗಳಲ್ಲಿ ಇನ್ನಷ್ಟು ರಾಜಕೀಯ ಬಲಪಂಥದತ್ತ ಪಲ್ಲಟವನ್ನು ಕಾಣುತ್ತಿದೆ. ಪ್ರಸಕ್ತ ಬಿಕ್ಕಟ್ಟಿನ ಎದುರಲ್ಲಿ, ಸಾಮ್ರಾಜ್ಯಶಾಹಿ ಆಕ್ರಮಣಕಾರೀ ನವ-ಉದಾರವಾದವನ್ನು ಅನುಸರಿಸುವ ಜತೆಗೆ ಒಂದು ಜಾಗತಿಕ ವಿಭಜನಕಾರೀ ಅಜೆಂಡಾವನ್ನೂ ಅನುಸರಿಸುತ್ತಿದೆ. ಇದು ದೇಶಗಳೊಳಗೆ, ಸ್ಥಳೀಯ ಮತ್ತು ಪ್ರಾದೇಶಿಕ ಉದ್ವಿಗ್ನತೆಗಳನ್ನು ಪೋಷಿಸುವ ಅಜೆಂಡಾ. ಜಾಗತಿಕ ಯಜಮಾನಿಕೆಯನ್ನು ಕ್ರೋಡೀಕರಿಸಲು ಮತ್ತು ಪಶ್ಚಿಮ ಏಶ್ಯಾದಲ್ಲಿ ತೈಲಸಂಪನ್ಮೂಲದಂತಹ ಆರ್ಥಿಕ ಸಂಪನ್ಮೂಲಗಳ ಮೇಲೆ ಹತೋಟಿ ಹೊಂದಲು ಅದು ಮಿಲಿಟರಿ ಮಧ್ಯಪ್ರವೇಶಗಳಲ್ಲಿ ತೊಡಗಿದೆ, ಜನಾಂಗದ್ವೇಷ ವಿದೇಶಗಳವರ ಬಗ್ಗೆ ದ್ವೇಷ ಮತ್ತು ಉಗ್ರ ಫ್ಯಾಸಿಸ್ಟ್ ಪ್ರವೃತ್ತಿಗಳು ಹೆಚ್ಚುವಂತೆ ಮಾಡುತ್ತಿದೆ.

ಅಮೆರಿಕಾದ ಚುನಾವಣೆಗಳಲ್ಲಿ ಡೊನಾಲ್ಡ್ ಟ್ರಂಪ್ ವಿಜಯ, ಬ್ರಿಟನ್ನಿನಲ್ಲಿ ಬ್ರೆಕ್ಸಿಟ್ ವೋಟಿನಲ್ಲಿ ಬಲಪಂಥೀಯ ಅಣಿನೆರಿಕೆ, ಫ್ರಾನ್ಸಿನಲ್ಲಿ ಉಗ್ರ ಬಲಪಂಥೀಯ ನ್ಯಾಶನಲ್ ಫ್ರಂಟ್‌ನ ಮರಿನೆ ಲೆ ಪೆನ್ ಗಳಿಕೆಗಳು, ಜರ್ಮನಿಯಲ್ಲಿ "ಡೊಯಿಟ್ಶ್‌ಲ್ಯಾಂಡ್‌ಗೆ ಪರ್ಯಾಯ' ಎಂಬ ಗುಂಪಿನ ಮುನ್ನಡೆ, ಆಸ್ಟ್ರಿಯಾದಲ್ಲಿ ಒಂದು ಬಲಪಂಥೀಯ ಸರಕಾರದ ರಚನೆ, ಅದರಲ್ಲಿ ಬಲಪಂಥೀಯ ಉಗ್ರಗಾಮಿ ಫ್ರೀಡಂ ಪಾರ್ಟಿಯ ಪ್ರತಿನಿಧಿಗಳೂ ಸೇರಿರುವುದು, ಮತ್ತು ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಸುಮಾರು ಮೂರನೇ ಒಂದರಷ್ಟು ಬಲಪಂಥೀಯ ಮತ್ತು ಉಗ್ರ ಬಲಪಂಥೀಯ ಪಕ್ಷಗಳ ಸದಸ್ಯರು ಪ್ರತಿನಿಧಿಗಳಾಗಿರುವುದು ಈ ಬಲಪಂಥದತ್ತ ಪಲ್ಲಟವನ್ನು ಬಿಂಬಿಸುತ್ತದೆ. ಈ ಪ್ರವೃತ್ತಿ ಇದರ ಪರಿಣಾಮವಾಗಿ ಭಾರತದ ರಾಜಕಾರಣದಲ್ಲೂ ಕಂಡು ಬಂದಿದೆ.

ತೀವ್ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಮಯಗಳಲ್ಲಿ ಹೆಚ್ಚುತ್ತಿರುವ ಜನಗಳ ಅಸಂತೃಪ್ತಿಯನ್ನು ಯಾರು ತಮ್ಮದಾಗಿಸಿಕೊಳ್ಳಬೇಕು ಎಂಬ ಒಂದು ರಾಜಕೀಯ ಸಮರ ಎದ್ದು ಬರುತ್ತದೆ. ಜನಗಳ ಆಕ್ರೋಶವನ್ನು ಅಣಿನೆರೆಸಿ ಮತ್ತು ಎಡಪಂಥೀಯ ಹಾಗೂ ಪ್ರಗತಿಶೀಲ ಶಕ್ತಿಗಳು ಪ್ರಧಾನ ರಾಜಕೀಯ ಶಕ್ತಿಯಾಗಿ ಮೂಡಿ ಬರದಂತೆ ನೋಡಿಕೊಳ್ಳುವ ಮೂಲಕ ರಾಜಕೀಯ ಬಲಪಂಥ ಮುನ್ನಡೆ ಸಾಧಿಸುತ್ತದೆ. ಜನಗಳ ಆಕ್ರೋಶವನ್ನು ಬಂಡವಾಳ ಮಾಡಿಕೊಳ್ಳುವ ಈ ಬಲಪಂಥೀಯ ಶಕ್ತಿಗಳು ಕೊನೆಗೆ ಈ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾದ, ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕಿ ಅಸಂತೃಪ್ತಿ ಹೆಚ್ಚುವಂತೆ ಮಾಡಿದ ಆರ್ಥಿಕ ಧೋರಣೆಗಳನ್ನೇ ಅನುಸರಿಸುತ್ತವೆ,

ಸ್ಪಷ್ಟವಾಗಿಯೂ, ಮುಂಬರುವ ದಿನಗಳಲ್ಲಿ ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಜನತೆಯ ಅಸಂತೃಪ್ತಿಯನ್ನು ತಮ್ಮ ಜೊತೆಗೊಯ್ಯುವಲ್ಲಿ ರಾಜಕೀಯ ಯಶಸ್ಸು ಪಡೆಯುವವರು ಎಡ-ಒಲವಿನ ಜನವಾದೀ ಶಕ್ತಿಗಳೋ ಅಥವ ರಾಜಕೀಯ ಬಲಪಂಥವೋ ಎಂಬುದರ ಮೇಲೆ ಮುಂದಿನ ರಾಜಕೀಯ ದಿಕ್ಕು ನಿರ್ಧಾರಿತವಾಗುತ್ತದೆ. 1929-30ರ 'ಮಹಾ ಕುಸಿತ'(ಗ್ರೇಟ್ ಡಿಪ್ರೆಶನ್)ದ ಹಿನ್ನೆಲೆಯಲ್ಲಿ ಫ್ಯಾಸಿಸಂ ಜಗತ್ತಿನ ಗುತ್ತೇದಾರಿ ಬಂಡವಾಳದ ಬೆಂಬಲದೊಂದಿಗೆ ಎದ್ದು ಬಂತು. ಬಿಕ್ಕಟ್ಟಿನಿಂದಾಗಿ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿಯನ್ನು ಬಳಸಿಕೊಳ್ಳುವಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಯಶಸ್ವಿಯಾದವು. ಪ್ರಸಕ್ತ ಸಂಧಿಕಾಲದಲ್ಲಿ ದೀರ್ಘಕಾಲ ಎಳೆದು ಬಂದಿರುವ ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಜನಗಳ ಹೆಚ್ಚುತ್ತಿರುವ ಅಸಂತೃಪ್ತಿ ಉಗ್ರ ಬಲಪಂಥ ಮತ್ತು ನವ-ಫ್ಯಾಸಿಸ್ಟ್‌ಶಕ್ತಿಗಳ ಉದಯಕ್ಕೆ ಇಂಧನವಾಗುತ್ತಿದೆ.

ಮಾನವ ವಿಮೋಚನೆಯ ಏಕೈಕ ದಾರಿ

ಇಂದಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಸಮಾಜವಾದಿ ಆದರ್ಶ ಮಾನವಕುಲ ಶೋಷಣೆಯಿಂದ ತನ್ನನ್ನು ಉದ್ಧರಿಸಿಕೊಳ್ಳಲು ಈಗಲೂ ಕೂಡ ಏಕೈಕ ದಾರಿಯಾಗೇ ಉಳಿದಿದೆ. 2008ರ ಜಾಗತಿಕ ಹಣಕಾಸು ಕುಸಿತದ ನಂತರ ಜಾಗತಿಕ ಬಂಡವಾಳಶಾಹಿ ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿನತ್ತ ಧುಮುಕುತ್ತಿದೆ. ಬಿಕ್ಕಟ್ಟನ್ನು ಮೀರಿ ನಿಲ್ಲುವ ಪ್ರತಿಯೊಂದು ಪ್ರಯತ್ನವೂ ಇನ್ನಷ್ಟು ಆಳವಾದ ಬಿಕ್ಕಟ್ಟಿನ ಬೀಜವನ್ನು ಬಿತ್ತುತ್ತಿದೆ. ಜನಗಳ ಬಂಡವಾಳಶಾಹಿ ಶೋಷಣೆಯನ್ನು ತೀವ್ರಗೊಳಿಸುವ ಮೂಲಕ ಹೇರಿದ ಅಭೂತಪೂರ್ವ ಆರ್ಥಿಕ ಹೊರೆಗಳು, ಅದರಿಂದಾಗಿ ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳು ಮತ್ತು ಜಗತ್ತಿನ ಬಹುಪಾಲು ಜನಗಳನ್ನು ದಾರಿದ್ರ್ಯದತ್ತ ತಳ್ಳುತ್ತಿರುವುದು ಬಂಡವಾಳಶಾಹಿಯ ಸುಲಿಗೆಕೋರ ಸ್ವಭಾವ ಇನ್ನಷ್ಟು ನಗ್ನ ಸ್ವರೂಪ ಪಡೆದಿರುವುದನ್ನು ತೋರಿಸುತ್ತದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆ ಮಾಡಿದರೂ ಮಾನವಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲ. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ವಿಮೋಚನೆಯ ಗುರಿಯನ್ನು ಸಾಧಿಸಬಲ್ಲುದು. ಅಂತಿಮವಾಗಿ ಶೋಷಣೆಯಿಂದ ಮಾನವ ವಿಮೋಚನೆಗೆ ಬಂಡವಾಳದ ಆಳ್ವಿಕೆಯ ಮೇಲೆ ಸಮಾಜವಾದದ ಈ ರಾಜಕೀಯ ಪರ್ಯಾಯದ ಹೊಡೆತಗಳನ್ನು ತೀವ್ರಗೊಳಿಸಬೇಕಾಗಿದೆ.

ಬಿಕ್ಕಟ್ಟು ಎಷ್ಟೇ ತೀಕ್ಷ್ಣವಾಗಿರಲಿ, ಬಂಡವಾಳಶಾಹಿ ಎಂದೂ ತಾನಾಗಿಯೇ ಕುಸಿಯುವದಿಲ್ಲ. ಬಂಡವಾಳಶಾಹಿಗೆ ಸವಾಲೊಡ್ಡುವ ಒಂದು ರಾಜಕೀಯ ಪರ್ಯಾಯ ಬೆಳೆಯದಿದ್ದರೆ, ಬಂಡವಾಳಶಾಹಿ ಮಾನವ ಶೋಷಣೆಯನ್ನು ತೀವ್ರಗೊಳಿಸಿ ಬದುಕುಳಿಯುತ್ತದೆ. ಆದ್ದರಿಂದ ಸಮಾಜವಾದಿ ರಾಜಕೀಯ ಪರ್ಯಾಯದ ಬಲ ವ್ಯಾಪಕವಾಗಿ ಬೆಳೆಯಬೇಕು.

ಜಗತ್ತಿನಾದ್ಯಂತ ಬಂಡವಾಳಶಾಹಿ ಲೂಟಿಯ ಪ್ರಸಕ್ತ ಸುಲಿಗೆಕೋರ ಅಭಿವ್ಯಕ್ತಿ ಮತ್ತು ಅದರ ಜೊತೆಗೆ ಸಾಮ್ರಾಜ್ಯಶಾಹಿಯ ಆಧಿಪತ್ಯವನ್ನು ಹೇರುವ ಆಕ್ರಮಣಕೋರತೆಯ ವಿರುದ್ಧ ಜನಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದರೂ, ಇವು ಇನ್ನೂ ರಕ್ಷಣಾತ್ಮಕ ಹೋರಾಟಗಳಾಗಿಯೇ ಉಳಿದಿವೆ. ರಕ್ಷಣಾತ್ಮಕ ಎಂದರೆ ತಮ್ಮ ಈಗಿರುವ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ಜೀವನಾಧಾರ ಪರಿಸ್ಥಿತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಟಗಳಿಗೆ ಧುಮುಕಿದ್ದಾರೆ ಎಂಬರ್ಥದಲ್ಲಿ. ಇಂತಹ ಹೋರಾಟಗಳು ಶೇಖರಗೊಂಡು ಬಂಡವಾಳದ ಆಳ್ವಿಕೆಯ ಮೇಲೆ ವರ್ಗ ಪ್ರಹಾರ ನಡೆಸುವಂತಹ ಮಟ್ಟಗಳನ್ನು ತಲುಪಬೇಕಾಗಿದೆ.

ಬಂಡವಾಳಶಾಹಿಯನ್ನು ಕಿತ್ತೆಸೆಯಬೇಕಾಗಿದೆ. ಇದು ಕಾರ್ಮಿಕ ವರ್ಗದ ನೇತೃತ್ವದಲ್ಲಿನ ಭೌತಿಕ ಶಕ್ತಿಯನ್ನು ಬಲಪಡಿಸುವುದರ ಮೇಲೆಯೇ ನಿರ್ಣಾಯಕವಾಗಿ ಅವಲಂಬಿಸಿದೆ. ಈ ಭೌತಿಕ ಶಕ್ತಿ ಜನಪ್ರಿಯ ಹೋರಾಟಗಳು ಮತ್ತು ವರ್ಗಹೋರಾಟವನ್ನು ತೀವ್ರಗೊಳಿಸುವುದರ ಮೂಲಕ ಬಂಡವಾಳದ ಆಳ್ವಿಕೆಯ ಮೇಲೆ ರಾಜಕೀಯ ದಾಳಿಯನ್ನು ಹರಿಯಬಿಡುವುದರ ಮೂಲಕ ಮಾಡಬಲ್ಲದು. ಈ ಭೌತಿಕ ಶಕ್ತಿಯನ್ನು ಕಟ್ಟುವುದು, ಮತ್ತು ಅದರ ಬಲ-ಇದು ಈ ಸಂದರ್ಭದಲ್ಲಿನ 'ಕರ್ತೃ ' ಅಂಶ. ವಸ್ತುಸ್ಥಿತಿ, ಅಂದರೆ ಬಿಕ್ಕಟ್ಟಿನ ಮೂರ್ತ ಸನ್ನಿವೇಶ, ಒಂದು ಕ್ರಾಂತಿಕಾರಿ ಮುನ್ನಡೆಗೆ ಎಷ್ಟೇ ಅನುಕೂಲಕರವಾಗಿದ್ದರೂ, ಈ 'ಕರ್ತೃ' ಅಂಶವನ್ನು ಬಲಪಡಿಸದೆ ಬಂಡವಾಳದ ಆಳ್ವಿಕೆಯ ವಿರುದ್ಧ ಒಂದು ಕ್ರಾಂತಿಕಾರಿ ಪ್ರಹಾರವಾಗಿ ಮಾರ್ಪಡಿಸಲು ಸಾಧ್ಯವಾಗುವುದಿಲ್ಲ.

ವರ್ಗ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಮತ್ತು ಈ ನಿಜ ಪರಿಸ್ಥಿತಿಗಳ ಸವಾಲನ್ನು ಎದುರಿಸಲು ಈ 'ಕರ್ತೃ' ಅಂಶವನ್ನು ಬಲಪಡಿಸಲಿಕ್ಕಾಗಿ, ಪ್ರತಿಯೊಂದು ದೇಶದಲ್ಲಿ ಕಾರ್ಮಿಕ ವರ್ಗ ತನ್ನಲ್ಲಿನ ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆಯ ಆಧಾರದಲ್ಲಿ ವಿವಿಧ ಮಧ್ಯಂತರ ಘೋಷಣೆಗಳನ್ನು, ಕ್ರಮಗಳನ್ನು , ಕಾರ್ಯತಂತ್ರಗಳನ್ನು ಅನುಸರಿಸಬೇಕಾಗಿದೆ, ಈ ಮೂಲಕ ತಂತಮ್ಮ ದೇಶಗಳಲ್ಲಿ ಕ್ರಾಂತಿಕಾರಿ ಪರಿವರ್ತನೆಯ ಪ್ರಕ್ರಿಯೆಯನ್ನು ಮುಂದೊಯ್ಯಬೇಕಾಗಿದೆ. ಜನಗಳ ನಡುವೆ ರಾಜಕೀಯ ಬಲಾಬಲ ಎಡಶಕ್ತಿಗಳ ಪರವಾಗಿ ಪಲ್ಲಟಗೊಳ್ಳಬೇಕು. ಇದು ನವ-ಉದಾರವಾದದ ವಿರುದ್ಧ ಪರ್ಯಾಯ ಧೋರಣೆಗಳ ಚೌಕಟ್ಟಿನ ಆಧಾರದಲ್ಲಿ ಸಮರಧೀರ ಹೋರಾಟಗಳನ್ನು ಹರಿಯಬಿಡುವ ಮೂಲಕ ಮಾತ್ರವೇ ಸಂಭವಿಸಬಲ್ಲದು. ಇದಿಲ್ಲದಿದ್ದರೆ, ಜನಗಳಲ್ಲಿನ ಆಕ್ರೋಶವನ್ನು ಬಲಪಂಥಿಯ ರಾಜಕೀಯ ಶಕ್ತಿಗಳು ತಮ್ಮ ಪರವಾಗಿ ಕ್ರೋಡೀಕರಿಸುತ್ತವೆ.

ಇಂದು ಮಾರ್ಕ್ಸ್‌ವಾದ ಮಾತ್ರವೇ 'ಕರ್ತೃ'ಅಂಶವನ್ನು ಬಲಪಡಿಸಲು ಮತ್ತು ಈಮೂಲಕ ವರ್ಗಹೋರಾಟಗಳನ್ನು ತೀಕ್ಷ್ಣಗೊಳಿಸಲು ತಾತ್ವಿಕ ಬುನಾದಿಯನ್ನು ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಬಲ್ಲದು. ಆದ್ದರಿಂದ, ಮಾರ್ಕ್ಸ್‌ವಾದವೇ ಇಂದು, ಬಂಡವಾಳಶಾಹಿಯನ್ನು ದಾಟಿ ಹೋಗುವ ವರೆಗೆ, ವಾಸ್ತವ ಜಗತ್ತನ್ನು ಬದಲಿಸಲು, ಅದನ್ನು ಒಂದು ಉತ್ತಮ ಜಗತ್ತಾಗಿ ಬದಲಿಸಲು, ಮಾನವರಿಂದ ಮಾನವರ ಹಾಗೂ ದೇಶಗಳಿಂದ ದೇಶಗಳ ಶೋಷಣೆಯನ್ನು ಕೊನೆಗೊಳಿಸಲು ಸಮರ್ಥವಾದ ಏಕೈಕ ಶಕ್ತಿಯಾಗಿ ಉಳಿದಿದೆ ಮತ್ತು ಉಳಿಯುತ್ತದೆ.

ಉಳಿದವರು ಕಂಡಂತೆ...

ಸಿಪಿಐ(ಎಂ) ಅಭ್ಯರ್ಥಿಗಳ ಪ್ರಚಾರ ವೈಖರಿ, ಪ್ರಚಾರದ ಪರಿಣಾಮಕಾರಿತನ, ಕೊಡುತ್ತಿರುವ ತೀವ್ರ ಪೈಪೋಟಿ, ಗೆಲ್ಲುವ ಸಾಧ್ಯತೆ ಬಗ್ಗೆ ಮಾಧ್ಯಮಗಳಲ್ಲಿ ಬಂದ ಲಭ್ಯವಾದ ವರದಿ/ವಿಶ್ಲೇಷಣೆಗಳಿಂದ ಆಯ್ದ ಕೆಲವು ಭಾಗಗಳು. ಮಾಧ್ಯಮಗಳ ಅಜೆಂಡಾ ಗೊತ್ತಿರುವ ಎಲ್ಲರಿಗೂ ಇದರರ್ಥ, ಅವರ ವರದಿ ವಿಶ್ಲೇಷಣೆಗಳಲ್ಲಿ ಬರದಿದ್ದರೆ ಪ್ರಚಾರ ಪರಿಣಾಮಕಾರಿಯಾಗಿಲ್ಲ, ಪೈಪೋಟಿ ಕೊಡುತ್ತಿಲ್ಲ ಅಥವಾ ಗೆಲ್ಲುವ ಸಾಧ್ಯತೆ ಇಲ್ಲ ಎಂದೇನಲ್ಲ, ಎಂದು ಗೊತ್ತು.

ಮಂಗಳೂರು ಉತ್ತರ – ಮುನೀರ್ ಕಾಟಿಪಳ್ಳ
ಭಯ ಹುಟ್ಟಿಸಿದ ಮುನೀರ್

ಎಂ.ಆರ್.ಪಿ.ಎಲ್., ಸುರತ್ಕಲ್ ಮಾರುಕಟ್ಟೆ, ನದಿ ಮಾಲಿನ್ಯ ಸೇರಿದಂತೆ ಹಲವು ಜನಪರ ಹೋರಾಟಗಳ ಮೂಲಕ ಗುರುತಿಸಿಕೊಂಡಿರುವ ಮುನೀರ್ ಕಾಟಿಪಳ್ಳ ಅವರಿಗೆ ಪ್ರಚಾರದ ವೇಳೆ ವ್ಯಕ್ತವಾಗುತ್ತಿರುವ ಜನಬೆಂಬಲ ಮತವಾಗಿ ಪರಿವರ್ತನೆ ಆದರೆ ತಮ್ಮ ಗೆಲುವಿಗೆ ಅಡ್ಡಿಯಾಗಬಹುದು ಎಂಬ ಭಯ ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳ ಅಭ್ಯರ್ಥಿಗಳನ್ನು ಕಾಡುತ್ತಿದೆ.

“ಬಾವಾ ಮತ್ತು ಭಗತ್ ಹಣವಂತರು. ಅವರು ಹಣವಂತರ ಪರವಾಗಿಯೇ ಇರುವವರು. ಬಡವರು, ಮಧ್ಯಮ ವರ್ಗದ ಜನರ ಹಿತರಕ್ಷಣೆಗೆ ನನ್ನನು ಬೆಂಬಲಿಸಿ” ಎಂಬುದು ಮುನೀರ್ ಪ್ರಚಾರದ ಮಂತ್ರ. ಮುನೀರ್ ಮತಗಳಿಕೆ ಫಲಿತಾಂಶದ ಮೇಲೆ ಹೆಚ್ಚು ಪರಿಣಾಮ ಬೀರುವುದು ಖಚಿತ.

(ಪ್ರಜಾವಾಣಿ)

ಸೋದರ ಪ್ರೀತಿ : ಪಕ್ಷಕ್ಕೆ ಫಾರೂಕ್ ದ್ರೋಹ?

ಎರಡು ಬಾರಿ ರಾಜ್ಯಸಭೆಗೆ ಸ್ಪರ್ಧಿಸಿ ಸೋಲು ಕಂಡ ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಎಂ. ಫಾರೂಕ್ ಕರಾವಳಿಯಲ್ಲಿ ಇಟ್ಟ ಚಾಣಾಕ್ಷ ನಡೆ ಈಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ತಮ್ಮ ಸಹೋದರ ಹಾಗೂ ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಬಿ.ಎ. ಮೊಯ್ದೀನ್ ಬಾವಾ ಗೆಲ್ಲಬೇಕು ಎಂಬ ಕಾರಣಕ್ಕೆ ಅವರ ಪ್ರತಿಸ್ಪರ್ಧಿಗೆ ಜೆಡಿಎಸ್ ನಾಯಕ ಹಮ್ಮಬ್ಬ ಅವರಿಗೆ ಬಿ–ಫಾರ್ಮ್ ಕೊಟ್ಟಿಲ್ಲ. ಈ ಮೂಲಕ ಜಾತ್ಯತೀತ ಮತ ವಿಭಜನೆಯಾಗದಂತೆ ನೋಡಿಕೊಳ್ಳಲಾಗಿದೆ.

ಅಲ್ಪಸಂಖ್ಯಾತ ಸಮುದಾಯದ ಪ್ರಭಾವಿ ಕಮ್ಯೂನಿಸ್ಟ್ ಮುಖಂಡ ಹಾಗೂ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರನ್ನು ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವಂತೆ ಎಲ್ಲ ರೀತಿಯ ಒತ್ತಡಗಳನ್ನು ಹಾಕಲಾಗಿತ್ತು. ಹಣಬಲದಿಂದ ಹಿಡಿದು ಸಾಧ್ಯವಿರುವ ಎಲ್ಲ ತಂತ್ರಗಾರಿಕೆಗಳನ್ನು ಪ್ರದರ್ಶಿಸಿದ್ದರೂ ಮುನೀರ್ ಮುಂದೆ ಯಾರ ಆಟವೂ ನಡೆಯಲಿಲ್ಲ.

(ಇ–ಮುಂಗಾರು)

ಹಗರಿಬೊಮ್ಮನಹಳ್ಳಿ – ಬಿ. ಮಾಳಮ್ಮ

ರಾಜ್ಯದ ಮೂರು ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಹಾಗೂ ಜೆ.ಡಿ.ಎಸ್. ಲಂಬಾಣಿ ಸಮುದಾಯದವರನ್ನು ಕಣಕ್ಕೆ ಇಳಿಸಿವೆ. ಪರಿಶಿಷ್ಟ ಜಾತಿಗೆ (ಎಸ್ಸಿ) ಮೀಸಲಾಗಿರುವ ಈ ಕ್ಷೇತ್ರದಲ್ಲಿ ಈ ಪಕ್ಷಗಳು ಎಸ್ಸಿ ಸಮುದಾಯವನ್ನು ಕಡೆಗಣಿಸಿವೆ. ಅಸ್ಪೃಶ್ಯ ಸಮುದಾಯದ ಬಿ. ಮಾಳಮ್ಮ ಅವರು ಸಿಪಿಐ (ಎಂ), ಸಾರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಎಲ್. ಪರಮೇಶ್ವರಪ್ಪ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ.

(ಪ್ರಜಾವಾಣಿ)

ಬಾಗೇಪಲ್ಲಿ–ಜಿ.ವಿ.ಶ್ರೀರಾಮರೆಡ್ಡಿ
ಸಿರಿವಂತಿಕೆ, ಸಿದ್ಧಾಂತದ ನಡುವೆ ಸೆಣಸಾಟ

ನೆರೆಯ ಆಂಧ್ರ ಪ್ರದೇಶದಿಂದ ಚದುರಿದ ಎಡಪಂಥೀಯ ಚಿಂತನೆಗಳಿಗೆ ಇಂದಿಗೂ ಗಟ್ಟಿ ನೆಲೆ ಒದಗಿಸಿದೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ. ಇಲ್ಲಿ ಬಹು ಹಿಂದಿನಿಂದಲೂ ಸೈದ್ಧಾಂತಿಕ ಸಂಘರ್ಷದಿಂದಲೇ ಸಿಪಿಎಂ ಈವರೆಗೆ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ.

50ರ ದಶಕದ ಕೊನೆಯಲ್ಲಿ ಇಲ್ಲಿ ಕಾವು ಪಡೆದ ಕಮ್ಯುನಿಸ್ಟ್ ಚಳವಳಿ ಈವರೆಗೂ ಬೂದಿ ಮುಚ್ಚಿದ ಕೆಂಡದಂತಿದೆ. ಆದರೆ ಒಂದು ಕಾಲದ ‘ಹೋರಾಟದ ನೆಲ’ ಕಾಲ ಉರುಳಿದಂತೆ ‘ಮುಕ್ತ ಮಾರುಕಟ್ಟೆ’ಯಾಗಿ ಬದಲಾಗುತ್ತಾ ಬಂದಿದೆ. ಪರಿಣಾಮ, ಪ್ರತಿ ಸಾರ್ವತ್ರಿಕ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ವಲಸಿಗ ಸಿರಿವಂತರು ಮತ್ತು ಸ್ಥಳೀಯ ಕಮ್ಯುನಿಸ್ಟ್ ‘ಸಂಗಾತಿ’ಗಳ ನಡುವೆ ಸೆಣಸಾಟ ಮುಂದುವರಿಯುತ್ತಲೇ ಬಂದಿದೆ.

ಪ್ರಸ್ತುತ ಚುನಾವಣೆಯೂ ಅದಕ್ಕೆ ಹೊರತಾಗಿಲ್ಲ. ಕಮ್ಯುನಿಸ್ಟ್ ಮುಖಂಡರಾದ ಎ.ವಿ.ಅಪ್ಪಾಸ್ವಾಮಿ ರೆಡ್ಡಿ ಅವರ ತರುವಾಯ ಈ ಭಾಗದಲ್ಲಿ ಹೋರಾಟಗಳ ಮೂಲಕ ನಾಯಕರಾಗಿ ಬೆಳೆದವರು ಜಿ.ವಿ. ಶ್ರೀರಾಮರೆಡ್ಡಿ. ಅವರು ಇಲ್ಲಿ 1985ರಿಂದ ಈವರೆಗೆ ವಿಧಾನಸಭೆ ಚುನಾವಣೆಗಳಲ್ಲಿ ಸಿಪಿಎಂ ‘ಕಾಯಂ’ ಅಭ್ಯರ್ಥಿಯಾಗುತ್ತಲೇ ಬಂದಿದ್ದಾರೆ.

ಈವರೆಗೆ ಆರು ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಅವರು ನಾಲ್ಕು ಚುನಾವಣೆಗಳಲ್ಲಿ ಸೋತು, ಎರಡು ಬಾರಿ (1994, 2004) ದುಡಿಯುವ ವರ್ಗವನ್ನು ಪ್ರತಿನಿಧಿಸಿ ವಿಧಾನಸಭೆ ಪ್ರವೇಶಿಸಿದ್ದಾರೆ. ಅವರೇ ಘೋಷಿಸಿಕೊಂಡಂತೆ ಅವರ ಪಾಲಿಗೆ ಇದು ಕೊನೆಯ ಚುನಾವಣೆ. ಹೀಗಾಗಿ ಕ್ಷೇತ್ರದಲ್ಲಿರುವ ‘ಕೆಂಪಂಗಿ’ ಪಡೆ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚಿನ ಬದ್ಧತೆಯಿಂದ ತಮ್ಮ ಹುರಿಯಾಳನ್ನು ಗೆಲ್ಲಿಸಿಕೊಳ್ಳಲು ಟೊಂಕಕಟ್ಟಿ ಶ್ರಮಿಸುತ್ತಿದೆ.

ಮೂಲಸೌಕರ್ಯಗಳ ಕೊರತೆ, ನಿರುದ್ಯೋಗ, ಉದ್ಯೋಗ ಅಭದ್ರತೆ, ಪಾತಾಳಕ್ಕಿಳಿದ ಅಂತರ್ಜಲ, ಶುದ್ಧ ಕುಡಿಯುವ ನೀರಿನ ಸಮಸ್ಯೆ ಇವು ಚುನಾವಣೆಯಲ್ಲಿ ಆದ್ಯತೆಯ ವಿಷಯಗಳಾಗುತ್ತಲೇ ಬರುತ್ತಿವೆ. ಈ ಕ್ಷೇತ್ರವನ್ನು ಬರ ಇನ್ನಿಲ್ಲದಂತೆ ಕಾಡಿದರೂ ‘ಸಮಾಜ ಸೇವೆ’ಗೆಂದು ಹಣದ ಥೈಲಿ ಹಿಡಿದು ಇಲ್ಲಿಗೆ ಬರುವವರಿಗೇನೂ ಬರವಿಲ್ಲ.

ಸದ್ಯ ಸಿರಿವಂತ ಅಭ್ಯರ್ಥಿಗಳು ದಂಡಿಯಾಗಿ ದುಡ್ಡು ಸುರಿದು ಗೆಲುವಿನ ತಂತ್ರಗಳನ್ನು ಕಂಡುಕೊಳ್ಳಲು ಹವಣಿಸುತ್ತಿದ್ದಾರೆ. ಇನ್ನೊಂದೆಡೆ, ದುಡಿಯುವ ವರ್ಗವನ್ನು ಪ್ರತಿನಿಧಿಸುವ ಶ್ರೀರಾಮರೆಡ್ಡಿ ಅವರಿಗೆ ಪಕ್ಷದ ಕಾರ್ಯಕರ್ತರೇ ಹಳ್ಳಿ ಹಳ್ಳಿಗಳಲ್ಲಿ ಹಣ ಸಂಗ್ರಹಿಸಿ ನೀಡುತ್ತಿದ್ದಾರೆ.

ವಿದ್ಯಾರ್ಥಿಗಳು ಸಹ ಹುಂಡಿಯಲ್ಲಿ ಕೂಡಿಟ್ಟ ಹಣವನ್ನು ತಮ್ಮ ನಾಯಕನಿಗೆ ನೀಡಿ ಸೈದ್ಧಾಂತಿಕ ಬದ್ಧತೆ ಮೆರೆಯುತ್ತಿದ್ದಾರೆ. ಈ ಚುನಾವಣೆಯಲ್ಲಿ ಹಣ ಮತ್ತು ಗುಣದಲ್ಲಿ ಯಾವುದು ಮೇಲುಗೈ ಸಾಧಿಸುತ್ತದೆ ಎನ್ನುವುದೇ ಸದ್ಯದ ಕುತೂಹಲ.

(ಪ್ರಜಾವಾಣಿ–ಮೇ)

ಬಾಗೇಪಲ್ಲಿಯಲ್ಲಿ ಹಿಂದೆಂದೂ ಕಂಡರಿಯದ ಪೈಪೋಟಿ ನಡೆದಿದೆ.

(ಪ್ರಜಾವಾಣಿ–ಮೇ 8)

ಎಡ ಕಾವಲು ಠಾಣೆ ಮತ್ತು ಚುನಾವಣಾ ಹೊರವಲಯ

ಒಬ್ಬ ಹೊಟೆಲ್–ಬಾರ್ ಮಾಲಿಕ, ಒಬ್ಬ ಫಿಲಂ ಪ್ರೊಡ್ಯೂಸರ್, ಬಳ್ಳಾರಿ ಗಣಿಧಣಿ ಕನೆಕ್ಶನ್ ಇರುವ ಫಿಲಂ ಸ್ಟಾರ್, ರೀಯಲ್ ಎಸ್ಟೇಟ್ ಕುಳ ಮತ್ತು ಒಬ್ಬ ಕಮ್ಯುನಿಸ್ಟ್ – ಈ ಚುನಾವಣಾ ಅಭ್ಯರ್ಥಿಗಳ ವಿಚಿತ್ರ ಮಿಶ್ರಣ ಬಾಗೇಪಲ್ಲಿಯ ಜನತೆಗೆ ಹೊಸದೇನಲ್ಲ.

ಕರ್ನಾಟಕ–ಆಂಧ್ರ ಗಡಿಯಲ್ಲಿರುವ ಬಾಗೇಪಲ್ಲಿ ಒಂದು ಚುನಾವಣಾ ಹೊರವಲಯ.

ಚುನಾವಣಾ ಕಾರ್ಯಕರ್ತರಿಗೆ ಕೇಂದ್ರವಾಗಿರುವ ಅವರ ಸಣ್ಣ ಎರಡು ರೂಮಿನ ಮನೆಯಲ್ಲಿ ಆದರ್ಶಕ್ಕೇನೂ ಕೊರತೆಯಿಲ್ಲ. ರೆಡ್ಡಿ ಅವರ ಪ್ರಚಾರಕ್ಕೆ ಬೇಕಾದ ಹಣವನ್ನು ಕಾರ್ಯಕರ್ತರು ಮತ್ತು ಜನರೇ ನೀಡುತ್ತಿದ್ದಾರೆ.

(ದಿ ಹಿಂದು)

“ಪ್ಯಾರಿಸ್ ಕಮ್ಯೂನ್” ಯಾಕೆ ಓದಬೇಕು?........ ಪುಟ 6 ರಿಂದ

ಮಾಡುವ ಕಾರ್ಮಿಕ ವರ್ಗದ ಸರ್ವಾಧಿಕಾರ ಆಗಲು ಸಾಧ್ಯವಿಲ್ಲ.

- ಕಮ್ಯೂನನ್ನು ಪ್ಯಾರಿಸಿಗೆ ಮಾತ್ರ ಸೀಮಿತಗೊಳಿಸುವುದು ಅವರ ಉದ್ದೇಶವಾಗಿರಲಿಲ್ಲ. ಇತರ ನಗರಗಳಲ್ಲೂ ಕಮ್ಯೂನ್ ಸ್ಥಾಪಿಸುವ ಪ್ರಯತ್ನ ನಡೆಯಿತು. ಇಂತಹ ಎಲ್ಲಾ ಕಮ್ಯೂನುಗಳ ರಾಷ್ಟ್ರೀಯ ಒಕ್ಕೂಟ ಸ್ಥಾಪಿಸುವ ಯೋಜನೆಯೂ ಇತ್ತು. ಅವರ ಯೋಜನೆಯ ಪ್ರಕಾರ ಇಂತಹ ಒಕ್ಕೂಟ ದುರ್ಬಲ ಕೇಂದ್ರವಿರುವ ಒಕ್ಕೂಟವಾಗೇನೂ ಇರಲಿಲ್ಲ. ಅಥವಾ ಪ್ರೂಧೋನ್‌ವಾದಿ ಅರಾಜಕತಾವಾದಿಗಳ ಪರಿಕಲ್ಪನೆಯ ಸಡಿಲ “ಒಕ್ಕೂಟ”ವಾಗಿರಲಿಲ್ಲ. ಕೇಂದ್ರೀಯವಾಗಿ ಯಾವುದನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇತ್ತು. ಕಾರ್ಮಿಕರು ಮತ್ತು ರೈತರು ಒಗ್ಗೂಡಿದ ಕಮ್ಯೂನುಗಳ ಒಕ್ಕೂಟ ಖಾಸಗಿ ಬಂಡವಾಳಶಾಹಿ ಕೈಯಲ್ಲಿರುವ ಕಾರ್ಖಾನೆಗಳು, ರೈಲ್ವೆ, ಭೂಮಿ ಇತ್ಯಾದಿ ಸಂಪನ್ಮೂಲಗಳನ್ನು ಇಡೀ ಸಮಾಜದ ಅಂದರೆ ಎಲ್ಲಾ ಕಮ್ಯೂನುಗಳ ಒಕ್ಕೂಟದ ಸೊತ್ತಾಗಿಸಿ ಕೇಂದ್ರೀಯವಾಗಿ ನಿರ್ವಹಿಸಬೇಕು ಎಂಬುದರ ಬಗ್ಗೆ ಮಾರ್ಕ್ಸ್‌ಗೂ ಕಮ್ಯೂನಿಗೂ ಸ್ಪಷ್ಟತೆ ಇತ್ತು.
- ಹಿಂದಿನ ಸಾಮಾಜಿಕ ವ್ಯವಸ್ಥೆಗಳಲ್ಲಿನ ಅತಿ ಕೇಂದ್ರೀಕರಣಕ್ಕೆ ಪ್ರತಿಕ್ರಿಯೆಯಾಗಿ ಮೂಡಿ ಬಂದ ಕಮ್ಯೂನುಗಳ, ಮತ್ತು ಅವುಗಳ ಸಡಿಲ ಒಕ್ಕೂಟದೊಂದಿಗೆ ಅಥವಾ ಕೆಲವು ಸಿದ್ಧಾಂತಿಗಳ ಕಲ್ಪನೆಯ “ಕಮ್ಯೂನ್”ಗಳಿಗೆ, ಪ್ಯಾರಿಸ್ ಕಮ್ಯೂನನ್ನು ಹೋಲಿಸಿ ಗೊಂದಲಕ್ಕೀಡಾಗಬಾರದು. ಕಾರ್ಮಿಕರ ಚಳುವಳಿಯ ಮೊದಲ ಕ್ರಾಂತಿಯ ಪ್ರಯತ್ನದಲ್ಲಿ ಮೂಡಿಬಂದ ಮತ್ತು ಸಂಘಟಿಸಿದ ನಿರ್ದಿಷ್ಟ ರಾಜಕೀಯ ರೂಪ, ಪ್ಯಾರಿಸ್ ಕಮ್ಯೂನ್.

ರಶ್ಯನ್ ಮಹಾಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಮಾಜವಾದಿ ಕ್ರಾಂತಿಯ ಮೂಲನೆಲೆಗಟ್ಟಾಗಿದ್ದ ಕಾರ್ಮಿಕರ, ರೈತರ ಮತ್ತು ಸೈನಿಕರ “ಸೋವಿಯೆಟ್”ಗಳು, ಸ್ವಯಂಸ್ಫೂರ್ತವಾಗಿ ಹುಟ್ಟಿದ್ದರೂ ಪ್ಯಾರಿಸ್ ಕಮ್ಯೂನಿನ ಅನುಭವದಿಂದ ಹಲವು ರೀತಿಗಳಲ್ಲಿ ಸ್ಫೂರ್ತಿ ಪಡೆದಿದ್ದವು. ಕ್ರಾಂತಿಯ ನಾಯಕತ್ವ ವಹಿಸಿದ ಲೆನಿನ್ ಮತ್ತು ಬೊಲ್ಶೆವಿಕ್ ಪಕ್ಷದ ನಾಯಕರು, ಮತ್ತು ಕಾರ್ಯಕರ್ತರಂತೂ ಪ್ಯಾರಿಸ್ ಕಮ್ಯೂನಿನ ಅನುಭವವನ್ನು ಪೂರ್ಣವಾಗಿ ಮೈಗೂಡಿಸಿಕೊಂಡವರೇ ಆಗಿದ್ದರು. ನಂತರ ಅವರು ಕಟ್ಟಿದ ಸೋವಿಯೆಟ್ ಪ್ರಭುತ್ವ, ಪ್ಯಾರಿಸ್ ಕಮ್ಯೂನಿನ ನಾಯಕರು ಉದ್ದೇಶಿಸಿದ್ದ, ಆದರೆ ಅದರ ಅವಸಾನದಿಂದಾಗಿ ಜಾರಿ ಮಾಡಲಾಗದೆ ಹೋಗಿದ್ದ ಕಮ್ಯೂನುಗಳ ಒಕ್ಕೂಟ ರಚಿಸುವ ಕೆಲಸವನ್ನು ಮುಂದಕ್ಕೆ ಒಯ್ದಿತ್ತು. ಸೋವಿಯೆಟ್ ಒಕ್ಕೂಟದ ಸಮಾಜವಾದಿ ಪ್ರಭುತ್ವ ಪ್ಯಾರಿಸ್ ಕಮ್ಯೂನಿನ ಕನಸುಗಳಲ್ಲಿ ಹೆಚ್ಚಿನವನ್ನು ಸಾಕಾರಗೊಳಿಸಿತ್ತು. ಅದೇ ರೀತಿ ಚೀನಿ ಕ್ರಾಂತಿಯ ನಂತರ ಸ್ಥಾಪನೆಗೊಂಡ ಸಮಾಜವಾದಿ ಪ್ರಭುತ್ವದ ಮೂಲಭೂತ ಉತ್ಪಾದನೆ–ಆಡಳಿತದ ಘಟಕವನ್ನು “ಕಮ್ಯೂನ್” ಎಂದು ಕರೆದದ್ದು ಆಕಸ್ಮಿಕವೇನಲ್ಲ. ನಂತರ ಬಂದ ಸಮಾಜವಾದಿ ಕ್ರಾಂತಿಗಳೂ ಕೂಡಾ ಪ್ಯಾರಿಸ್ ಕಮ್ಯೂನ್‌ನಿಂದ ಸ್ಫೂರ್ತಿ ಪಡೆದಿವೆ. ಅದರ ಆಶಯಗಳನ್ನು ಸಾಕಾರಗೊಳಿಸಲು ಪ್ರಯತ್ನಿಸಿವೆ. ಈ ಎಲ್ಲಾ ಸಮಾಜವಾದಿ ಪ್ರಭುತ್ವಗಳು, ಮಾರ್ಕ್ಸ್ ರೂಪಿಸಿದ ಕಾರ್ಮಿಕ ಪ್ರಭುತ್ವದ ಮುಖ್ಯ ಅಂಶಗಳನ್ನು, ಪ್ಯಾರಿಸ್ ಕಮ್ಯೂನಿನ ಅನುಭವದಿಂದ ಪೂರ್ಣವಾಗಿ ಜಾರಿ ಮಾಡಲು ಸಫಲವಾದವೆ? ಅವುಗಳಲ್ಲಿ ಎಲ್ಲವೂ ಪ್ರಸ್ತುತವೆ? ಅವುಗಳಲ್ಲಿ ಕೆಲವಕ್ಕೆ ಆದ ತೀವ್ರ ಹಿನ್ನಡೆಗೆ ಅವನ್ನು ಪೂರ್ಣವಾಗಿ ಜಾರಿ ಮಾಡಲಾಗದೆ ಇದ್ದಿದ್ದು ಕಾರಣವೆ? ಹಿಂದೆ ಇದ್ದ ಮತ್ತು ಈಗ ಇರುವ ಸಮಾಜವಾದಿ ಪ್ರಭುತ್ವಗಳ ಪ್ರಾಯೋಗಿಕ ಅನುಭವಗಳ ಆಧಾರದಲ್ಲಿ ಕಾರ್ಮಿಕ ಕ್ರಾಂತಿ ಮತ್ತು ಪ್ರಭುತ್ವದ ಸಿದ್ಧಾಂತದಲ್ಲಿ ಯಾವ ಪ್ರಗತಿಯನ್ನು ಸಾಧಿಸಲಾಗಿದೆ? ಇವುಗಳ ಬೆಳಕಲ್ಲಿ ಮುಂದಿನ ಕಾರ್ಮಿಕ ಕ್ರಾಂತಿಗಳ ತಯಾರಿಯಲ್ಲಿ ತೊಡಗಿರುವ ಕಾರ್ಮಿಕ ಚಳುವಳಿಗಳು ಏನನ್ನು ಕಲಿಯಬಹುದು? – ಇವೆಲ್ಲವೂ, ಅಧ್ಯಯನ, ಚರ್ಚೆ, ಸಂವಾದ, ಪ್ರಾಯೋಗಿಕ ಅನುಭವಗಳ ಕ್ರೋಢೀಕರಣಗಳನ್ನು ಬೇಡುವಂಥವು. ಇವೆಲ್ಲದಕ್ಕಾಗಿ ಮಾರ್ಕ್ಸ್ ಅವರ “ಪ್ಯಾರಿಸ್ ಕಮ್ಯೂನ್” ಬರಹವು ಮತ್ತೆ ಮತ್ತೆ ಅಧ್ಯಯನ ಮಾಡಲೇಬೇಕಾದ ಒಂದು ಮೂಲಭೂತ ಕೃತಿ.

ಫ್ರೆಂಚ್ ಆಳುವ ವರ್ಗಗಳ ಆಳ್ವಿಕೆಯು ಎರಡನೇ ಮಹಾಯುದ್ಧದ ನಂತರ ಎದುರಿಸಿದ ಅತ್ಯಂತ ಗಂಭೀರ ಬಿಕ್ಕಟ್ಟಿಗೆ ಕಾರಣವಾದ “ಕೆಂಪು ಮೇ” ಎಂದು ಕರೆಯಲಾಗುವ, 1968ರ ವಿದ್ಯಾರ್ಥಿ–ಕಾರ್ಮಿಕ ಚಳುವಳಿ ಸಹ ಪ್ಯಾರಿಸ್ ಕಮ್ಯೂನ್‌ನಿಂದ ಸ್ಫೂರ್ತಿ ಪಡೆದಿತ್ತು. ‘ಕಮ್ಯೂನ್’ ಮಾರ್ಕ್ಸ್‌ವಾದಿ ಚಳುವಳಿಗಳಿಗೆ ಸ್ಫೂರ್ತಿದಾಯಕವಾಗಿರುವುದಷ್ಟೇ ಅಲ್ಲ. ಅದೇ ರೀತಿ ಪ್ರೂಧೋನ್‌ವಾದಿ, ಬ್ಲಾಂಕಿವಾದಿ ಮುಂತಾದ ಅರಾಜಕತಾವಾದಿ ಧಾರೆಗಳಿಗೂ ಮತ್ತು ಇತರ ಸೈದ್ಧಾಂತಿಕ ಧಾರೆಗಳಿಗೂ ಸ್ಫೂರ್ತಿದಾಯಕವಾಗಿದೆ. ‘ಕಮ್ಯೂನ್’ ನಾಯಕತ್ವ ವಹಿಸಿದ್ದವರಲ್ಲಿ ಮಾರ್ಕ್ಸ್ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದ ಅಂತರ್ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯ ಸಕ್ರಿಯ ಸದಸ್ಯರು, ಪ್ರೂಧೋನ್‌ವಾದಿ, ಬ್ಲಾಂಕಿವಾದಿ ಸದಸ್ಯರು, ಮತ್ತು ಯಾವುದೇ ಸೈದ್ಧಾಂತಿಕ ಒಲವು ಇಲ್ಲದವರೂ ಸಹ ಇದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

1959ರ ಕ್ಯೂಬನ್ ಕ್ರಾಂತಿಯ ನಂತರ ಸಮಾಜವಾದಿ ಪ್ರಭುತ್ವವನ್ನು ಸ್ಥಾಪಿಸಿದ ಯಾವುದೇ ಕ್ರಾಂತಿಗಳಾಗಿಲ್ಲ. ಅದರೀಚೆಗಿನ ಜಗತ್ತು ಬಹಳ ಬದಲಾಗಿದೆ. ಸೋವಿಯತ್ ಮತ್ತು ಪೂರ್ವ ಯುರೋಪಿನ ಸಮಾಜವಾದಿ ಪ್ರಭುತ್ವಗಳ ಪತನದೊಂದಿಗೆ ಆರಂಭವಾದ 1990 ರ ದಶಕದ ಸಾಮ್ರಾಜ್ಯಶಾಹಿ ಜಾಗತೀಕರಣದ ಹಣಕಾಸು ಬಂಡವಾಳದ ಯಜಮಾನಿಕೆಯ ಈ ಯುಗದಲ್ಲಿ ಸಮಾಜವಾದಿ ಕ್ರಾಂತಿಯನ್ನು ಮುನ್ನಡೆಸುವುದು ಹೇಗೆ? ಇತ್ತೀಚಿನ ಎಡ ಮತ್ತು ಪ್ರಗತಿಪರ ಚಳುವಳಿಗಳಲ್ಲಿ (ಅವು ಯಾವುವೂ ಸಮಾಜವಾದಿ ಕ್ರಾಂತಿ ಮತ್ತು ಸಮಾಜವಾದಿ ಪ್ರಭುತ್ವವನ್ನು ಸ್ಥಾಪಿಸುವುದು ಸಾಧ್ಯವಾಗದಿದ್ದರೂ) ತೀವ್ರ ಮುನ್ನಡೆ ಕಂಡ ಲ್ಯಾಟಿನ್ ಅಮೆರಿಕಾ ದೇಶಗಳ ಅನುಭವಗಳನ್ನು ಅರ್ಥೈಸಿಕೊಳ್ಳುವುದು ಹೇಗೆ? ಭಾರತದಂತಹ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಮತ್ತು ಸಮಾಜವಾದಿ ಪ್ರಭುತ್ವ ಹೇಗಿರುತ್ತದೆ? – ಇವೆಲ್ಲ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನಗಳಲ್ಲೂ “ಪ್ಯಾರಿಸ್ ಕಮ್ಯೂನ್” ನ ಅಧ್ಯಯನ ಅತ್ಯವಶ್ಯಕ ಮತ್ತು ಅನಿವಾರ್ಯ.

“ಪ್ಯಾರಿಸ್ ಕಮ್ಯೂನ್ ನಾಶವಾದರೆ, ಈ ಸಂಘರ್ಷ ಮುಂದಕ್ಕೆ ಹೋಗುತ್ತದೆ, ಅಷ್ಟೆ. ಕಮ್ಯೂನ್‌ನ ಧೋರಣೆಗಳು ಚಿರಂತನ ಮತ್ತು ಅಳಿಸಲಾಗದವು; ಅವು ಕಾರ್ಮಿಕ ವರ್ಗದ ವಿಮೋಚನೆ ಆಗುವವರೆಗೆ ಮತ್ತೆ ಮತ್ತೆ ಮರುಕಳಿಸುತ್ತಲೇಇರುತ್ತವೆ” ಎಂದು ಕಮ್ಯೂನ್ ಇನ್ನೂ ಕಾರ್ಯನಿರತವಾಗಿದ್ದಾಗ ಮಾರ್ಕ್ಸ್ ಹೇಳಿದ್ದನ್ನು ಇಂದಿನ ಪರಿಸ್ಥಿತಿಯಲ್ಲಿ ನೆನಪಿಸಿಕೊಂಡು ಮುನ್ನಡೆಯೋಣ. ■

ಅಚ್ಛೇ ದಿನ್ ವಿಶ್ವಾಸಘಾತದಿಂದ ರೈತರಿಗೆ 3 ಲಕ್ಷ ಕೋಟಿ ರೂ.ಗಳ ನಷ್ಟ!

ಈಗ ಮಾರುಕಟ್ಟೆಗೆ ಬಂದಿರುವ ಆರು ಪ್ರಮುಖ ಹಿಂಗಾರು ಬೆಳೆಗಳಲ್ಲಿ ಭಾರತದ ರೈತರು ಕನಿಷ್ಟ ರೂ. 60,861 ಕೋಟಿ ರೂ.ಗಳ ನಷ್ಟ ಅನುಭವಿಸಿದ್ದಾರೆ. ಈ ಮೊದಲು ಮುಂಗಾರು ಬೆಳೆಗಳಲ್ಲಿ ನಷ್ಟವಾದ 2ಲಕ್ಷ ಕೋಟಿರ ಊ.ಗಳನ್ನು ಸೇರಿಸಿದರೆ, ಭಾರತದ ರೈತರು ಈಗ ಮುಗಿದಿರುವ ಹಣಕಾಸು ವರ್ಷ (2017–18)ದಲ್ಲಿ ಸುಮಾರು 2.6ಲಕ್ ಷಕೋಟಿ ರೂ.ಗಳ ನಷ್ಟ ಅನುಭವಿಸಿದ್ದಾರೆ ಎಂದು ಒಬ್ಬ ಆರ್ಥಿಕ ತಜ್ಞರು ಲೆಕ್ಕ ಹಾಕಿದ್ದಾರೆ (ಸುಭೋದ್ ವರ್ಮ, ನ್ಯೂಸ್‌ಕ್ಲಿಕ್.ಇನ್, ಮೇ4)

ಏಕೆಂದರೆ ಡಾ.ಎಂ.ಎಸ್.ಸ್ವಾಮಿನಾಥನ್ ಅಧ್ಯಕ್ಷತೆಯ ರಾಷ್ಟ್ರೀಯ ರೈತರ ಆಯೋಗ ರೈತರಿಗೆ ಉತ್ಪಾದನಾ ವೆಚ್ಚ (ಸಿ2) + ಹೆಚ್ಚುವರಿ 50% ಕ್ಕೆ ಸಮನಾದ ಕನಿಷ್ಟ ಬೆಂಬಲ ಬೆಲೆಯನ್ನು ಕೊಡಬೇಕು ಎಂದು ಶಿಫಾರಸು ಮಾಡಿತ್ತು. ಅಲ್ಲದೆ ಅಚ್ಛೇ ದಿನ್‌ಗಳಲ್ಲಿ ಇದನ್ನು ತಾನು ಕೊಡುವುದಾಗಿ ಈಗ ಪ್ರಧಾನ ಮಂತ್ರಿಗಳಾಗಿರುವವರು 2014ರ ಲೋಕಸಭಾ ಚುನಾವಣಾ ಪ್ರಚಾರದ ವೇಳೆಯಲ್ಲಿ ಬಾರಿ ಬಾರಿಗೂ ಸಾರುತ್ತಿದ್ದರು.


ಸರಿ, ಸುಭೋದ್ ವರ್ಮರವರು ಈ ಅಂದಾಜಿಎ ಹೇಗೆ ಬಂದರು? ಇದಕ್ಕೆ ಅವರು ತಮ್ಮ ಲೇಖನದಲ್ಲಿ ಗೋದಿಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಕೊಟ್ಟಿರುವ ಇತ್ತೀಚಿನ ವರದಿಯ ಪ್ರಕಾರ ಗೋದಿಯು ಉತ್ಪಾದನಾ ವೆಚ್ಚ ಕ್ವಿಂಟಾಲಿಗೆ ರೂ.1256. ಅಂದರೆ ರೈತರಿಗೆ ಆಶ್ವಾಸನೆಯ ಪ್ರಕಾರ ಕನಿಷ್ಟ ರೂ. 1844 ಕ್ವಿಂಟಾಲಿಗೆ ಸಿಗಬೇಕು. ಆದರೆ ಸರಕಾರ ಘೋಷಿಸಿರುವ ಕನಿಷ್ಟ ಬೆಂಬಲ ಬೆಲೆ 1735 ರೂ. ಅಂದರೆ ಕ್ವಿಂಟಾಲಿನಲ್ಲಿ ರೂ. 149 ರೈತನಿಗೆ ನಷ್ಟ.

ಕೃಷಿ ಇಲಾಖೆ ಪ್ರಕಟಿಸಿರುವ ಎರಡನೇ ಮುಂಗಡ ಅಂದಾಜಿನ ಪ್ರಕಾರ 2017–18ರಲ್ಲಿ ಗೋದಿಯ ಒಟ್ಟು ಉತ್ಪಾದನೆ 9.711 ಕೋಟಿ ಟನ್.ಹೀಗೆ ಬೆಳೆದ ಎಲ್ಲ ಧಾನ್ಯ ಮಾರುಕಟ್ಟೆಗೆ ಬರುವುದಿಲ್ಲ, ಸ್ವಲ್ಪ ಹಾಳಾಗುತ್ತದ, ರೈತರು ಸವಂತ ಬಳಕೆಗೆ ಸ್ವಲ್ಪ ಭಾಗವನ್ನು ಇಟ್ಟುಕೊಳ್ಳುತ್ತಾರೆ. 70% ಮಾರುಕಟ್ಟೆಗೆ ಬರುತ್ತದೆ ಎಂಬುದು ಅಂದಾಜು. ಅಂದರೆ ಸುಮಾರು 7 ಕೋಟಿ ಟನ್ ಗೋಧಿ ಮಾರುಕಟ್ಟೆಗೆ ಬರುತ್ತದೆ. ಅಂದರೆ ಕ್ವಿಂಟಾಲಿನಲ್ಲಿ 149 ರೂ. ನಷ್ಟದಪ್ರಕಾರ ಭಾರತದ ರೈತರು ಬೆಳೆದ ಒಟ್ಟು 7 ಕೋಟಿ ಟನ್ ಗೋಧಿ ಬೆಳೆಯಲ್ಲಿ ಅವರಿಗೆ ಆಗಿರುವ ಒಟ್ಟು ನಷ್ಟ ರೂ.10,000 ಕೋಟಿ

ಇದೇ ರೀತಿ ಅವರು ಇತರ ಐದು ಬೆಳೆಗಳಿಗೂ ಲೆಕ್ಕ ಹಾಕಿದ್ದಾರೆ.

ಇದು ಕನಿಷ್ಟ ಲೆಕ್ಕಾಚಾರ ಎಂಬುದನ್ನೂ ಗಮನಿಸಬೇಕು. ಏಕೆಂದರೆ ಸಾವಿರಾರು ರೈತರಿಗೆ ಘೋಷಿತ ಕನಿಷ್ಟ ಬೆಂಬಲ ಬೆಲೆಗಳೂ ಸಿಗುವುದಿಲ್ಲ.

ಈ ರೀತಿ ಸರಕಾರವೇ ರೈತರ ಲೂಟಿಗೆ ಅವಕಾಶ ಮಾಡಿಕೊಡುತ್ತಿರುವಾಗ 2022ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಇನ್ನೊಂದು ವಚನವೂ 'ಚುನಾವಣಾ ಬೊಗಳೆ'ಗಳ ಪಟ್ಟಿಗೆ ಸೇರಿದರೆ ಆಶ್ಚರ್ಯವಿಲ್ಲ ಎನುತ್ತಾರೆ ಪರಿಣಿತರು. ಆದರೂ ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲೂ ಇಂತಹ 'ಜುಮ್ಲಾ' ಆಶ್ವಾಸನೆಗಳಿಗೆ ಬರವೇನೂ ಇಲ್ಲ.



ಇನ್ನೊಂದು ಅಚ್ಛೇ ದಿನ್ ಪ್ರಹಸನ

ಸಾಮೂಹಿಕ ಸಹಭೋಜನ ಎಂಬುದು ಜಾತಿಭೇದ ನಿರ್ಮೂಲನದ ಒಂದು ದಾರಿ ಎಂದು ಪರಿಗಣಿಸಲಾಗಿತ್ತು. ಅದರ ಇನ್ನೊಂದು ರೂಪ ಅಸ್ಪೃಶ್ಯರೆನಿಸಿದವರ ಮನೆಯಲ್ಲೇ ಮೇಲ್ಜಾತಿಯವರೆನಿಸಿ ಕೊಂಡವರು ಊಟ ಮಾಡುವುದು. ರಾಜಕೀಯದಲ್ಲಿ ಇಂತಹ ಸಂಕೇತಗಳೆಲ್ಲವೂ ಫ್ಯಾಶನ್‌ಗಳಾಗಿ ಬಿಡುವುದು ಹೊಸದೇನಲ್ಲ. ಆದರೆ ಅಚ್ಛೇ ದಿನ್‌ಗಳು ಅದಕ್ಕೂ ಒಂದು ವಿಶೇಷ ರೂಪ ಕೊಟ್ಟಿವೆ,

ಎಪ್ರಿಲ್ 2 ರಂದು ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವುದರ ವಿರುದ್ಧ ದಲಿತ ಆಕ್ರೋಶ ಭುಗಿಲೆದ್ದ ಸಂದರ್ಭದಲ್ಲಿ ಅದನ್ನು ತಡೆಯಲು ಅಚ್ಛೇ ದಿನ್‌ವಾಲಾ ಮುಖಂಡರಿಗೆ ಹೊಳೆದದ್ದು ಈ ಅಸ್ತ್ರ. ಆದರೆ ಇದೂ ತಮ್ಮಲ್ಲಿನ ಅಪ್ರಾಮಾಣಿಕತೆಯನ್ನು ಬಯಲಿಗೆ ತರ ಬಹುದೆಂದು ಅವರು ನಿರೀಕ್ಷಿಸಿರಲಿಕ್ಕಿಲ್ಲ.

ಇಲ್ಲಿಯೂ ಇದು ಪ್ರಾರಂಭವಾದದ್ದು ಅಚ್ಛೇದಿನ್‌ಗಳ ಹೊಸ ಮಾದರಿ ರಾಜ್ಯವಾದ ಉತ್ತರಪ್ರದೇಶದಿಂದಲೇ. ಅಲ್ಲಿನ ಮಂತ್ರಿಗಳೊಬ್ಬರು ಅಲಿಗಡದಲ್ಲಿ ದಲಿತರ ಮನೆಯಲ್ಲಿ ಹೊರಗಿಂದ ಊಟ ತರಿಸಿ ತಿಂದು 'ಮೇಲಿನವರ' ಆದೇಶವನ್ನು ಪಾಲಿಸಿದರಂತೆ. ಇನ್ನೊಬ್ಬ ಅದೇ ರಾಜ್ಯದ ಶಾಸಕನಂತೂ ತಮ್ಮ ಮುಖಂಡರು ದಲಿತರ ಊಟ ಮಾಡಿದರೆ ಅಂತಹ ದಲಿತರ ಜೀವನ ಪಾವನವಾಗುತ್ತದೆ ಎಂದನಂತೆ.

ವಿಶೇಷವೆಂದರೆ ಇದಕ್ಕೆ ಅತ್ಯಂತ ತೀವ್ರ ಟೀಕೆ ಬಂದದ್ದು ಅಚ್ಛೇದಿನ್‌ವಾಲಾ ದಲಿತ ಶಾಸಕ /ಎಂಪಿಗಳಿಂದಲೇ. ಒಬ್ಬರು ದಲಿತ ಎಂಪಿ ತಮ್ಮ ಮುಖಂಡರು ದಲಿತರ ಮನೆಯಲ್ಲಿ ಊಟ ಮಾಡಿದರೂ ಅವರನ್ನು 'ಮಾನವರು' ಎಂದು ಪರಿಗಣಿಸುವುದಿಲ್ಲ ಎಂದು ಟೀಕಿಸಿದರು. ಇರಬಹುದು. ಅವರು ಈ ಮುಖಂಡರನ್ನು ಬಹಳ ಹತ್ತಿರದಿಂದ ಕಂಡವರು ತಾನೇ?ಇವೆಲ್ಲ ಬೊಗಳೆ, ಕೇವಲ ಫೋಟೋ ತೆಗೆಸಿಕೊಂಡು ಸೋಶಿಯಲ್ ಮೀಡಿಯಾಗಳಲ್ಲಿ ಶೇರ್ ಮಾಡಲು ಎಂದಿದ್ದಾರೆ ಅವರು.


ವಾಯವ್ಯ ದಿಲ್ಲಿಯ ದಲಿತ ಎಂಪಿಯಂತೂ ತಮ್ಮ ಮುಖಂಡರು ದಲಿತರ ಮನೆಗೆ ಊಟಕ್ಕೆ ಹೋಗುತ್ತಿರುವುದು ಅವರು ನೀಚ ಜಾತಿಯವರು, ತಾವು ಉಚ್ಛರೆಂದು ನೆನಪಿಸಲಿಕ್ಕಾಗಿಯೇ ಎಂದು ಕೆಂಡ ಕಾರಿದರು.

ದಲಿತರಿಗೆ ಇಂತಹ ಪ್ರದರ್ಶನಗಳು ಬೇಕಿಲ್ಲ, ಅವರಿಗೆ ಶಿಕ್ಷಣ ಬೇಕು, ಉದ್ಯೋಗ ಬೇಕು, ಸಮಾನ ವರ್ತನೆ ಬೇಕು. ಕಳೆದ ನಾಲ್ಕು ವರ್ಷಗಳಲ್ಲಿ 30 ಕೋಟಿ ದಲಿತರಿಗೆ ತಮ್ಮ ಸರಕಾರ ಏನೂ ಮಾಡಲಿಲ್ಲ ಎಂದು ಇನ್ನೊಬ್ಬ ದಲಿತ ಎಂಪಿ ಟೀಕೆ ಮಾಡಿರುವುದಾಗಿ ವರದಿಯಾಗಿದೆ.

ಬಹುಶಃ ಏನೂ ಮಾಡಲಿಲ್ಲ ಎಂದರೆ ತಪ್ಪಾಗುತ್ತದೆ, ಬಹಳಷ್ಟು 'ಮಾಡಿ'ದ್ದಾರೆ ಎನ್ನುತ್ತಾರೆ ಈ ಅಚ್ಛೇ ದಿನ್ ಕ್ಯಾಂಪಿನ ಹೊರಗಿರುವವರು.

* ದೌರ್ಜನ್ಯ ತಡೆ ಕಾಯ್ದೆಯ ಸುಪ್ರಿಂ ಕೋರ್ಟ್ ತೀರ್ಪು ಬಂದದ್ದು ಇದರ ದುರುಪಯೋಗವಾಗುತ್ತಿದೆ ಎಂಬ ಇವರದೇ ಸರಕಾರದ ಒಂದು ಮಾಹಿತಿಯಿಂದ ತಾನೇ!
* ಯುಜಿಸಿಯ ಇತ್ತೀಚಿನ ಅಧಿಸೂಚನೆಯನ್ನು ವಿವಿಗಳು ಜಾರಿ ಮಾಡಿದರೆ ಪ್ರಾಧ್ಯಾಪಕ ಹುದ್ದೆಗಳಲ್ಲಿ ಎಸ್‌ಸಿ ಮತ್ತು ಎಸ್‌ಟಿ ಮೀಸಲು ಹುದ್ದೆಗಳ ಪ್ರಮಾಣ ಅನುಕ್ರಮವಾಗಿ 50% ಮತ್ತು 80% ದಷ್ಟು ಕಡಿಮೆಯಾಗುತ್ತದೆ. ಹೀಗೆ ದೊಡ್ಡ ಪಟ್ಟಿಯನ್ನೇ ಕೊಡಬಹುದು.

ಇಂತಹ ಕೆಲಸಗಳಿಂದಾಗಿ ತಾನೇ ಏಳು ದಶಕಗಳ ನಂತರವೂ ಈ ಎಲ್ಲ ಪ್ರದರ್ಶನಗಳ ಅಗತ್ಯ ಬಿದ್ದಿರುವುದು ಎಂದು ಇನ್ನೊಬ್ಬ ವೀಕ್ಷಕರು ಕೇಳುತ್ತಾರೆ.



ವ್ಯಂಗ್ಯಚಿತ್ರ: ಹೇಮಂತ್ ಮೋರ್ಪರಿಯ

ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ಭಾರತೀಯರ ಪ್ರಮಾಣ ಭಾರತದಲ್ಲಿ 81%

ವಿಶ್ವಸಂಸ್ಥೆಯ ಅಂಗ ಸಂಘಟನೆಯಾದ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ, ಐಎಲ್‌ಒ ಪ್ರಕಾರ ಭಾರತದಲ್ಲಿ ದುಡಿಯುತ್ತಿರುವವರಲ್ಲಿ 80.9% ಅನೌಪಚಾರಿಕ ವಲಯದಲ್ಲಿ, ಅಂದರೆ ಯಾವುದೇ ಕಾರ್ಮಿಕ ಕಲ್ಯಾಣ ಕಾನೂನುಗಳನ್ನು ಸಾಮಾನ್ಯವಾಗಿ ಅನ್ವಯ ಮಾಡದಿರುವ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರಲ್ಲಿ ಇದು ತುಸು ಹೆಚ್ಚು, 81.6%, ಪುರುಷರಲ್ಲಿ 80.67%

ಈ ಅಂಕಿ–ಅಂಶಗಳು ಒಂದು ದೇಶ ತನ್ನ ದುಡಿಮೆಗಾರರನ್ನು ಹೇಗೆ ದುಡಿಸಿಕೊಳ್ಳುತ್ತದೆ ಎಂಬುದನ್ನು ಸೂಚಿಸುತ್ತವೆ. ನೆರೆಯ ದೇಶಗಳು ಈ ದೃಷ್ಟಿಯಲ್ಲಿ 'ಮೇರಾ ದೇಶ್ ಮಹಾನ್'ಗಿಂತ ಉತ್ತಮ ಸ್ಥಿತಿಯಲ್ಲಿವೆ ಎಂಬುದನ್ನೂ ಗಮನಿಸಬೇಕು. ಬಾಂಗ್ಲಾದೇಶದಲ್ಲಿ 48.9%, ಶ್ರೀಲಂಕಾದಲ್ಲಿ 60.6% , ಪಾಕಿಸ್ತಾನದಲ್ಲಿ 77.6% ದುಡಿಮೆಗಾರರು ಅನೌಪಚಾರಿಕ ವಲಯದಲಿ ದುಡಿಯುತ್ತಿದ್ದಾರೆ. ನೇಪಾಳದಲ್ಲಿ ಮಾತ್ರವೇ ಸುಮಾರು ನಮ್ಮಷ್ಟೇ ಪ್ರಮಾಣದಲ್ಲಿ ಅನೌಪಚಾರಿಕ ವಲಯದಲ್ಲಿದ್ದಾರೆ.


ಆರ್ಥಿಕದಲ್ಲಿ ಅನೌಪಚಾರಿಕ ವಲಯದ ಅಸ್ತಿತ್ವ ನಿರುದ್ಯೋಗದಂತೆ ಬಂಡವಾಳಶಾಹಿ ಶೋಷಣೆಯ ಒಂದು ಸಂಕೇತವೂ ಹೌದು. ಆದ್ದರಿಂದ ಅನೌಪಚಾರಿಕ ವಲಯ ಮುಂದುವರೆದ ದೇಶಗಳಲ್ಲೂ ಇದೆ. ಆದರೆ ಅನೌಪಚಾರಿಕತೆಗೂ ಆರ್ಥಿಕ ಅಭಿವೃದ್ಧಿ ಮಟ್ಟಕ್ಕೂ ನೇರ ಸಂಬಂಧವಿದೆ. ಆರ್ಥಿಕವಾಗಿ ಮುಂದುವರೆದ ದೇಶಗಳಲ್ಲಿ ಸರಾಸರಿ 18.3% ಮಾತ್ರ ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿದ್ದಾರೆ. ಅಲ್ಲಿನ ಗರಿಷ್ಟ ಮಟ್ಟ 40% ಕ್ಕಿಂತಲೂ ಕಡಿಮೆಯಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸರಾಸರಿ 69.6% ಅನೌಪಚಾರಿಕ ವಲಯದಲ್ಲಿ ದುಡಿಯಬೇಕಾಗಿದೆ.

ಅಂದರೆ ಭಾರತವನ್ನು 'ಮಹಾನ್' ಮಾಡಬೇಕಾದರೆ ಕೇವಲ ಅದು ಜಿಡಿಪಿ ಹೆಚ್ಚಳ ದರವನ್ನು ಹೆಚ್ಚಿಸುವುದರಿಂದಲ್ಲ, ಬದಲಿಗೆ ಅನೌಪಚಾರಿಕ ವಲಯದ ಪ್ರಮಾಣವನ್ನು ಇಳಿಸುವುದರಿಂದ ಆಗಬೇಕು. ಆದರ ಅಚ್ಛೇ ದಿನ್‌ಗಳ ಅಜೆಂಡಾದಲ್ಲಿರುವುದು ಜಿಡಿಪಿ ಹೆಚ್ಚಳ ಮಾತ್ರ, ಅನೌಪಚಾರಿಕ ವಲಯದ ಇಳಿಕೆಯ ಯೋಚನೆಯೂ ಅದರಲ್ಲಿಲ್ಲ. ನಿಗದಿತ ಅವಧಿಯ ಉದ್ಯೋಗ'ವನ್ನು ಜಾರಿಗೊಳಿಸುವ ಮೂಲಕ ಅನೌಪಚಾರಿಕ ವಲಯವನ್ನು ಮತ್ತಷ್ಟು ವಿಸ್ತರಿಸುವ ಪ್ರಯತ್ನವೇ ನಡೆದಿದೆ. ಪಕೋಡಾ ಮತ್ತು ಪಾನ್–ಬೀಡಿ ಬಗ್ಗೆಯಂತೂ ಹೇಳಲೇ ಬೇಕಾಗಿಲ್ಲ.

ಪ್ರಧಾನಿಗಳ ವಿದೇಶ ಪ್ರವಾಸಗಳ ಮಾಹಿತಿ ಗೋಪನೀಯವಲ್ಲ– ಕೇಂದ್ರ ಮಾಹಿತಿ ಆಯೋಗ

ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕೇಳಿರುವ ಪ್ರಧಾನಿಗಳ ವಿದೇಶ ಪ್ರವಾಸಗಳ ವೆಚ್ಚಗಳೂ ಸೇರಿದಂತೆ ಪೂರ್ಣ ದಾಖಲೆಗಳನ್ನು ಅರ್ಜಿದಾರರಿಗೆ ಕೊಡಬೇಕು, ಏಕೆಂದರೆ ಇವು ಸಾರ್ವಜನಿಕ ಖಜಾನೆಯಿಂದ ಖರ್ಚು ಮಾಡಿದವುಗಳು, ಎಂದು ಕೇಂದ್ರ ಮಾಹಿತಿ ಆಯೋಗ ಏರ್ ಇಂಡಿಯಾಕ್ಕೆ ನಿರ್ದೇಶನ ನೀಡಿದೆ ಎಂದು ವರದಿಯಾಗಿದೆ(ಇಂಡಿಯನ್ ಎಕ್ಸ್‌ಪ್ರೆಸ್, ಮೇ9). ಇವು ವಾಣಿಜ್ಯ ಗೋಪನೀಯತೆಯ ವಿಷಯ ಎಂದು ಏರ್ ಇಂಡಿಯಾ ಮಾಹಿತಿ ನೀಡಲು ನಿರಾಕರಿಸಿತ್ತು.

ಡಿಸೆಂಬರ್ 2016 ರಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಏರ್ ಇಂಡಿಯಾಕ್ಕೆ ಕಳಿಸಿದ್ದ ಇ–ಮೇಲ್‌ನಲ್ಲಿ ಪ್ರಧಾನಿಗಳ ವಿಮಾನ ಪ್ರಯಾಣಗಳ ಮಾಹಿತಿಗಳಲ್ಲಿ ಕೆಲವು ಭದ್ರತೆಯ ಪ್ರಶ್ನೆಗಳು ಇರಬಹುದಾದ್ದರಿಂದ ಅವನ್ನು ಪ್ರಕಟ ಪಡಿಸಬೇಕಾಗಿಲ್ಲೆಂದು ತಿಳಿಸಿತ್ತು ಎಂದೂ ಈ ವರದಿ ಹೇಳಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಕೌಶಲ ಅಭಿವೃದ್ಧಿ ಎಂಬ ಸರ್ಕಸ್

ಕೌಶಲ ಅಭಿವೃದ್ಧಿ ಎಂಬುದು ಭಾರೀ ಪ್ರಚಾರ ಪಡೆದ ಪ್ರಧಾನಿಗಳ ಒಂದು ಪ್ರಿಯ ಕಾರ್ಯಕ್ರಮ. ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನಾ(ಪಿಎಂಕೆವಿವೈ) ಎಂಬ ಈ ಕಾರ್ಯಕ್ರಮಕ್ಕೆ 12,000 ಕೋಟಿ ರೂ. ನೀಡಲಾಗಿದೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ 41.3 ಲಕ್ಷ ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆಯೆಂದು ಹೇಳಿಕೊಂಡರೂ, ರಾಜ್ಯಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿರುವ ಒಂದು ಉತ್ತರದ ಪ್ರಕಾರ ಇವರಲ್ಲಿ ಕೆಲಸ ಸಿಕ್ಕಿರುವುದು 6.15 ಲಕ್ಷ ಮಂದಿಗೆ ಮಾತ್ರ. ಅಂದರೆ ಕೇವಲ 15% ಮಂದಿಗೆ.

ಒಂದು ಉತ್ತಮ ಜೀವನಾಧಾರಕ್ಕಾಗಿ ಉದ್ದಿಮೆಗಳಿಗೆ ಪ್ರಸುತವಾದ ತರಬೇತಿ ಕೊಡುವುದು ಇದರ ಘೋಷಿತ ಉದ್ದೇಶ. 2016ರಲ್ಲಿ ಕಾರ್ಯಾರಂಭ ಮಾಡಿದ ಈ ಯೋಜನೆ ಕುಂಟುತ್ತಲೇ ಸಾಗಿದೆ. ಕಾರಣ ಇದರ ಪರಿಕಲ್ಪನೆಯಲ್ಲೇ ದೋಷಗಳಿದ್ದವು ಎನ್ನುತ್ತಾರೆ ಪರಿಣಿತರು (ನ್ಯೂಸ್‌ಕ್ಲಿಕ್, ಮೇ7).

ಕೌಶಲ ಅಭಿವೃದ್ಧಿ ಮಾಡಿದರೆ ಕೌಶಲ ಕೆಲಸಕ್ಕೆ ಬರುವುದು ನಿಜವಾಗಿಯೂ ಉದ್ಯೋಗ ಇದ್ದಾಗ ಮಾತ್ರ. ಉದ್ಯೋಗವೇ ಇಲ್ಲದಾಗ ಕೌಶಲ ತರಬೇತಿ ಯಾರಿಗಾಗಿ?

ಬಹುಶಃ ಪ್ರಧಾನಿಗಳು ಜನಗಳಿಗೆ ಕೌಶಲ ನೀಡಿದರೆ ಅವರೇ ಅಪಾರ ಸ್ವ–ಉದ್ಯೋಗಗಳನ್ನು ನಿರ್ಮಿಸಿಕೊಳ್ಳುತ್ತಾರೆ ಎಂದೂ ನಂಬಿದ್ದಿರಬೇಕು ಎನ್ನುತ್ತಾರೆ ವಿಶ್ಲೇಷಕರು. ಆದರೆ ಅದೂ ನಿಜವಾಗಲಿಲ್ಲ. ತರಬೇತಿ ಪಡೆದವರಲ್ಲಿ ಸ್ವ–ಉದ್ಯೋಗ ಆರಂಭಿಸಲು ಸಾಧ್ಯವಾದದ್ದು 24% ಮಂದಿಗೆ ಮಾತ್ರ.

'ದುಡಿಮೆಗೆ ಅರ್ಹರಾದವರು' ಸಿಗುತ್ತಿಲ್ಲ ಎಂಬ ತಮ್ಮ ಕಾರ್ಪೊರೇಟ್ ಮಿತ್ರರ ರಾಗಕ್ಕೆ ಮಾರು ಹೋಗಿ, ವಾಸ್ತವವಾಗಿ ಅವರು ತಮ್ಮ ಗರಿಷ್ಟ ಲಾಭಗಳಿಗಾಗಿ 'ಅರ್ಹ'ರಿಗೆ ಸರಿಯಾದ ಸಂಬಳ ಕೊಡದಿರುವುದೇ ನಿಜವಾದ ಕಾರಣವಿರಬಹುದು ಎಂಬುದು ಪ್ರಧಾನಿಗಳ ಅಥವ ಅವರ ಸಲಹೆಗಾರರ ಅರಿವಿಗೆ ಬರದೇ ಹೋಗಿರುವುದೂ ಈ ಕಾರ್ಯಕ್ರಮದ ಭಾರೀ ವಿಫಲತೆಗೆ ಕಾರಣವಿರಬಹುದು ಎಂದೂ ಪರಿಣಿತರು ಭಾವಿಸುತ್ತಾರೆ.



ಸೇವಾ ವಲಯದ ಮೂಲಕ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ನಿಜವಾಗಿಯೂ ಸಾಧ್ಯವೇ?

ಕೃಷಿ ವಲಯ, ಕೈಗಾರಿಕಾ ವಲಯ ಮತ್ತು ಸೇವಾ ವಲಯಜಾಧುನಿಕ ಆರ್ಥಿಕ ವ್ಯವಸ್ಥೆಯ ಮುಖ್ಯ ಅಂಗಗಳು ಮತ್ತು ಶ್ರೇಣಿಗಳು. ಪ್ರಾಥಮಿಕ ವಲಯವಾದ ಕೃಷಿ ಮತ್ತು ಎರಡನೇ ವಲಯವಾದ ಕೈಗಾರಿಕೆ ಇವನ್ನು ನಿರ್ಲಕ್ಷಿಸಿ ಸೇವಾ ವಲಯವನ್ನೇ ಅವಲಂಬಿಸಿದ ಬೆಳವಣಿಗೆ ತಾಳಿಕೆ ಇರುವ ನಿಜವಾದ ಬೆಳವಣಿಗೆ ಆಗಲಾರದು ಎಂಬುದು ಸರಿಯಲ್ಲ, ಕೇವಲ ಸೇವಾ ವಲಯವನ್ನೇ ಅವಲಂಭಿಸಿದ ಬೆಳವಣಿಗೆ ಸಾಧ್ಯ ಎಂಬ ಅಂತಾರ್ರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ಯ ಅಭಿಪ್ರಾಯವನ್ನು ನಮ್ಮ ಆಳರಸರು ಶಿರಸಾವಹಿಸಿಅದ್ದಾರೆ. ಆದರೆ ಈ ಅಭಿಪ್ರಾಯ ಅಸಮಾನತೆಗಳನ್ನು ಹೆಚ್ಚಿಸುವ ನಮ್ಮ ಕಾಲದ ಬಂಡವಾಳಶಾಹಿಯ ಸ್ವಭಾವವನ್ನು ಮರೆಮಾಚುವಂತದ್ದು ಎನ್ನುತ್ತಾರೆ.



ಪ್ರೊ.ಸಿ.ಪಿ.ಚಂದ್ರ ಶೇಖರ್. ಫ್ರಂಟ್‌ಲೈನ್ ಪತ್ರಿಕೆಯಲ್ಲಿ ಪ್ರಕಟವಾದ ಅವರ ಲೇಖನ Services for growth? ದಲ್ಲಿ 'ಜನಶಕ್ತಿ' ಓದುಗರಿಗಾಗಿ ಇದರ

ಭಾವಾನುವಾದ: ಕೆ.ಎಂ. ನಾಗರಾಜ್

ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಪೂರ್ಣ ಕೈಗಾರೀಕರಣವನ್ನು ಕಡೆಗಣಿಸಿ ಸೇವೆಗಳನ್ನು ಅವಲಂಬಿಸುವುದು ತಪ್ಪಲ್ಲ ಎಂಬುದಾಗಿ ಐಎಂಎಫ್ ಹೇಳುತ್ತಿದೆ. ಜಾಗತಿಕ ಆರ್ಥಿಕ ಮುನ್ನೋಟ ಕುರಿತ ತನ್ನ 2018 ಎಪ್ರಿಲ್ ಆವೃತ್ತಿಯಲ್ಲಿ ಅದು ಇತ್ತೀಚಿನ ವರ್ಷಗಳಲ್ಲಿ ಭಾರತ ಸಾಗಿದ ದಿಕ್ಪಥವನ್ನು ಅನುಮೋದಿಸಿದೆ. ಆರ್ಥಿಕ ಬೆಳವಣಿಗೆ ಏರುತ್ತಿದ್ದ ಹೊತ್ತಿನಲ್ಲಿ ಒಟ್ಟು ಉತ್ಪತ್ತಿಯಲ್ಲಿ ಕೃಷಿಯ ಪಾಲಿನ ಇಳಿಕೆ, ಉದ್ಯೋಗಗಳ ಇಳಿಕೆ ಮತ್ತು ಸೇವೆಗಳ ಮೇಲೆ ಅವಲಂಬಿಸಿದ ಬೆಳವಣಿಗೆ, ಇಂತಹ ಅಸಾಧಾರಣ ಬದಲಾವಣೆಗಳು ಈ ದಿಕ್ಪಥದ ಲಕ್ಷಣವಾಗಿದ್ದವು. ಕಡಿಮೆ ತಲಾ ವರಮಾನ ಇದ್ದ ಪರಿಸ್ಥಿತಿಯಲ್ಲೂ, ಪರಂಪರಾನುಗತವಾಗಿ, ತಯಾರಿಕೆಯನ್ನೇ ಮುಂದೆ ಮಾಡಿ ಸಾಗುತ್ತಿದ್ದ ಕ್ರಮಕ್ಕೆ ಇದು ತದ್ವಿರುದ್ಧವಾಗಿದೆ. ಹಾಗಾಗಿ, ಭಾರತ ತೊಡಗಿರುವ ಇಂತಹ ಪ್ರಕ್ರಿಯೆಯಲ್ಲಿ, ತಯಾರಿಕೆಗಳಿಗೆ ಬದಲಾಗಿ ಸೇವೆಗಳು ದೇಶವನ್ನು ಕೆಳ ಮಟ್ಟದ ವರಮಾನದ ಹಂತದಿಂದ ಮಧ್ಯಮ ಮತ್ತು ಉನ್ನತ ವರಮಾನಗಳ ಸ್ಥಿತಿಗೆ ಕೊಂಡೊಯ್ಯಬೇಕಾಗುತ್ತದೆ.

ಭಾರತಕ್ಕೆ ಇದರ ಮಹತ್ವ

ಭಾರತ ಅನುಸರಿಸಿದ ಇಂತಹ ಒಂದು ಕ್ರಮವನ್ನು ಐಎಂಎಫ್ ಅನುಮೋದಿಸಿರುವುದು ದೇಶಕ್ಕೆ ಮಹತ್ವಪೂರ್ಣವಾಗಿದೆ. ಏಕೆಂದರೆ, ದೇಶ ಈ ವರೆಗೆ ಸಾಗಿದ ದಿಕ್ಪಥವು ಗುರಿ ತಲುಪುವಲ್ಲಿ ಸೋತಿದೆ ಎಂದು ಭಾವಿಸಲಾಗಿದೆ. 1960ರಲ್ಲಿ, ಒಟ್ಟು ಜಿಡಿಪಿಯಲ್ಲಿ ಕೈಗಾರಿಕೆಗಳ ಕೊಡುಗೆಯು ಬ್ರೆಜಿಲ್‌ನಲ್ಲಿ 37%, ಚೀನಾದಲ್ಲಿ ಸುಮಾರು 45%, ದಕ್ಷಿಣ ಕೊರಿಯಾದಲ್ಲಿ 25% ಇದ್ದಾಗ, ಭಾರತ, ಇಂಡೋನೇಷಿಯಾ, ಮಲೇಷಿಯಾ ಮತ್ತು ಥೈಲೆಂಡ್ ದೇಶಗಳಲ್ಲಿ 19% ಇತ್ತು. ಇದೇ ಅಂಕಿಗಳು 1985ರ ಹೊತ್ತಿಗೆ, ಬ್ರೆಜಿಲ್‌ನಲ್ಲಿ 45%, ಚೀನಾದಲ್ಲಿ ಸುಮಾರು 43%, ದಕ್ಷಿಣ ಕೊರಿಯಾದಲ್ಲಿ 39%, ಇಂಡೋನೇಷಿಯಾ 36%, ಮಲೇಷಿಯಾ 39%, ಥೈಲೆಂಡ್ 32% ಮತ್ತು ಭಾರತದಲ್ಲಿ 26% ಇತ್ತು. ಹಾಗಾಗಿ, ಭಾರತದ ಒಟ್ಟು ಉತ್ಪತ್ತಿಯಲ್ಲಿ ತಯಾರಿಕಾ ವಲಯದ ಕೊಡುಗೆಯು ಸತತವಾಗಿ ಕೆಳ ಮಟ್ಟದಲ್ಲಿಯೇ ಉಳಿದದ್ದು ಮತ್ತು ದೇಶವು ಕೃಷಿಯಿಂದ ದೂರ ಸರಿಯುತ್ತಿದ್ದಂತೆಯೇ ಸೇವಾ ವಲಯದಲ್ಲಿ ಬೆಳವಣಿಗೆ ಕ್ಷಿಪ್ರವಾಗಿದ್ದುದನ್ನು ವಿಕಾಸದ ದೃಷ್ಟಿಯಿಂದ ನೋಡಿದಾಗ, ಅದು ಒಂದು ದೊಡ್ಡ ಕೊರತೆಯಾಗಿ ಕಾಣುತ್ತದೆ.

ಐಎಂಎಫ್ ಹೇಳುವ ಸಂಗತಿ ಏನೆಂದರೆ, ಅಭಿವೃದ್ಧಿಯು ಸೇವೆಗಳ ಮೇಲೆ ಅವಲಂಬಿಸಿದ್ದಾಗಲೂ, ಅದು, ಒಟ್ಟಾರೆಯಾಗಿ, ಉತ್ಪಾದಕತೆ ಏರುವಂತೆ ಮಾಡುವುದರಿಂದ ಒಟ್ಟು ಉತ್ಪತ್ತಿಯಲ್ಲಿ ಹೆಚ್ಚಳವಾಗುತ್ತದೆ ಮತ್ತು ತಯಾರಿಕಾ ವಲಯದಲ್ಲಿಯೂ ಉದ್ಯೋಗಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹಾಗಾಗಿ, ಸೇವಾ ವಲಯ ಪ್ರೇರಿತ ಅಭಿವೃದ್ಧಿಯ ಮೂಲಕವೂ ತಲಾ ವರಮಾನಗಳು ಏರುತ್ತವೆ.

ಭಾರತದ ಬೆಳವಣಿಗೆ ಕುರಿತು ತನ್ನ ದೃಷ್ಟಿಕೋನದ ಸಮರ್ಥನೆಯಾಗಿ ಐಎಂಎಫ್ ಅನೇಕ ಕಾರಣಗಳನ್ನು ಕೊಟ್ಟಿದೆ. ಅನೇಕ ದೇಶಗಳಲ್ಲಿ, ತಯಾರಿಕಾ ವಲಯದ ಒಟ್ಟು ಉತ್ಪತ್ತಿಯ ಬೆಳವಣಿಗೆಯು, ಉದ್ಯೋಗಗಳ ಬೆಳವಣಿಗೆಗಿಂತ ಮಿಗಿಲಾಗಿತ್ತು. ಆದರೆ, ಜಾಗತಿಕವಾಗಿ, ಉತ್ಪತ್ತಿ ಮತ್ತು ಉದ್ಯೋಗಗಳು ಸರಿಸುಮಾರು ಸಮನಾಗಿಯೇ ಬೆಳೆದಿವೆ. ಇಂತಹ ಭಿನ್ನ ರೂಪದ ಪರಿಸ್ಥಿತಿಗೆ, ಕೈಗಾರಿಕಾ ಉತ್ಪಾದನೆಯನ್ನು ಕಡಿಮೆ-ಕೂಲಿ ಇರುವ ಮತ್ತು ಪ್ರತಿ ಕೆಲಸಗಾರನ ಉತ್ಪಾದಕತೆ ಕೆಳ ಮಟ್ಟದಲ್ಲಿರುವ ದೇಶಗಳಿಗೆ ಸ್ಥಳಾಂತರಿಸಿದ್ದುದು ಕಾರಣವಾಗಿದೆ. ಉತ್ಪಾದನಾ ವೆಚ್ಚಗಳಲ್ಲಿ ಇಳಿಕೆ, ಸ್ಪರ್ಧಾತ್ಮಕ ಬೆಲೆಗಳಲ್ಲಿ ಸರಕುಗಳನ್ನು ಜಾಗತಿಕ ಮಾರುಕಟ್ಟೆಗೆ ಒದಗಿಸುವುದು ಮುಂತಾದ ಕಾರಣಗಳಿಂದಾಗಿ, ತಯಾರಿಕಾ ಘಟಕಗಳನ್ನು ಭೌಗೋಳಿಕವಾಗಿ ಸ್ಥಳಾಂತರಿಸಲಾಗಿತ್ತು.

ಇದೆಲ್ಲದರ ಸೂಚ್ಯಾರ್ಥ ಏನೆಂದರೆ, ಯಾವುದೇ ಕಾರಣದಿಂದಾದರೂ ಸರಿಯೇ, ಅಭಿವೃದ್ಧಿಶೀಲ ದೇಶಗಳಲ್ಲಿ ಉಪಯೋಗೀ ಸೇವೆಗಳು ಹೊರಹೊಮ್ಮುವುದು ಮತ್ತು ಅವುಗಳ ಹೆಚ್ಚಳವನ್ನು ಕ್ಷಿಪ್ರ ಬೆಳವಣಿಗೆಗೆ ಮತ್ತು ಆರ್ಥಿಕ ಸಧೃಢರನ್ನು ಸಮೀಪಿಸಲು ಸಹಾಯವಾಗುತ್ತವೆ. ಎಲ್ಲವೂ ಹೀಗೆಯೇ ಅಂದುಕೊಂಡ ರೀತಿಯಲ್ಲಿಯೇ ಜರುಗಿದರೆ, ಉತ್ಪಾದಕತೆ ಮತ್ತು ತಲಾ ವರಮಾನಗಳನ್ನು ಹೆಚ್ಚಿಸುವ ಸಲುವಾಗಿ ಸೇವೆಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ತಯಾರಿಕೆಗಳಿಗೆ ಕೊಡುವ ಅಗತ್ಯವಿಲ್ಲ ಎಂಬುದು.

ಈಗಾಗಲೇ, ಕೆಲವು ಸೇವೆಗಳ ಉತ್ಪಾದಕತೆಯ ಮಟ್ಟ ಮತ್ತು ಬೆಳವಣಿಗೆಗಳು, ಒಟ್ಟಾರೆಯಾಗಿ, ತಯಾರಿಕಾ ಕ್ಷೇತ್ರಕ್ಕಿಂತಲೂ ಉನ್ನತವಾಗಿರುವ ಪರಿಸ್ಥಿತಿ ನಮ್ಮ ಮುಂದಿದೆ. ಚೀನಾ, ಭಾರತ ಮುಂತಾದ ದೇಶಗಳಲ್ಲಿ, ಸೇವಾ ಕ್ಷೇತ್ರದ ಸರಾಸರಿ ಉತ್ಪಾದಕತಾ ಬೆಳವಣಿಗೆಯು ತಯಾರಿಕಾ ಕ್ಷೇತ್ರಕ್ಕಿಂತಲೂ ಅಧಿಕವಾಗಿದೆ. ಹಾಗಿದ್ದರೂ, ಸೇವಾ ವಲಯದ ಉನ್ನತಿ ಮತ್ತು ಉದ್ಯೋಗ ಒದಗಿಸುವ ಮೂಲವಾಗಿರುವ ತಯಾರಿಕಾ ವಲಯದ ಅವನತಿಯು ಇಡೀ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಅಡಚಣೆಯಾಗುವುದಿಲ್ಲ ಎನ್ನುತ್ತದೆ ಐಎಂಎಫ್.

ತಪ್ಪು ಅರ್ಥ ಕಲ್ಪಿಸುವ ಅಂಶ

ಐಎಂಎಫ್‌ನ ಜಾಗತಿಕ ಆರ್ಥಿಕ ಮುನ್ನೋಟ ಹೀಗೆ ಮಕ್ತಾಯವಾಗುತ್ತದೆ: "ಈ ಎಲ್ಲದರಿಂದ ಹೊರಹೊಮ್ಮುವ ಮುಖ್ಯ ಸಂದೇಶವೆಂದರೆ, ಪರಂಪರಾನುಗತವಾಗಿ ಅನುಸರಿಸುತ್ತಿದ್ದ ಕೈಗಾರೀಕರಣದ ಹಂತವನ್ನು ಬಿಟ್ಟು ಮುಂದೆ ಹೋಗುವ ಕ್ರಮವು ಉದಯೋನ್ಮುಖ ಅರ್ಥ ವ್ಯವಸ್ಥೆಗಳ ಪ್ರಗತಿಗೆ ಅಡ್ಡಿಯಾಗದು" ಎಂಬುದು.

ಆದರೆ, ಇಲ್ಲೊಂದು ತಪ್ಪು ಅರ್ಥಕಲ್ಪಿಸುವ ಅಂಶವಿದೆ. ಅದು, ಪರಿಶೀಲನೆಗೆ ಆಯ್ಕೆಮಾಡಿಕೊಂಡಿರುವ 1970ರಿಂದ ಆರಂಭವಾಗುವ ಅವಧಿಗೆ ಸಂಬಂಧಿಸಿದೆ. ಕೈಗಾರಿಕಾ ಘಟಕಗಳ ಸ್ಥಳಾಂತರ ಆರಂಭವಾದದ್ದು ಅದೇ ಸಮಯದಲ್ಲಿ. ಆಗ, ಮುಂದುವರೆದ ಮತ್ತು ಉದಯೋನ್ಮುಖ ದೇಶಗಳ ಆರ್ಥಿಕ ಬೆಳವಣಿಗೆ, ಕೈಗಾರಿಕಾ ಪದ್ಧತಿ, ಉದ್ಯೋಗ ಪರಿಸ್ಥಿತಿ, ತಲಾ ಉತ್ಪಾದಕತೆ, ಹಣದುಬ್ಬರ ಮುಂತಾದ ಅಂಶಗಳು ಸಮಾನವಾಗಿರಲಿಲ್ಲ. ಕೈಗಾರಿಕೆಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಸೇವೆಗಳಿಗೆ ಕೊಡುವಂತೆ ಐಎಂಎಫ್ ಸಮರ್ಥಿಸುವ ಸಂದರ್ಭದಲ್ಲಿ, ತಯಾರಿಕೆ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ, ಜಾಗತಿಕ ಒಲವು-ಪ್ರವೃತ್ತಿಗಳನ್ನು ಬಂಡವಾಳಶಾಹಿ ಚರಿತ್ರೆಯ ಆರಂಭ ಕಾಲದಿಂದ ಗುರುತಿಸಿ ಅದರ ವಿಶ್ಲೇಷಣೆ ಮಾಡಿದ್ದರೆ ಈ ಪ್ರಾಶಸ್ತ್ಯ ಸ್ಪಷ್ಟವಾಗುತ್ತಿತ್ತು.

ಇನ್ನೂ, ಕೈಗಾರೀಕರಣಕ್ಕೆ ಸಮರ್ಪಕವಾಗಿ ಒತ್ತು ಕೊಡುವಲ್ಲಿ ದೇಶ ಸೋತಿರುವ ಪರಿಸ್ಥಿತಿಯಲ್ಲಿ ಮತ್ತು ಇತ್ತೀಚಿನ ವರ್ಷಗಳಲ್ಲಿ ದೇಶದ ಜಿಡಿಪಿಯಲ್ಲಿ ಸೇವೆಗಳ ಪಾಲು ಚುರುಕಾಗಿ ಏರುತ್ತಿರುವ ಪರಿಸ್ಥಿತಿಯಲ್ಲಿ, ಸೇವೆಗಳಿಗೆ ಪ್ರಾಶಸ್ತ್ಯ ಕೊಟ್ಟಿರುವ ಐಎಂಎಫ್‌ನ ಸಮರ್ಥನೆಯು ನಮ್ಮ ದೇಶದ ನೀತಿ ನಿರೂಪಕರ ಕಿವಿಗಳಿಗೆ ಇಂಪಾದ ಸಂಗೀತದಂತಿದೆ. ಅದೇನೇ ಇರಲಿ, ನಮ್ಮ ದೇಶದ ಸೇವಾ ವಲಯವು ಉದ್ಯೋಗಗಳಿಗೆ ನೀಡಿರುವ ಕೊಡುಗೆಯು, ಜಾಗತಿಕ ಸರಾಸರಿಗಿಂತಲೂ ತೀರಾ ಕಡಿಮೆ ಇದೆ. 2013-14ರ ಆರ್ಥಿಕ ಪರಾಮರ್ಶೆಯಲ್ಲಿ ತಿಳಿಸಿರುವ ಅಂಕಿ-ಅಂಶಗಳ ಪ್ರಕಾರ, ಜಾಗತಿಕ ಮಟ್ಟದಲ್ಲಿ, ಒಟ್ಟು ಜಿಡಿಪಿಯಲ್ಲಿ 65.9% ಪಾಲು ಹೊಂದಿರುವ ಸೇವಾ ವಲಯವು 44% ನೌಕರಿ ಒದಗಿಸಿದೆ. ಭಾರತದ ಜಿಡಿಪಿಯಲ್ಲಿ 56.3% ಪಾಲು ಹೊಂದಿರುವ ಸೇವೆಗಳು 28.1% ನೌಕರಿ ಒದಗಿಸಿವೆ. ಇದು ಸೂಚಿಸುವುದು ಏನೆಂದರೆ, ಸರಕು ಉತ್ಪಾದಿಸುವ ವಲಯಗಳ ಪ್ರತೀ ಕೆಲಸಗಾರನ ಮೌಲ್ಯ ವರ್ಧನೆಗೆ ಹೋಲಿಸಿದರೆ, ಸೇವಾ ವಲಯದಲ್ಲಿ ಅದು ಉನ್ನತವಾಗಿದೆ ಮತ್ತು ಉಳಿದ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಅದು ಇನ್ನೂ ಹೆಚ್ಚಿಗೆ ಇದೆ.

ಜಾಗತಿಕ ಸೇವೆಗಳ ಒಟ್ಟು ರಫ್ತಿನಲ್ಲಿ, 1990ರಲ್ಲಿ 0.6% ಪಾಲು ಹೊಂದಿದ್ದ ಭಾರತದ ಸೇವೆಗಳ ರಫ್ತು ಪ್ರಮಾಣವು ಇತ್ತೀಚೆಗೆ ಸುಮಾರು 3.5% ತಲುಪಿದೆ. ಜ್ಞಾನ ಮತ್ತು ಅಪಾರ ತಾಂತ್ರಿಕತೆಯಿಂದ ಕೂಡಿದ ಸಾಫ್ಟ್‌ವೇರ್ ಮತ್ತು ಮಾಹಿತಿ ತಂತ್ರಜ್ಞಾನ ಬೆಂಬಲಿತ ಸೇವೆಗಳು ಆ ವಲಯದ ಬೆಳವಣಿಗೆಯನ್ನು ಎಳೆದುಕೊಂಡು ಹೋಗುತ್ತಿವೆ ಎಂದು ಭಾವಿಸಿರುವ ಕೆಲವರು ಈ ಬೆಳವಣಿಗೆಯ ಜ್ಞಾನಾಧಾರಿತ ಅರ್ಥ ವ್ಯವಸ್ಥೆಯನ್ನು ವಿಸ್ತರಿಸುತ್ತದೆ ಮತ್ತು ಅದು ಒಂದು ಹೊಸ ರೀತಿಯ ಚೈತನ್ಯ ತೋರಿಸುತ್ತಿದೆ ಎಂದು ಹೇಳುತ್ತಾರೆ.

ಈ ವರ್ಣನೆಯಲ್ಲಿ ಸತ್ಯ ಎಷ್ಟಿದೆ? ಸಿಎಸ್‌ಓ ಮಾಡಿರುವ ಒಂದು ಅಂದಾಜಿನ ಪ್ರಕಾರ, 2012-13ರ ಜಿಡಿಪಿಯಲ್ಲಿ, "ಆಧುನಿಕ ಸೇವೆಗಳು" ಎಂದು ಗುರುತಿಸಲಾಗಿರುವ ಬ್ಯಾಂಕಿಂಗ್, ವಿಮೆ, ಶಿಕ್ಷಣ, ಕಂಪ್ಯೂಟರ್-ಸಂಬಂಧಿತ ಸೇವೆಗಳು, ಸಂಶೋಧನೆ-ಅಭಿವೃದ್ಧಿ, ಆರೋಗ್ಯ, ಸಂಪರ್ಕ, ಕಾನೂನು ಸೇವೆಗಳು, ಲೆಕ್ಕ ಇಡುವ ವಿಧಾನ ಮುಂತಾದ ಸೇವೆಗಳ ಒಂದು ಬಳಗದ ಕೊಡುಗೆ ಕೇವಲ 16.6% ಇತ್ತು. ಸಾರ್ವಜನಿಕ ಆಡಳಿತ, ರಕ್ಷಣೆ, ಮತ್ತು ರೈಲ್ವೆಗಳ ಸೇವೆಯನ್ನು ಅದಕ್ಕೆ ಸೇರಿಸಿದಾಗಲೂ ಈ ಅಂಕಿ 23.3% ಆಗುತ್ತದೆ. ಅಗಲೂ, ಜಿಡಿಪಿಯಲ್ಲಿ ಸೇವೆಗಳ ಒಟ್ಟು ಕೊಡುಗೆಯ ಸುಮಾರು ಅರ್ಧ ಭಾಗದ ಕೊಡುಗೆಯ ಲೆಕ್ಕವೇ ಸಿಗುವುದಿಲ್ಲ. ಚಿಲ್ಲರೆ ವ್ಯಾಪಾರವೂ ಸೇರಿದಂತೆ ವ್ಯಾಪಾರವು ಒಂಟಿಯಾಗಿ ಜಿಡಿಪಿಗೆ 16% ಕೊಡುಗೆ ನೀಡುತ್ತದೆ. ಸೇವಾ ವಲಯದ ಕೊಡುಗೆಯ ಈ ಪರಿಸ್ಥಿತಿಯು ಅದು ತೋರಿಸುತ್ತಿರುವ ಹೊಸ ರೀತಿಯ ಚೈತನ್ಯದ ವಿಶ್ವಾಸಾರ್ಹತೆಯು ಅದು ನೀಡದಿರುವ ಕೊಡುಗೆಯಷ್ಟು ಮಟ್ಟಿಗೆ ಕಡಿಮೆಯಾಗುತ್ತದೆ.

ಪಾರಂಪರಿಕ ಸೇವೆಗಳು

ಭಾರತದ ಅರ್ಥ ವ್ಯವಸ್ಥೆಯಲ್ಲಿ, ಆಧುನಿಕ ಸೇವೆಗಳು ಎಷ್ಟು ಗುರುತರವಾದ ಪಾತ್ರ ವಹಿಸುತ್ತಿವೆಯೋ ಅಷ್ಟೇ ಗುರುತರವಾದ ಪಾತ್ರವನ್ನು ಅತೀ ಕಡಿಮೆ ಸಂಪಾದನೆಯ ಅಸಂಘಟಿತ ಪಾರಂಪರಿಕ ಸೇವೆಗಳೂ ವಹಿಸುತ್ತಿವೆ. ಪ್ರಾಥಮಿಕ ಮತ್ತು ಅಧೀನ ವಲಯಗಳಲ್ಲಿ ಉದ್ಯೋಗಾವಕಾಶಗಳ ಪರಿಸ್ಥಿತಿ ಬಿಗಡಾಯಿಸಿರುವುದರಿಂದ, ಕೆಲಸದ ಸ್ಥಳಗಳಲ್ಲಿ ತಕ್ಕಮಟ್ಟಿನ ಅನುಕೂಲವಿದೆ ಎಂದಾಗಲಿ ಅಥವಾ ಸಾಧಾರಣ ಮಟ್ಟದ ಕೂಲಿ ಇದೆ ಎಂದಾಗಲಿ ಹೇಳುವ ಪರಿಸ್ಥಿತಿ ಇಲ್ಲದಿದ್ದರೂ, ಅಸಂಘಟಿತ-ಪಾರಂಪರಿಕ ವಲಯದ ಸೇವೆಗಳು ಬೆಳೆಯುತ್ತಿವೆ. ಕೃಷಿ ಕುಗ್ಗುತ್ತಿರುವುದರಿಂದ ಅಥವಾ ಆರ್ಥಿಕವಾಗಿ ಅನುಕೂಲಕರವಾಗದ ಕಾರಣದಿಂದ ನಿರುದ್ಯೋಗಿಗಳು ಜೀವನ ನಿರ್ವಹಣೆಗಾಗಿ ಭೂಮಿಯನ್ನು ಅವಲಂಬಿಸಿ ಅಲ್ಲಿಯೇ ನೆಲಸುವ ಪರಿಸ್ಥಿತಿ ಇಲ್ಲದಿರುವುದರಿಂದಾಗಿ, ಸೇವಾ ವಲಯವು ನಿರುದ್ಯೋಗಿಗಳ ಪಾಲಿಗೆ ಬಚ್ಚಲ ಗುಂಡಿಯಂತಾಗಿದೆ.

ಒಟ್ಟು ಕೆಲಸಗಾರಾರ ಸಂಖ್ಯೆಯಲ್ಲಿ ಕೇವಲ 25%ರಷ್ಟಿರುವ ಮೂರನೆ ಶ್ರೇಣಿಯ(tertiary sector) ಈ ವಲಯವು 2009-10ರಲ್ಲಿ ದೇಶದ ಜಿಡಿಪಿಗೆ ಸುಮಾರು 55% ಕೊಡುಗೆ ನೀಡಿತ್ತು. ನಿರುದ್ಯೋಗಿಗಳಿಗೆ ಆಸರೆಯಾಗಿರುವ, ಕಡಿಮೆ ಕೂಲಿಯ ಉದ್ಯೋಗ ಕೊಡುವ ಪಾರಂಪರಿಕ ಸೇವೆಗಳ ಕೊಡುಗೆ ಜಿಡಿಪಿಯಲ್ಲಿ ಕಡಿಮೆ ಪಾಲಿದ್ದರೂ, ಕಡಿಮೆ ಸಂಖ್ಯೆಯ ಉದ್ಯೋಗಿಗಳಿರುವ ಉನ್ನತ ಉತ್ಪಾದಕತೆಯ ಸೇವೆಗಳು ತಂದು ಕೊಟ್ಟ ಹೇರಳ ಆದಾಯದಿಂದಾಗಿ, ಈ ಕೊಡುಗೆ ಸಾಧ್ಯವಾಗಿದೆ ಎನಿಸುತ್ತದೆ. ಭಾರತದ ಸೇವಾ ವಲಯವು ಅನೇಕ ಮಂದಿ ಶತ ಕೋಟಿ ಡಾಲರ್ ಅಧಿಪತಿಗಳಿಗೂ ಮತ್ತು ಅತೀ ಹೆಚ್ಚು ಮಂದಿ ವಂಚಿತರಿಗೂ ಆಶ್ರಯ ತಾಣವಾಗಿದೆ.

ಇಂತಹ ಬೆಳವಣಿಗೆಯು ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಅದು ಇನ್ನುಳಿದವರ ಮೇಲೆ ಹರಿಸುವ ಆರ್ಥಿಕ ಪರಿಣಾಮವೂ ನಗಣ್ಯವೇ. ಇಂತಹ ಒಂದು ಬೆಳವಣಿಗೆಯನ್ನು ತಲೆಯ ಮೇಲೆ ಹೊತ್ತು ಮೆರೆಯುವುದು ಮತ್ತು ಅದು ಅಭಿವೃದ್ಧಿಯನ್ನು ಮುಂದೊಯ್ಯುವ ಸಾಮರ್ಥ್ಯ ಹೊಂದಿದೆ ಎಂದು ಭಾವಿಸುವುದು, ಮುಂದುವರೆದ ಹಾಗೂ ಮುಂದುವರೆಯುತ್ತಿರುವ ದೇಶಗಳಲ್ಲಿ ಮೆರೆಯುತ್ತಿರುವ ನಮ್ಮ ಕಾಲದ ಬಂಡವಾಳಶಾಹಿಯ ಸ್ವಭಾವವನ್ನು ಮರೆಮಾಚಿದ ಕೃತ್ಯವಾಗುತ್ತದೆ.

ಕೃಷಿ ಭೂಮಿ ಕಬಳಿಸುವ ಬುಲೆಟ್ ರೈಲ್‌ಗೆ 50,000 ಆದಿವಾಸಿ ರೈತರ ಬೃಹತ್ ಪ್ರತಿಭಟನೆ



ಮಹಾರಾಷ್ಟ್ರದಲ್ಲಿ ಮತ್ತೊಂದು ಬೃಹತ್ ರೈತ ಪ್ರತಿಭಟನೆ ಮೇ 3ರಂದು ನಡೆದಿದೆ. ಈ ಬಾರಿ ಮುಂಬೈ ಸಮೀಪವಿರುವ ದಹಾಣು ಕೇಂಬಾವುಟಗಳು–ಕೆಂಪು ಟೋಪಿಗಳಿಂದ ತುಂಬಿ ಹೋಯಿತು. ಸುತ್ತಲಿನ ಠಾಣೆ–ಪಾಲ್ಘರ್ ಜಿಲ್ಲೆಯ 60ಕ್ಕೂ ಹೆಚ್ಚು ಹಳ್ಳಿಗಳಿಂದ ಬಂದ 50 ಸಾವಿರ ರೈತರು ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಮತ್ತು ಮುಂಬೈ–ವಡೋದರಾ ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆಗಳ ವಿರುದ್ಧ ಪ್ರತಿಭಟನೆ ನಡೆಸಿದರು. ಪ್ರಧಾನಮಂತ್ರಿಗಳ ರಾಜ್ಯದ ಶ್ರೀಮಂತರಿಗಾಗಿ ಇರುವ ಈ ಎರಡು ಬೃಹತ್ ಯೋಜನೆಗಳಿಂದ ಈ ಪ್ರದೇಶದ ರೈತರು 1000 ಎಕ್ರೆಗೂ ಹೆಚ್ಚು ಕೃಷಿ ಭೂಮಿ ಮತ್ತು ಮನೆಗಳನ್ನು ಕಳಕೊಳ್ಳುತ್ತಾರೆ. ಇದನ್ನು ಪ್ರತಿಭಟಿಸಿ ಇಷ್ಟೊಂದು ಬೃಹತ್ ಸಂಖ್ಯೆಯಲ್ಲಿ ರೈತರು ದಹಾಣು ಬೀಚ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಅಶೋಕ ಧವಳೆ ಮಾತಾಡಿದರು. ಇದು ಖಾಸಗೀಕರಣದ ಒಂದು ನಡೆ ಎಂದ ಅವರು, ಒಂದು ದಿನ ಈ ದೇಶದ ನಾಗರಿಕರು ವಿದೇಶಿ ಕಂಪನಿಗಳು ಹೇಳಿದಂತೆ ಬದುಕ ಬೇಕೆಂದಿದ್ದರೆ ಸ್ವಾತಂತ್ರ್ಯ ಹೋರಾಟಗಾರರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎಲ್ಲವನ್ನೂ ತ್ಯಾಗ ಮಾಡುವ ಅಗತ್ಯವಾದರೂ ಏನಿತ್ತು ಎಂದು ಖಾರವಾಗಿ ಈಗಿನ ಆಳರಸರನ್ನು ಪ್ರಶ್ನಿಸಿದರು.

ಸರಕಾರ ಈಗಾಗಲೇ ಜನಗಳನ್ನು ಹೊರದಬ್ಬುವ ಬೆದರಿಕೆ ಹಾಕಿದೆ ಎಂದು ನಂತರ ಮಾತಾಡಿದ ಜನವಾದಿ ಮಹಿಳಾ ಸಂಘಟನೆಯ ಲಹಾಣಿ ದೌಡ ಅವರು ಹೇಳಿದರು. ಪಾಲ್ಘರ್ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಬರ್ಕ್ಯಾ ಮಂಗತ್ ರೈತರ ಅಗತ್ಯಗಳನ್ನು ಈಡೇರಿಸುವಲ್ಲಿ ಸರಕಾರ ಅಸಮರ್ಥವಾಗಿರುವುದರಿಂದಾಗಿ ಅವರಲ್ಲಿ ಆಕ್ರೋಶ ಉಂಟಾಗಿದೆ ಎಂದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆಯವರೂ ಮಾತನಾಡಿದರು.

ಅತ್ತ ನಾಶಿಕ್‌ನಲ್ಲೂ ರೈತರೂ ಹಾಲಿಗೆ ಬಿಜೆಪಿ ಸರಕಾರ ಆಶ್ವಾಸನೆ ನೀಡಿದ್ದ ಬೆಲೆಯನ್ನು ಕೊಡುತ್ತಿಲ್ಲ ಎಂದು 'ದೂಧ್ ಆಂದೋಲನ್' ನಡೆಸಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆ ಆಗ್ರಹಿಸಿ ಎಡಪಕ್ಷಗಳ 52 ಗಂಟೆಗಳ ಧರಣಿ–ಬೃಹತ್ ಪಂಜಿನ ಮೆರವಣಿಗೆ

ಮೇ 4 ರಂದು ಪಶ್ಚಿಮ ಬಂಗಾಲದ 17 ಎಡಪಕ್ಷಗಳು ಒಂದು ಬೃಹತ್ ಪಂಜಿನ ಮೆರವಣಿಗೆ ನಡೆಸಿ ರಾಜ್ಯದಲ್ಲಿ ತಕ್ಷಣವೇ ಪ್ರಜಾಪ್ರಭುತ್ವವನ್ನು, ಪ್ರಜಾಸತ್ತಾತ್ಮಕ ವಿಧಿ–ವಿಧಾನಗಳನ್ನು ಮತ್ತೆ ಸ್ಥಾಪಿಸಬೇಕು ಎಂದು ಆಗ್ರಹಿಸಿವೆ.

ಪ್ರತಿಪಕ್ಷಗಳಿಗೆ, ಅದರಲ್ಲೂ ಎಡಪಕ್ಷಗಳಿಗೆ ಪಂಚಾಯತು ಚುನಾವಣೆಗಳಲ್ಲಿ ನಾಮಪತ್ರಗಳನ್ನೂ ಸಲ್ಲಿಸಲೂ ಬಿಡದಿರುವ ನಾಮಪತ್ರ ಸಲ್ಲಿಕೆಯ ಘಟ್ಟದಲ್ಲೇ 14 ಮಂದಿಯನ್ನು ಸಾಯಿಸಿರುವ, ಒಂದು ಸಾವಿರಕ್ಕೂ ಹೆಚ್ಚು ಎಡ ಕಾರ್ಯಕರ್ತರನ್ನು ಗಾಯಗೊಳಿಸಿರುವ ಹಿಂಸಾಚಾರದ ಹಿನ್ನೆಲೆಯಲ್ಲಿ ಈ 17 ಎಡಪಕ್ಷಗಳು 52 ಗಂಟೆಗಳ ಧರಣಿ ನಡೆಸಿದ ನಂತರ ಈ ಪಂಜಿನ ಮೆರವಣಿಗೆ ನಡೆಸಿದರು.

ಈ ಪಂಜಿನ ಮೆರವಣಿಗೆಯಲ್ಲಿ ಸುಮಾರು 25 ಸಾವಿರ ಜನಗಳು ಭಾಗವಹಿಸಿದ್ದಾರೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ನಾಡಿಯ, 24 ಪರಗಣ ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಿಂದ ಬಂದ ಸಾವಿರಾರು ರೈತರೂ ಈ ಮೆರವಣಿಗೆಯಲ್ಲಿ ಭಾಗವಹಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಸೂರ್ಯಕಾಂತ್ ಮಿಶ್ರ, ಎಡರಂಗದ ಅಧ್ಯಕ್ಷ ಬಿಮನ್ ಬಸು, ಸಿಪಿಐ ರಾಜ್ಯ ಕಾರ್ಯದರ್ಶಿ ಸ್ವಪನ್ ಬ್ಯಾನರ್ಜಿ,ಆರ್‌ಎಸ್‌ಪಿ ಮುಖಂಡರಾದ ಕ್ಷಿತಿ ಗೊಸ್ವಾಮಿ, ಫಾರ್ವರ್ಡ್ ಬ್ಲಾಕ್ ಮುಖಂಡ ನರೇನ್ ಚಟರ್ಜಿ, ಸಿಪಿಐ(ಎಂಎಲ್) ಮುಖಂಡ ಪಾರ್ಥ ಘೋಷ್, ಎಸ್‌ಯುಸಿಐ ಮುಖಂಡ ಸೌಮೆನ್ ಬೋಸ್ ಮತ್ತಿತರ ಮುಖಂಡರು ಪಂಜಿನ ಮೆರವಣಿಗೆಯ ಮುಂಚೂಣಿಯಲ್ಲಿ ಇದ್ದರು.

ಇದಕ್ಕೆ ಮೊದಲು ಧರಣಿಯನ್ನು ಉದ್ದೇಶಿಸಿ ಮಾತನಾಡುತ್ತ ಸೂರ್ಯಕಾಂತ್ ಮಿಶ್ರ ರಾಜ್ಯದ ಬೆಳವಣಿಗೆಯ ಹೆಸರಲ್ಲಿ ಅಧಿಕಾರಕ್ಕೇರಿದ ಟಿಎಂಸಿ ಬೆಳವಣಿಗೆ ಮಾಡಿದ್ದು ಬೆಂಕಿ ಹಚ್ಚುವ ಗೂಂಡಾಗಳನ್ನು ಮಾತ್ರ ಎಂದರು, ಟಿಎಂಸಿಯ ಕಾರ್ಯಕರ್ತರಿಗೂ ಅವರ ಆಂತರಿಕ ಕಿತ್ತಾಟದಲ್ಲಿ ಎಡರಂಗದ ಕಾರ್ಯಕರ್ತರೇ ರಕ್ಷಣೆ ನೀಡಬೇಕಾದಂತಹ ಪರಿಸ್ಥಿತಿಯಿದೆ ಎಂದರು.

ಪಂಜುಗಳನ್ನು ಹೊತ್ತಿಸುತ್ತ ಎಡರಂಗದ ಕಾರ್ಯಕರ್ತರು ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ರಂಗವನ್ನು ಆವರಿಸಿರುವ ಕತ್ತಲನ್ನು ದೂರ ಮಾಡುವ ಪ್ರತಿಜ್ಞೆಯನ್ನು ಕೈಗೊಂಡರು.

ಈ ನಡುವೆ, ಪಂಚಾಯತ್ ಚುನಾವಣೆಗೆ ನಾಮಪತ್ರಗಳನ್ನು ಸಂಬಂಧಪಟ್ಟ ಕಚೇರಿಗಳಲ್ಲಿ ಸಲಲಿಸಲಾಗದೆ ಇಂಟರ್‌ನೆಟ್ ಮೂಲಕ ಆನ್‌ಲೈನ್‌ನಲ್ಲಿ ನಿಗದಿತ ಸಮಯದ ಒಳಗೆ ಸಲ್ಲಿಸಿದ ನಾಮಪತ್ರಗಳನ್ನೂ ಪರಿಶೀಲಿಸಬೇಕು ಎಂದು ಕೊಲ್ಕತಾ ಹೈಕೋರ್ಟ್ ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶ ನೀಡಿರುವುದು ಆಯೋಗಕ್ಕೂ, ರಾಜ್ಯ ಸರಕಾರಕ್ಕೂ ಚಾಟಿಯೇಟಿನಂತಾಗಿದೆ.

ಇದು ಅಭೂತಪೂರ್ವ ಸನ್ನಿವೇಶದಲ್ಲಿನ ಒಂದು ಅಭೂತಪೂರ್ವ ಕ್ರಮ ಎಂದು ಸೂರ್ಯಕಾಂತ್ ಮಿಶ್ರ ಹೇಳಿದ್ದಾರೆ. ಟಿಎಂಸಿ, ಮಮತಾ ಬ್ಯಾನರ್ಜಿ ಸರಕಾರ ಮತ್ತು ರಾಜ್ಯ ಚುನಾವಣಾ ಆಯೋಗ ಕೂಡ ಈ ಹೈಕೋರ್ಟ್ ಆದೇಶದ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಯೋಚಿಸುತ್ತಿವೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಎಡರಂಗ ಇದರ ಇರುದ್ಧ ಕೇವಿಯಟ್ ಅರ್ಜಿಯನ್ನು ಸಲ್ಲಿಸಿದೆ ಎಂದು ಸೂರ್ಯಕಾಂತ್ ಮಿಶ್ರ ಹೇಳಿದ್ದಾರೆ.







ತ್ರಿಪುರಾ: ಒಂದೂವರೆ ತಿಂಗಳ 'ಬದಲಾವಣೆ'

ಹಿಂಸಾಚಾರದ ತಾಂಡವ ಮತ್ತು ಗ್ರಾಮಿಣ ಆರ್ಥಿಕದ ಕುಸಿತ

ಬದಲಾವಣೆ ತನ್ನಿ ಎಂದು ಅಧಿಕಾರಕ್ಕೆ ಬಂದ ಒಂದೂವರೆ ತಿಂಗಳಲ್ಲೇ ತ್ರಿಪುರಾದ ಬಿಜೆಪಿ–ಐಪಿಎಫ್‌ಟಿ ಸರಕಾರ ತ್ರಿಪುರಾದ ಜನತೆಗೆ ಮುಂದೇನು ಕಾದಿದೆ ಎಂಬ ಚಿತ್ರವನ್ನು ಆಗಲೇ ಕೊಟ್ಟಿದೆ. ಯುವಕರಿಗೆ ಉದ್ಯೋಗ ಕೊಡುವ ಭರವಸೆ ನೀಡಿದ ಪಕ್ಷದ ಮುಖ್ಯಮಂತ್ರಿಗಳು ಈಗ ಪಾನ್–ಬೀಡಾ ಅಂಗಡಿ ತೆರೆಯಿರಿ, ಹಸು ಸಾಕಿರಿ, ಸರಕಾರವನ್ನು ನೆಚ್ಚಿಕೊಳ್ಳಬೇಡಿ ಎಂದಿದ್ದಾರೆ. ತಮ್ಮ ಇನ್ನೂ ಹಲವು ನಗೆಪಾಟಲು ಹೇಳಿಕೆಗಳಿಂದ ರಾಷ್ಟ್ರೀಯ ಮಾಧ್ಯಮಗಳಲ್ಲಿ ಹೆಸರು ಬರುವಂತೆ ಮಾಡಿದ್ದು ಈ ಬಿಜೆಪಿ ಮುಖ್ಯಮಂತ್ರಿಗಳ ಸಾಧನೆಯ ಒಂದು ಮುಖವಾದರೆ, ರಾಜ್ಯದೊಳಗೆ ಸರ್ವಾಧಿಕಾರಶಾಹಿಯ ಅಪಾಯವನ್ನು ಉಂಟು ಮಾಡುತ್ತಿರುವುದು ಇನ್ನೊಂದು ಮುಖ.

ಕಾನೂನಿನ ಆಳ್ವಿಕೆಯ ಬದಲು ಈಗ ಉನ್ಮತ್ತ ಬಿಜೆಪಿ ಕಾರ್ಯಕರ್ತರ ದರ್ಬಾರು ನಡೆಯುತ್ತಿದೆ. ವಿಜಯೋನ್ಮಾದ ಇಳಿದ ನಂತರ ಇದೂ ನಿಲ್ಲುತ್ತದೆ ಎಂಬ ಜನರ ನಿರೀಕ್ಷೆ ಹುಸಿಯಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜನ್ ಧರ್ ಪತ್ರಿಕಾ ಸಭೆಯೊಂದರಲ್ಲಿ ಹೇಳಿದ್ದಾರೆ.

ಸಿಪಿಐ(ಎಂ) ಮತ್ತು ಇತರ ಎಡ ಕಾರ್ಯಕರ್ತರ ಮೇಲೆ ದಾಳಿಗಳು ಮುಂದುವರೆಯುತ್ತಿವೆ. ಈಗ ಈ ದಾಳಿಗಳು ಚುನಾಯಿತ ಪಂಚಾಯತು ಮತ್ತಿತರ ಸ್ಥಳೀಯ ಸಂಸ್ಥೆಗಳ ಸದಸ್ಯರ ಮೇಲೆ ಆರಂಭವಾಗಿದೆ. ಈಗಲೂ ಹೆಚ್ಚಿನ ಸ್ಥಳೀಯ ಚುನಾಯಿತ ಸಂಸ್ಥೆಗಳಲ್ಲಿ ಎಡರಂಗದ್ದೇ ಬಹುಮತವಿರುವುದರಿಂದ ಈ ಸದಸ್ಯರನ್ನು ಹೆದರಿಸಿ–ಬೆದರಿಸಿ ತಮಗೆ ಶರಣಾಗತರಾಗುವಂತೆ, ಇಲ್ಲವೇ ರಾಜೀನಾಮೆ ಕೊಡುವಂತೆ ಮಾಡುವ ಪ್ರಯತ್ನ ಭರದಿಂದ ಸಾಗಿದೆ.

ರಾಜ್ಯದಲ್ಲಿ ಮೇ ದಿನಾಚರಣೆಗಳ ಸಂದರ್ಭದಲ್ಲಿ ದಾಳಿಗಳು ಇವರ ಇತ್ತೀಚಿನ ಹಿಂಸಾಚಾರದ ಉದಾಹರಣೆಗಳು. ಇದು ಕೇವಲ ಬುದ್ಧಿಗೆಟ್ಟ ಯುವಜನರ ಕೃತ್ಯಗಳಲ್ಲ, ಬಿಜೆಪಿ–ಐಪಿಎಫ್‌ಟಿ ಸಮ್ಮಿಶ್ರ ಸರಕಾರದ ರಾಜಕೀಯ ನಿರ್ಧಾರದಂತೆ ನಡೆಯುತ್ತಿರುವ ದಾಳಿಗಳು ಎಂದು ಬಿಜನ್ ಧರ್ ಅಭಿಪ್ರಾಯ ಪಟ್ಟಿದ್ದಾರೆ.

ಈ ಸರಕಾರ ಈಗ 'ರಾಷ್ಟ್ರೀಯ ವಾದೆ'ದ ಹೆಸರಲ್ಲಿ ಸ್ಥಳೀಯ ಚಾನೆಲ್‌ಗಳಲ್ಲಿ ಹಿಂದಿ ಸುದ್ದಿಪ್ರಸಾರ ಮಾಡಬೇಕು ಎಂದು ನಿರ್ದೇಶನ ನೀಡಿರುವುದಾಗಿ ವರದಿಯಾಗಿದೆ. ಎಡರಂಗ ಸರಕಾರದ ಪ್ರಯತ್ನಗಳಿಂದಾಗಿ ಅಧಿಕೃತ ಮನ್ನಣೆ ಪಡೆದಿರುವ ಬುಡಕಟ್ಟು ಭಾಷೆಯಾದ 'ಕೊಕ್ ಬೊರೊಕ್' ಬಾಷೆಯನ್ನು ಪಕ್ಕಕ್ಕೆ ತಳ್ಳಿ ಒಂದು ದೊಡ್ಡ ಭಾಷೆಯೊಂದಿಗೆ ನಿಲ್ಲಿಸುವುದು ರಾಷ್ಟ್ರೀಯವಾದವನ್ನು ಬಲಪಡಿಸಲು ನೆರವಾಗುವುದಿಲ್ಲ ಎಂದು ಬಿಜನ್ ಧರ್ ಹೇಳಿದ್ದಾರೆ. ಸರಕಾರದ ಮೈತ್ರಿ ಪಕ್ಷವಾದ ಐಪಿಎಫ್‌ಟಿ ಕೂಡ ಈ ನಿರ್ದೇಶನದ ಬಗ್ಗೆ ಸ್ಪಷ್ಟನೆ ಕೇಳಿದೆಯಂತೆ.

ದಶಕಗಳಿಂದ ಇರುವ ವಿವಿಧ ಪಕ್ಷಗಳ, ಸಾಮೂಹಿಕ ಸಂಘಟನೆಗಳ ಕಚೆರಿಗಳನ್ನು ಕಾನೂನುಬಾಹಿರ ಎಂದು ಧ್ವಂಸ ಮಾಡುವ ಕೆಲಸಕ್ಕೆ ಈಗ ಈ ಸರಕಾರ ಕೈ ಹಾಕಿದೆ.

ಆದರೆ ಬಡಜನರ ಪರಿಸ್ಥಿತಿಗಳತ್ತ ನೋಡಲು ಈ ಸರಕಾರಕ್ಕೆ ಇನ್ನೂ ಸಮಯ ದೊರೆತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ದೊರೆಯುತ್ತಿಲ್ಲ, ನಗರಪ್ರದೇಶಗಳಲ್ಲಿ ಗುಡಿಸಲು ನಿವಾಸಿಗಳದ್ದೂ ಅದೇ ಸ್ಥಿತಿ. ಬುಡಕಟ್ಟು ಪ್ರದೇಶಗಳಲ್ಲಿ ರೇಶನ್ ಅಂಗಡಿಗಳು ಮುಚ್ಚಿವೆ. ಹಲವು ಬುಡಕಟ್ಟು ಪ್ರದೇಶಗಳಲ್ಲಿ ಮಲೇರಿಯ, ಕಾಲರಾ ಸಾಂಕ್ರಾಮಿಕ ರೂಪ ಪಡೆಯುತ್ತಿವೆ. ಒಟ್ಟಾರೆಯಾಗಿ ಗ್ರಾಮೀಣ ಆರ್ಥಿಕ ಕುಸಿಯುತ್ತಿದೆ ಎಂದು ಬಿಜನ್ ಧರ್ ಹೇಳುತ್ತಾರೆ.

ಏಪ್ರಿಲ್ 27 ರಂದು ನಡೆದ ಶೃಂಗಸಭೆ ಕೊರಿಯಾದ ಪರ್ಯಾಯ ದ್ವೀಪದಲ್ಲಿ ಶಾಂತಿ ಸ್ಥಾಪನೆಗಾಗಿ ನಡೆದಿರುವ ಆಶಾದಾಯಕ ಹೆಜ್ಜೆ ಆಗಿದೆ. ಆದಾಗ್ಯೂ ಇದು ಈ ಪ್ರದೇಶದಲ್ಲಿ ಭೌಗೋಳಿಕ–ವ್ಯೂಹಾತ್ಮಕ ಹಿತಾಸಕ್ತಿಗಳಿರುವ ದೇಶಗಳ, ಪ್ರಮುಖವಾಗಿ ಅಮೆರಿಕಾದ ನಡೆ–ನಿಲವು ಹೇಗಿರುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಅಮೆರಿಕ ತನ್ನ ಪರಮಾಣ ಅಸ್ತ್ರ–ಸಜ್ಜಿತ ಯುದ್ಧನೌಕೆ ಮತ್ತು ಮಿಲಿಟರಿ ನೆಲೆಗಳನ್ನು ತೆರವು ಮಾಡುವುದೇ ಎಂಬದು ಪ್ರಮುಖ ಪ್ರಶ್ನೆ. ಜಗತ್ತೇ ಈ ಬೆಳವಣಿಗೆಗಳನ್ನೂ ಸ್ವಾಗತಿಸುತ್ತಿದ್ದರೂ ಸಹ, ಈ ಎರಡೂ ದೇಶಗಳು ತಮ್ಮ ಘೋಷಣೆಗಳನ್ನೂ ಶಾಂತಿಯ ಕಡೆ ಪರಿವರ್ತಿಸುವ ನಿಟ್ಟಿನಲ್ಲಿ ಮುಂದಿರುವ ಸವಾಲುಗಳನ್ನು ಹೇಗೆ ನಿಭಾಯಿಸುತ್ತವೆಂದು ಕಾದು ನೋಡಬೇಕಾಗಿದೆ.

ಕೊರಿಯಾ ಶಾಂತಿ ಪ್ರಕ್ರಿಯೆ ಆರಂಭ

ಕಿಮ್–ಮೂನ್ ಐತಿಹಾಸಿಕ ಘೋಷಣೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಕಳೆದ ವರ್ಷವಿಡೀ ಉತ್ತರ ಕೊರಿಯಾದ ಯುವ ನಾಯಕ ಅಧ್ಯಕ್ಷ ಕಿಮ್ ಜಂಗ್–ಉನ್ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ಬಿರುಸಿನ ಚಕಮಕಿ ಅಕ್ರಮಣಕಾರಿ ಮಾತುಗಳು– ಒಬ್ಬರ ಮೇಲೊಬ್ಬರ ಕೆಸರೆರೆಚಾಟದ ಟ್ವೀಟ್ ಗಳು, ಕೊರಿಯಾದ ಪರ್ಯಾಯ ದ್ವೀಪದಲ್ಲಿ (ಪೆನ್ನಿನ್ಸುಲ್ಲಾದಲ್ಲಿ) ಯುದ್ಧದ ಕಾರ್ಮೋಡ ಗಳನ್ನು ಬಿತ್ತಲಾಗಿತ್ತು. ಇಡೀ ಜಗತ್ತೇ ಇದರಿಂದ ತಲ್ಲಣಗೊಂಡಿತ್ತು. ಒಂದು ಕಡೆ, ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ರ ಅತಿರೇಕದ ಪ್ರವೃತ್ತಿ ಇದಕ್ಕೆ ಕಾರಣವೆಂದು ಹಾಗೂ ಮತ್ತೊಂದೆಡೆ ಅಮೆರಿಕದ ಅಧ್ಯಕ್ಷರ ಯುದ್ದಕೋರತನ ನೀತಿಯೇ ಕಾರಣವೆಂಬ ಬಲವಾದ ಅಭಿಪ್ರಾಯಗಳು ಕೇಳಿ ಬಂದ್ದಿದ್ದವು.

ಕಳೆದ ಆಗಸ್ಟ್–ಸೆಪ್ಟೆಂಬರ್ ನಲ್ಲಿ ಉತ್ತರ ಕೊರಿಯಾವು ನಡೆಸಿದ ಹಲವಾರು ಪರಮಾಣು ಶಸ್ತ್ರಾಸ್ತ್ರ ಕ್ಷಿಪಣಿಗಳ ಪ್ರಯೋಗ ಮತ್ತು ಹೈಡ್ರೋಜನ್ ಬಾಂಬ್ ಪರೀಕ್ಷೆ ಗಳು, ಜೊತೆಗೆ ಅಮೆರಿಕದ ಆಯಕಟ್ಟಿನ ಸ್ಥಳಗಳನ್ನು ತಲುಪುವಂತ ಕ್ಷಿಪಣಿ ಪರೀಕ್ಷೆಗಳು, ಈ ಪರ್ಯಾಯ ದ್ವೀಪದಲ್ಲಿ ಯುದ್ದದ ಆತಂಕದ ಸನ್ನಿವೇಶವನ್ನು ಸೃಷ್ಟಿ ಸಿದ್ದವು. ಇವೆಲ್ಲವುಗಳ ಮದ್ಯೆ ಮುಂದೇನು ಆಗಬಹುದೆಂಬ ಆತಂಕಕಾರಿ ಸ್ಥಿತಿ ಇಡೀ ಜಗತ್ತನ್ನೇ ಕಾಡಿದ್ದು ನಿಜ.

ಈ ನಿಟ್ಟಿನಲ್ಲಿ ಕಳೆದ ಏಪ್ರಿಲ್ 27 ರಂದು, ಉತ್ತರ–ಧಕ್ಷಿಣ ಕೊರಿಯಾದ ಅಧ್ಯಕ್ಷರುಗಳಾದ ಕಿಮ್ ಜಂಗ್–ಉನ್ ಮತ್ತು ಮೂನ್ ಜೇ–ಇನ್ ರ ನಡುವೆ, ಧಕ್ಷಿಣ ಕೊರಿಯಾದ, ಮಿಲಿಟರಿ ರಹಿತ ವಲಯದ ಗಡಿ ಗ್ರಾಮ ವಾದ "ಪನ್ಮ್ಂಜೊಮ್ ನಲ್ಲಿ, ನಡೆದ "ಶೃಂಗಸಭೆ" ಯ ಮಾತು ಕತೆ" ಶಾಂತಿ ನೆಲೆಸುವ ಮಾರ್ಗ ಕ್ಕೆ ಶುಭ ಆರಂಭವಾಗಿದೆ ಮತ್ತು ಇದೊಂದು ಐತಿಹಾಸಿಕ ಸ್ವಾಗತ ಕಾರಿ ಬೆಳವಣಿಗೆ ಎಂದು ಪರಿಗಣಿಸಲಾಗಿದೆ.

ಏಪ್ರಿಲ್ 27ರ ಶೃಂಗಸಭೆ : ಐತಿಹಾಸಿಕ ಆರಂಭ

ಈ ಮೊದಲೆ ನಿಗದಿಪಡಿಸಿದ್ದ ಏಪ್ರಿಲ್ 27 ರ ಶೃಂಗಸಭೆ ದಕ್ಷಿಣ ಕೊರಿಯಾದ ಗಡಿ ಗ್ರಾಮವಾದ 'ಪನ್ಮ್ಂಜೊನ್' ನಲ್ಲಿ ನಡೆಯಿತು. 1953 ರಲ್ಲಿ ಕೊರಿಯಾದ ಯುದ್ಧ ಅಂತ್ಯವಾದ ಸುದೀರ್ಘ ಕಾಲದ ನಂತರ, ಉತ್ತರ– ದಕ್ಷಿಣ ಕೊರಿಯಾದ ಅಧ್ಯಕ್ಷರಿಬ್ಬರೂ ನಡೆಸುತ್ತಿರುವ ಈ ಸಭೆಯು ಎರಡು ದೇಶಗಳ ನಡುವೆ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಮಹತ್ವಪೂರ್ಣವಾದದ್ದು. ಪನ್ಮ್ಂಜೊನ್ ಒಂದು ಪರ್ಯಾಯ ದ್ವೀಪ. ಶಾಂತಿ ಸ್ಥಾಪಿಸುವ ಉದ್ದೇಶ ದಿಂದ ಇಲ್ಲಿ ನಡೆಯುತ್ತಿರುವ ಈ ಸಭೆ ಯನ್ನು ಇಡೀ ಜಗತ್ತೇ ವಿಸ್ಮಯಕಾರಿ ಯಾಗಿ ವೀಕ್ಷಣೆ ಮಾಡಿತು.

ಶೃಂಗಸಭೆ ನಡೆಯುವ 'ಶಾಂತಿ ಗೃಹ' ಕ್ಕೆ ಪ್ರವೇಶಿಸಿವ ಮೊದಲು ಕಿಮ್ ಜುಂಗ್, ಅಲ್ಲಿ ಇಡಲಾಗಿರುವ 'ಅತಿಥಿ ಪುಸ್ತಕ' ದಲ್ಲಿ 'ಶಾಂತಿಯ ಹೊಸ ಯುಗ' ಎಂಬ ಶಾಂತಿ ಸಾರುವ ಘೋಷಣೆ ಯ ಸಂದೇಶವನ್ನು ಬರೆದು ಸಹಿ ಮಾಡಿದರು. ಇದಕ್ಕೆ ಮೊದಲು, ಕಿಮ್ ರವರ ಆಹ್ವಾನ ದ ಮೇರೆಗೆ ಮೂನ್ ರವರು ಉತ್ತರದ ಗಡಿ ಭಾಗದೊಳೆಗೆ ಬಂದು, ಆ ನಂತರ ದಕ್ಷಿಣದಲ್ಲಿನ ಗಡಿ ಭಾಗದಲ್ಲಿನ ಶಾಂತಿ ಗೃಹ ಕ್ಕೆ ಆಗಮಿಸಿ, ಕಿಮ್ ರನ್ನು ಸ್ವಾಗತಿಸಿದರು. ಇದು ಈ ಇಬ್ಬರ ಉತ್ತಮ ಸೌಜನ್ಯ ಪೂರ್ವ ನಡಾವಳಿ ಎಂದು ವರ್ಣಿಸಲಾಗಿದೆ.

ಎರಡು ಸುತ್ತಿನ ಮಾತುಕತೆ :

ಕೊರಿಯಾದ ಪರ್ಯಾಯ ದ್ವೀಪದಲ್ಲಿ ಶಾಂತಿ ಸ್ಥಾಪಿಸುವ ಕಡೆಗೆ ಮಹತ್ತರ ಹೆಜ್ಜೆಯಿಟ್ಟಿರುವ ಈ ಇಬ್ನರ ನಡುವಿನಲ್ಲಿ ಎರಡು ಸುತ್ತಿನ ಮಾತುಕತೆ ನಡೆಯಿತು ಎಂದು ವರದಿಯಾಗಿದೆ. ಮೊದಲ ಸುತ್ತಿನಲ್ಲಿ ಸುಮಾರು 100 ನಿಮಿಷಗಳ ಕಾಲ ಮಾತುಕತೆ ನಡೆಯಿತು. ಪರ್ಯಾಯ ದ್ವೀಪದಲ್ಲಿ ಪರಮಾಣು ನಿಶಸ್ತ್ರೀಕರಣ, ಶಸ್ತ್ರಾಸ್ತ್ರಗಳ ವಿನಾಶ ಕುರಿತಾಗಿ, ಆ ನಂತರದ ಸುತ್ತಿನಲ್ಲಿ ಕರಡು ಘೋಷಣೆ ಹೊರಡಿಸಲು ನಿರ್ಧರಿಸಲಾಗಿದೆ. 'ನಾವು ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆಯನ್ನು ಇನ್ನು ಮುಂದೆ ನಿಲ್ಲಿಸುತ್ತೇವೆ'. ಎಂಬ ತಮ್ಮ ನಿಶಸ್ತ್ರೀಕರಣದ ಬದ್ಧತೆ ಯನ್ನು ಕಿಮ್ ಪುನರುಚ್ಚಿಸಿದರು.

ಎರಡನೆ ಸುತ್ತಿನ ಮಾತುಕತೆಯ ನಂತರ ಇಬ್ಬರು ನಾಯಕರು ಕರಡು ಘೋಷಣೆಗಳ ಜಂಟಿ ಹೇಳಿಕೆಗಳಿಗೆ ಸಹಿ ಮಾಡಿದರು. ಹಲವಾರು ಗಮನಾರ್ಹ ನಿರ್ಧಾರಗಳನ್ನು ಕೈಗೊಂಡ ಒಪ್ಪಂದದಗಳ ಈ ಘೋಷಣೆ ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿತು. ಎರಡು ಕೊರಿಯಾಗಳ ನಡುವಿನ ಇದುವರೆಗಿನ ಪೈಪೋಟಿಯನ್ನು 'ಶೀತಲ ಸಮರ" ಎನ್ನಾಲಾಗಿದ್ದನ್ನು ಇದೀಗ ಅಳಿಸಿ ಹಾಕಿ ಹೊಸ ಯುಗಕ್ಕೆ ಪ್ರವೇಶಿಸಲಾಯಿತು. ಮಾತ್ರವಲ್ಲದೆ, ಜಂಟಿ ಘೋಷಣೆ, 8 ಕೋಟಿ ಕೊರಿಯನ್ನರು ಹಾಗೂ ಇಡೀ ಜಗತ್ತಿನಲ್ಲಿ ಶಾಂತಿಯನ್ನು ಬಯಸುವ ಎಲ್ಲರಿಗೂ ಇನ್ನು ಮುಂದೆ ಕೊರಿಯಾದ ದ್ವೀಪದಲ್ಲಿ ಯಾವುದೇ ರೀತಿಯ ಯುದ್ದವಿಲ್ಲ ಎಂಬ ಶಾಂತಿಯ ಹೊಸ ಸಂದೇಶವನ್ನು ಸಾರಿದೆ.

ಘೋಷಣಾ ಒಪ್ಪಂದ ದಲ್ಲಿ ಏನಿದೆ?

- ಯುದ್ಧವನ್ನು ನಿಲ್ಲಿಸುವ ಪ್ರಾಯೋಗಿಕ ಕ್ರಮಗಳು
- ಎರಡೂ ಕೊರಿಯಾಗಳ ಪುನರ್ ಏಕೀಕರಣಕ್ಕೆ ಆಸಕ್ತಿ.
- ಪರಮಾಣು ನಿಶಸ್ತೀಕರಣಕ್ಕೆ ದೃಢ ಬದ್ದತೆ.

ಯುದ್ಧವನ್ನು ನಿಲ್ಲಿಸುವ ಪ್ರಾಯೋಗಿಕ ಕ್ರಮಗಳು

ತಮ್ಮ ಹತೋಟಿಯ ಪ್ರದೇಶಗಳು ಒಳಗೊಂಡಿರುವ ಭೂಮಿ, ವಾಯು ಮತ್ತು ಸಮುದ್ರ ನೌಕೆಗಳ ಮೂಲಕ ಪರಸ್ಪರ ವಿರುದ್ಧವಾಗಿ ನಡೆಯುವ ಎಲ್ಲಾ ರೀತಿಯ ಪ್ರತಿಕೂಲ ಚಟುವಟಿಕೆಗಳನ್ನು ನಿಲ್ಲಿಸುವುದು; ವಾಸ್ತವವಾಗಿ ಮಿಲಿಟರಿ ವಲಯವನ್ನು ಶಾಂತಿಯ ವಲಯವನ್ನಾಗಿ ಮಾರ್ಪಡಿಸುವುದು; ಎರಡೂ ಕೊರಿಯಾಗಳ ಗಡಿಯಲ್ಲಿ ಕರಪತ್ರಗಳ ವಿತರಣೆ, ಬೃಹತ್ ಧ್ವನಿವರ್ಧಕಗಳ ಪ್ರತಿಕೂಲ ಪ್ರಚಾರ ಚಟುವಟಿಕೆಗಳನ್ನೂ ಮೇ 1 ರಿಂದ ನಿಲ್ಲಿಸುವುದು; ಎರಡು ದೇಶಗಳ 'ಮಿಲಿಟರಿ ಜನರಲ್' ಗಳ ನಡುವಿನ ಸಭೆಯನ್ನು ಮುಂದಿನ ತಿಂಗಳು ಕರೆಯುವುದು; ಮಿಲಿಟರಿ ಅಧಿಕಾರಿಗಳ ನಡುವೆ, ರಕ್ಷಣಾ ಮಂತ್ರಿಗಳು ಸೇರಿದಂತೆ ನಿಯಮಿತ ಅವಧಿಯಲ್ಲಿ ಸಭೆಗಳನ್ನು ನಡೆಸುವುದು, ಉಂಟಾಗುವ ಸಮಸ್ಯೆಗಳನ್ನು ಆ ಮೂಲಕ ಪರಿಹರಿಸಿಕೊಳ್ಳಬೇಕು – ಎಂಬ ಮಹತ್ವದ ಅಂಶಗಳು ಘೋಷಣಾ ಒಪ್ಪಂದದಲ್ಲಿ ಒಳಗೊಂಡಿವೆ.

ಎರಡೂ ಕೊರಿಯಾಗಳ ಪುನರ್–ಏಕೀಕರಣಕ್ಕೆ ಆಸಕ್ತಿ

1953 ರ ಕೊರಿಯಾ ಯುದ್ಧದ ನಂತರ, ಶಾಂತಿ ಒಪ್ಪಂದಕ್ಕೆ ಬರಲಾಗಿತ್ತು. ಆಗ ಅಮೆರಿಕ, ಚೀನಾ ರಾಷ್ಟ್ರಗಳು ಈ ಶಾಂತಿ ಒಪ್ಪಂದದಲ್ಲಿ ಪಾಲ್ಗೊಂಡಿದ್ದವು. ಈ ವಿದೇಶಿ ಶಕ್ತಿಗಳಲ್ಲಿ ಪ್ರಮುಖ ವಾಗಿ ಅಮೆರಿಕಾವು ಭೌಗೋಳಿಕ ವಾಗಿ ಆಯಕಟ್ಟಿನ ಪರ್ಯಾಯ ದ್ವೀಪದಲ್ಲಿ ಹಿತಾಸಕ್ತಿ ರೂಪಿಸಿಕೊಂಡಿತ್ತು.

ಈ ನಿಟ್ಟಿನಲ್ಲಿ ಪ್ರಸ್ತುತ ಘೋಷಣೆಯಲ್ಲಿ "ದಕ್ಷಿಣ ಮತ್ತು ಉತ್ತರ ಕೊರಿಯಾಗಳು ತಮ್ಮ ಒಪ್ಪಂದದ ಮೇರೆಗೆ ಕೊರಿಯಾ ರಾಷ್ಟ್ರದ ನಿರ್ದಿಷ್ಟ ಭವಿಷ್ಯದಲ್ಲಿ ಒಂದುಗೂಡುವ ತತ್ವವನ್ನು ಪ್ರತಿಪಾದಿಸುತ್ತವೆ". ಪರ್ಯಾಯ ದ್ವೀಪದಲ್ಲಿ ಅಮೆರಿಕಾವು ಹೊಂದಿರುವ ನಿಲುವಿನಿಂದ, ಸ್ವತಂತ್ರವಾಗಲು ಬಯಸಿರುವ ದಕ್ಷಿಣ ಕೊರಿಯಾ ಜನತೆಯ ನಿಲುವನ್ನು ಸಮರ್ಥಿಸುವ ಉದ್ದೇಶದ ಸ್ಪಷ್ಟ ಸುಳಿವು ಇದಾಗಿರುವುದರಿಂದ ಈ ಹೇಳಿಕೆ ಪ್ರಮುಖವಾದದ್ದು(ಇದನ್ನು ಟ್ರಂಪ್ ಹೇಗೆ ಸ್ವೀಕರಿಸುವರೋ ಕಾದು ನೋಡಬೇಕಾಗಿದೆ).

ಹಾಗೆಯೇ, 2018 ರ ಅಂತರರಾಷ್ಟ್ರೀಯ ಏಷ್ಯನ್ ಕ್ರೀಡಾಕೂಟಗಳನ್ನು ಜಂಟಿಯಾಗಿ ನಡೆಸುವುದು ಮತ್ತೊಂದು ಮಹತ್ವ ಪೂರ್ಣ ಹೆಜ್ಜೆಯಾಗಿದೆ.

ಜಪಾನಿನಿಂದ ಪಡೆದ ಸ್ವಾತಂತ್ರ್ಯದ ಆಚರಣೆಯ ದಿನವಾದ ಆಗಸ್ಟ್ 15 ರಂದು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಪ್ಪಂದದಲ್ಲಿ ಘೋಷಿಸಲಾಗಿದೆ. ಅವುಗಳಲ್ಲಿ ರಾಷ್ಟ್ರೀಯ ಸಮನ್ವಯತೆ ಮತ್ತು ಏಕತೆಯ ಅರ್ಥವನ್ನು ಪುರುಜ್ಜೀವನಗೊಳಿಸಲು ಎರಡೂ ದೇಶಗಳ ನಡುವೆ ಸಕ್ರಿಯ ಸಹಕಾರ ವಿನಿಮಯ, ಚೀಟಿಗಳು ಮತ್ತು ಎಲ್ಲಾ ಹಂತಗಳಲ್ಲಿ ಸಂಪರ್ಕಗಳನ್ನೂ ಪ್ರೋತ್ಸಾಹಿಸುವುದು ಸೇರಿವೆ.

ಇದಲ್ಲದೆ, ರೈಲ್ವೆಗಳು, ಪೂರ್ವ ಕಾರಿಡರ್‌ನಲ್ಲಿರುವ ರಸ್ತೆಗಳು ಸಿಯೋಲ್ ಮತ್ತು ಸಿನಿಜು ನಗರಗಳ ನಡುವಿನ ಸಂಪರ್ಕಗಳು ಮತ್ತು ಆಧುನಿಕತೆಯ ಕಡೆಗೆ ಪ್ರಾಯೋಗಿಕ ಕ್ರಮಗಳನ್ನು ಅಳವಡಿಸಿಕೊಳ್ಳಲು ಎರಡೂ ಕಡೆಗಳಲ್ಲಿ ಒಪ್ಪಿಗೆ ಸೂಚಿಸಲಾಗಿದೆ.

ಪರಮಾಣು – ನಿಶ್ಸಸ್ತ್ರೀಕರಣಕ್ಕೆ ದೃಢ ಬದ್ಧತೆ

1953 ರಲ್ಲಿ ಕೊರಿಯಾದ ಯುದ್ಧ ಕೊನೆಗೊಂಡಿತ್ತು, ಆಗ ಉತ್ತರ ಕೊರಿಯಾ ಅಮೆರಿಕ ಹಾಗೂ ಚೀನಾದ ನಡುವಿನ 'ಕದನ ವಿರಾಮ' ಏರ್ಪಟ್ಟಿತ್ತು. ಆದಾಗ್ಯೂ, ಶಾಂತಿ ಒಪ್ಪಂದದ ಅನುಪಸ್ಥಿತಿಯಲ್ಲಿ ತಾಂತ್ರಿಕವಾಗಿ ಎರಡು ದೇಶಗಳ ನಡುವಿನ ಯುದ್ಧ ಮಾತ್ರ ನಿಲ್ಲಲಿಲ್ಲ. ಈ ಅನಿಶ್ಚಿತತೆಗೆ ಅಂತ್ಯವಾಡುವ ನಿಟ್ಟಿನಲ್ಲಿ ಎರಡೂ ದೇಶಗಳು ಪರಮಾಣು ನಿಶ್ಶಸ್ತ್ರೀಕರಣಕ್ಕೆ ಒಪ್ಪಿಗೆ ಸೂಚಿಸಿವೆ. ಕೊರಿಯಾದ ಪೆನ್ನಿನ್ಸುಲ್ಲಾದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡಲು ಸಕ್ರಿಯ ಸಹಕಾರವನ್ನೂ ಹೊಂದಿವೆ, ಪರ್ಯಾಯ ದ್ವೀಪದಲ್ಲಿ ಪ್ರಬಲ ಶಾಂತಿ ಆಡಳಿತವನ್ನು ಸ್ಥಾಪಿಸುವ ಒಂದು ಐತಿಹಾಸಿಕ ಗುರಿಗೆ ವಿಳಂಬ ಮಾಡಬಾರದು ಎಂದು ಘೋಷಣೆಯಲ್ಲಿ ಪ್ರತಿಪಾದಿಸಿರುವುದು ಮತ್ತೊಂದು ಪ್ರಮುಖ ಹೆಜ್ಜೆಯಾಗಿದೆ. ಈ ಶಾಂತಿ ಸ್ಥಾಪನೆಗಾಗಿ ಚೀನಾ ಮತ್ತು ಅಮೆರಿಕಾ ದೇಶಗಳೊಂದಿಗೆ ಸಭೆ ನಡೆಸಲು ದೃಢ ನಿರ್ಧಾರ ಕೈಗೊಂಡಿವೆ (ಈಗಾಗಲೇ ಇದೇ ಮೇ ತಿಂಗಳಲ್ಲಿ ಟ್ರಂಪ್ ಮತ್ತು ಕಿಮ್ ಬೇಟಿಯಾಗಲಿದ್ದಾರೆ).

ಆದಾಗ್ಯೂ ಕೊರಿಯಾದ ಪರ್ಯಾಯ ದ್ವೀಪದೊಳಗೆ, ಪರಮಾಣು ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಅಮೆರಿಕದ ಹಡಗುಗಳ ಮತ್ತು ಜಲಾಂತರ್ಗಾಮಿಗಳ ಮೇಲೆ ನಿಷೇಧ ಹೇರುವುದರ ಕುರಿತಂತೆ ಒಪ್ಪಂದದಲ್ಲಿ ಚಕಾರವೆತ್ತಿಲ್ಲ ಎಂಬದೂ ಗಮನಾರ್ಹ.

ಈ ಜಂಟಿ ಘೋಷಣೆಗಳ ಹೇಳಿಕೆಗಳ ನಂತರ, ಶಾಂತಿ ಸಾಧಿಸಲು ಹಿಂದಿನ ಪ್ರಯತ್ನಗಳ ವೈಫಲ್ಯಗಳಿಗೆ ಸಂಬಂಧಿಸಿದಂತೆ ಕಿಮ್ ಹೀಗೆ ಹೇಳಿದ್ದಾರೆ, "ನಾವು ಹಿಂದೆ ಮಾಡಿದ ತಪ್ಪುಗಳನ್ನು ಪುನರಾವರ್ತಿಸುವುದಿಲ್ಲ ಎಂದು ಭಾವಿಸುತ್ತೇವೆ. ಎರಡೂ ಕೊರಿಯಾದ ಜನರು ಸ್ವತಂತ್ರವಾಗಿ ಸಲೀಸಾಗಿ ಓಡಾಡುವಂತೆ ಪರಿಸ್ಥಿತಿ ನಿರ್ಮಿಸುವ ಜವಾಬ್ದಾರಿಯನ್ನೂ ತೆಗೆದು ಕೊಳ್ಳಬೇಕಾಗಿದೆ" ಎಂದರು.

ಅಮೆರಿಕಾ ಮತ್ತು ಜಪಾನ್ ದೇಶಗಳ ಸ್ವಾಗತ

ಜಪಾನ್ ಪ್ರಧಾನಿ ಶಿಂಜೋ ಅಬೆ "ಈ ಇಬ್ಬರು ನಾಯಕರ ಸಭೆಯ ಘೋಷಣೆಗಳು ಉತ್ಸಾಹ ಭರಿತವಾಗಿವೆ ಇದು ಸಕಾರಾತರ್ಮಕ ಸಮಗ್ರ ಕ್ರಮ"ವೆಂದು ಹೊಗಳಿದ್ದಾರೆ. ಟ್ರಂಪ್ "ಕೊರಿಯನ್ ಯುದ್ಧವು ಕೊನೆಗೊಳ್ಳುತ್ತದೆ" ಅಮೆರಿಕದ ಎಲ್ಲಾ ಮಹಾನ್ ಜನರು ಈಗ ಎರಡು ಕೊರಿಯಾಗಳಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಹೆಮ್ಮೆ ಪಡುತ್ತಿದ್ದಾರೆ" ಎಂದಿದ್ದಾರೆ.

ಕೊನೆಯದಾಗಿ, ಕೊರಿಯಾದ ಪರ್ಯಾಯ ದ್ವೀಪದಲ್ಲಿ ಯುದ್ಧಕ್ಕೆ ಅಂತ್ಯ ಹಾಡುವ ಶಾಂತಿ ಸ್ಥಾಪನೆಗಾಗಿ ನಡೆದಿರುವ ಆಶಾದಾಯಕ ಹೆಜ್ಜೆ ಇದಾಗಿದೆ, ಆದಾಗ್ಯೂ ಇದು ಈ ಪ್ರದೇಶದಲ್ಲಿ ಭೌಗೋಳಿಕ–ವ್ಯೂಹಾತ್ಮಕ ಹಿತಾಸಕ್ತಿಗಳಿರುವ ದೇಶಗಳ, ಪ್ರಮುಖವಾಗಿ ಅಮೆರಿಕಾದ ನಡೆ– ನಿಲವು ಹೇಗಿರುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಅಮೆರಿಕ ತನ್ನ ಪರಮಾಣ ಅಸ್ತ್ರ–ಸಜ್ಜಿತ ಯುದ್ಧ–ನೌಕೆ ಮತ್ತು ಮಿಲಿಟರಿ ನೆಲೆಗಳನ್ನು ತೆರವು ಮಾಡುವುದೇ ಎಂಬದು ಪ್ರಮುಖ ಪ್ರಶ್ನೆ. ಜಗತ್ತೇ ಈ ಬೆಳವಣಿಗೆಗಳನ್ನೂ ಸ್ವಾಗತಿಸುತ್ತಿದ್ದರೂ ಸಹ, ಈ ಎರಡೂ ದೇಶಗಳು ತಮ್ಮ ಘೋಷಣೆಗಳನ್ನೂ ಶಾಂತಿಯ ಕಡೆ ಪರಿವರ್ತಿಸುವ ನಿಟ್ಟಿನಲ್ಲಿ ಮುಂದಿರುವ ಸವಾಲುಗಳನ್ನು ಹೇಗೆ ನಿಭಾಯಿಸುತ್ತವೆಂದು ಕಾದು ನೋಡಬೇಕಾಗಿದೆ.

ಈ ಶೃಂಗಸಭೆಯ ಒಂದು ವಾರದ ನಂತರ ಅಧ್ಯಕ್ಷ ಟ್ರಂಪ್ ಕೊರಿಯಾದಲ್ಲಿರುವ ಮಿಲಿಟರಿ ಪಡೆಗಳ ಸಂಖ್ಯೆ ಕಡಿಮೆ ಮಾಡುವ ಅಥವಾ ಪೂರ್ಣವಾಗಿ ಹಿಂತೆಗೆಯುವ ಬಗ್ಗೆ ತಯಾರಿ ನಡೆಸಲು ಆಜ್ಞೆ ಮಾಡಿದ್ದಾರೆ ಎಂದು ವರದಿಯಾಗಿದೆ. ಅಮೆರಿಕನ್ ಸರಕಾರ ಈ ವರದಿಯನ್ನೂ ದೃಢಪಡಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ದ. ಕೊರಿಯಾ ಅಮೆರಿಕನ್ ಪಡೆಗಳ ಅರ್ಧ ಖರ್ಚನ್ನು ಮಾತ್ರ ಕೊಡುತ್ತಿದ್ದು, ಪೂರ್ಣ ಖರ್ಚು ಕೊಡದಿದ್ದರೆ ಪಡೆಗಳನ್ನು ಹಿಂತೆಗೆಯಬೇಕು ಎಂಬ ತಮ್ಮ ಇಂಗಿತ ವ್ಯಕ್ತಪಡಿಸಿದ್ದರು ಎನ್ನಲಾಗಿದೆ. ಮುಂಬರುವ ಕಿಮ್ ಜತೆಗಿನ ಶೃಂಗಸಭೆಗೆ ಇದು ಒಂದು ಸೂಚಕವೂ ಆಗಿರಬಹುದು ಎಂದು ಊಹಿಸಲಾಗಿದೆ. •

JANASHAKTHI KANNADA VARA PATRIKE MAY 14-20, 2018 Price: Rs. 10/- Date of Publication: 11 MAY 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ದುಡಿಯುವ ಜನರ ದನಿ ವಿಧಾನಸಭೆಯಲ್ಲಿ ಮೊಳಗಿಸಲು ಅಂತಿಮ ಘಟ್ಟದ ಚುನಾವಣಾ ಪ್ರಚಾರ



























JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**